# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಡಿಸೆಂಬರ್, ೨೦೨೦** **ಸಂಪಾದಕ : ಡಿ.ಎಸ್. ನಾಗಭೂಷಣ** **ಸಂಪುಟ: ೯ ಸಂಚಿಕೆ: ೧೧**

**ಚಂದಾ ರೂ. ೨೦೦/– (ಅಕ್ಟೋಬರ್‌ನಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/– ಪುಟ: ೨೦ ಬೆಲೆ: ರೂ. ೨೫/–**


**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇತ್ತೀಚೆಗೆ ಯೂ–ಟ್ಯೂಬ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಭಾಷಣವೊಂದನ್ನು ಕೇಳುತ್ತಿದ್ದೆ. ಅದು ಭಾರತದಲ್ಲಿ ಬಂಡವಾಳ ಹೂಡಲು ವಿದೇಶಿ ಬಂಡವಾಳಿಗರನ್ನು ಉದ್ದೇಶಿಸಿ ಮಾಡಿದ್ದ ಭಾಷಣ. ಆದರಲ್ಲಿ, ಬಂಡವಾಳ ಹೂಡಲು ಭಾರತದಲ್ಲಿ ಯಾವೆಲ್ಲ ಅನುಕೂಲ–ಸೌಲಭ್ಯಗಳಿವೆ ಎಂದು ಅವರು ವಿವರಿಸುತ್ತಾ ಇಲ್ಲಿ ತುಡಿಯುವ ಪ್ರಜಾಪ್ರಭುತ್ವವಿದೆ ಎಂದಾಗ ನಗೆ–ವಿಷಾದಗಳೆರಡೂ ಉಂಟಾದವು. ಕಾರಣ, ಇದು ಪೂರ್ಣ ಸತ್ಯವಲ್ಲ ಎನಿಸಿದ್ದು. ಇದು ಬಂಡವಾಳ ಹೂಡಬಲ್ಲ ದೇಶಗಳಿಗೂ ಗೊತ್ತು. ಮಾನವ ಹಕ್ಕುಗಳ ಜಾಗತಿಕ ಸಂಸ್ಥೆಗಳೂ ಇದನ್ನೇ ಹೇಳುತ್ತಿವೆ

ಹೊರಗಿನ ಸಂಸ್ಥೆಗಳ ವರದಿ ವಿಶ್ವಾಸಾರ್ಹವಲ್ಲ ಎಂದೇ ಇಟ್ಟುಯೊಂಡರೂ, ಅಯೋಧ್ಯಾ ವಿವಾದದ ಮತ್ತು ಬಾಬ್ರಿ ಮಸೀದಿ ಧ್ವಂಸ ಕುರಿತ ತೀರ್ಪುಗಳ ನಂತರ ಈ ದೇಶದ ಮುಸ್ಲಿಂ ಸಮುದಾಯದಲ್ಲಿ ಉಂಟಾಗಿರುವ ಭಾವನೆ ಮತ್ತು ಚುನಾವಣಾ ಬಾಂಡ್, ೩೭೦ನೇ ವಿಧಿಯ ರದ್ದತಿ, ಕಾಶ್ಮೀರದ ಪ್ರಜೆಗಳ ಹೇಬಿಯಸ್ ಕಾರ್ಪಸ್ ಅರ್ಜಿಗಳು, ಪೌರತ್ವ ತಿದ್ದುಪಡಿ ಕಾಯಿದೆ ಜಾರಿ, ಆರ್ಥಿಕವಾಗಿ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿ ಜಾರಿ ಇತ್ಯಾದಿ ಬಹಳ ರಾಷ್ಟ್ರೀಯ ಮಹತ್ವದ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳುವಲ್ಲಿ ನಮ್ಮ ಸರ್ವೋಚ್ಚ ನ್ಯಾಯಾಲಯ ತೋರದಿರುವ ತುರ್ತು, ಸರ್ಕಾರ ಇಷ್ಟಪಡದ ನಡಾವಳಿ ಪ್ರಕರಣಗಳಲೆಲ್ಲ ದೇಶದ್ರೋಹದ ಕಾಯಿದೆ ಬಳಸಿ ಜನರನ್ನು ಹಿಂಸಿಸುವುದು, ಅಕ್ರಮ ಚಟುವಟಿಕೆ ತಡೆ ಕಾಯಿದೆ ಬಳಸಿ ಆಪಾದಿತರನ್ನು ವರ್ಷಗಟ್ಟಲೆ ವಿಚಾರಣೆ ಇಲ್ಲದೆ ಸೆರೆಮನೆಗಳಲ್ಲಿ ಕೊಳೆಯಿಸುವುದು ಇತ್ಯಾದಿ ಅಂಶಗಳು ಪ್ರಜಾಪ್ರಭುತ್ವದ ಜೀವಾಳವಾದ ನ್ಯಾಯದಾನ ವ್ಯವಸ್ಥೆ ಬಗ್ಗೆ ಜನರಲ್ಲಿ ಮೂಡುತ್ತಿರುವ ಹತಾಶೆ. ಇವೆಲ್ಲ ಖಂಡಿತ ತುಡಿಯುವ ಪ್ರಜಾಪ್ರಭುತ್ವದ ಲಕ್ಷಣಗಳಲ್ಲ. ಇನ್ನು ಚುನಾವಣಾ ಆಯೋಗ, ಕೇಂದ್ರ ಜಾಗೃತ ಆಯೋಗ, ಸಿಬಿಐ, ಜಾರಿ ನಿರ್ದೇಶನಾಲಯ, ರಾಷ್ಟ್ರೀಯ ತನಿಖಾ ಸಂಸ್ಥೆಗಳನ್ನು ಆಡಳಿತ ಪಕ್ಷದ ವಿರೋಧಿಗಳನ್ನು, ವಿಶೇಷವಾಗಿ ಚುನಾವಣೆಗಳ ಸಂದರ್ಭಗಳಲ್ಲಿ ಮಣಿಸಲು ಬಳಸುತ್ತಾ ಅವುಗಳ ಸ್ವಾಯತ್ತತೆಯನ್ನು ನಾಶ ಮಾಡುತ್ತಿರುವ ರೀತಿಗಳು ಎದ್ದು ಕಾಣುವಂತಿವೆ. ಇವೆಲ್ಲ ಪ್ರಜಾಪ್ರಭುತ್ವ ಕುರಿತ ಶುಭವಾರ್ತೆಗಳೇನಲ್ಲ.

ಇವೆಲ್ಲ ಅಭಿಪ್ರಾಯದ ಮಾತುಗಳು ಎಂದುಕೊಂಡರೂ. ಸ್ವತಃ ಮೋದಿಯವರ ನಾಯಕತ್ವದ ಭಾಜಪದ ರಾಜಕೀಯ ವರ್ತನೆ ಪ್ರಜಾಪ್ರಭುತ್ವದ ನೀತಿ ನಿಯಮಗಳ ಪಾಲನೆಯ ವಿಷಯದಲ್ಲಿ ಎಷ್ಟು ಪ್ರಾಮಾಣಿಕ ಎಂದು ಹೇಳುವ ಅವಶ್ಯಕತೆಯೇ ಇಲ್ಲ. ಗೋವಾದಲ್ಲಿ ಅಧಿಕಾರ ಹಿಡಿದ, ಕರ್ನಾಟಕ ಮತ್ತು ಮಧ್ಯಪ್ರದೇಶಗಳ ಸರ್ಕಾರಗಳನ್ನು ಉರುಳಿಸಿದ, ರಾಜಸ್ಥಾನ ಮತ್ತು ಮಹಾರಾಷ್ಟ ಸರ್ಕಾರಗಳನ್ನು ಉಳರುಳಿಸಲು ಭಾಜಪ ಬಳಸಿದ/ಬಳಸುತ್ತಿರುವ ಮಾರ್ಗಗಳನ್ನು ಯಾರೂ ತುಡಿಯುವ ಪ್ರಜಾಪ್ರಭುತ್ವದ ಲಕ್ಷಣಗಳೆನ್ನಲಾರರು. ಇವುಗಳ ಪರಿಣಾಮಗಳನ್ನು ನಾವು ಉದಾಹರಣೆಯಾಗಿ ಕರ್ನಾಟಕದಲ್ಲಿ ನೋಡುತ್ತಿದ್ದೇವೆ. ಚುನಾವಣಾ ಯಶಸ್ಸಿಗಾಗಿ ಸಾರ್ವಜನಿಕರ ತೆರಿಗೆ ಹಣ ಸರ್ಕಾರ ನಡೆಸುವವರ ಅಪ್ಪಂದಿರ ಮನೆಯ ಆಸ್ತಿಯಂತೆ ಬಳಸಿ ಹೊಸ ಹೊಸ ನಿಗಮ ಮಂಡಳಿಗಳನ್ನು ಹುಟ್ಟು ಹಾಕುತ್ತಾ, ಸಾರ್ವಜನಿಕ ಜವಾಬ್ದಾರಿಯ ಸಚಿವ ಮತ್ತು ಇತರ ಅಧಿಕಾರ ಸ್ಥಾನಗಳನ್ನು ಹಣ ಮತ್ತು ಜಾತಿ ಬಲಗಳಿಗೆ ಹರಾಜು ಹಾಕಲಾಗುತ್ತಿದೆ. ಇದನ್ನು ಯಾರೂ ಕೇಳುವವರೂ ಇಲ್ಲ. ದಿನಕ್ಕೆ ಒಂದೆರಡಾದರೆ ಕೇಳಬಹುದು. ಇದು ದಿನ ನಿತ್ಯದ ವ್ಯವಹಾರವಾದರೆ ಕೇಳುವವರೇ ನಗೆಪಾಟಲಿಗೆ ಈಡಾದಾರು. ಪ್ರಜಾಪ್ರಭುತ್ವದ ದೊಡ್ಡ ದುರಂತವೆಂದರೆ ಇದಕ್ಕೆಲ್ಲ ಪ್ರಜೆಗಳೇ ದದ್ದು ಬಿದ್ದು, ಹೊಂದಿಕೊಂಡು ಹೋಗಿರುವುದು. ಅಂದರೆ ಈ ಅನೈತಿಕ ನಡಾವಳಿಗೆ ಪ್ರಜೆಗಳ ಒಪ್ಪಿಗೆ ಮಾತ್ರವಲ್ಲ ಅವರೂ ಸಕ್ರಿಯವಾಗಿ ಭಾಗವಹಿಸತೊಡಗಿದ್ದಾರೆ. ಇದು ಇತ್ತೀಚಿನ ಉಪಚುನಾವಣೆಗಳಲ್ಲಿ ಸಾಬೀತಾಗಿದೆ. ಪ್ರಜಾಪ್ರಭುತ್ವ ಎಂದರೆ ಅಧಿಕಾರ, ಹಣ ಮತ್ತು ಜಾತಿಬಲಗಳ ಆಟ ಎನ್ನುವಂತಾದಾಗ ಆಡಳಿತವಾದರೂ ಹೇಗಿರುತ್ತದೆ? ಈಗ ಕಾಣುತ್ತಿರುವಂತೆ ಸಿಕ್ಕವರಿಗೆ ಸೀರುಂಡೆಯ ಆಟ!

ಆದರೆ ಇದಕ್ಕೆಲ್ಲ ಮೋದಿ ಮತ್ತು ಭಾಜಪವನ್ನು ದೂಷಿಸುವುದು ಅರ್ಧ ಸತ್ಯದ ಮಾತು ಮಾತ್ರ ಆಗುತ್ತದೆ. ಮೊದಲಾಗಿ ಪ್ರಜಾಪ್ರಭುತ್ವ ಭಾಜಪದ ಹುಟ್ಟುಗುಣವೇನಲ್ಲ. ಆದರೆ ಜನ ಇದನ್ನೆಲ್ಲ ನೋಡಿಯೂ ಅದಕ್ಕೇ ಹೊಂದಿಕೊಂಡು ಬೆಂಬಲಿಸುತ್ತಿರಲು ಮುಖ್ಯವಾಗಿ ಎರಡು ಕಾರಣಗಳಿವೆ. ಜಾಗತೀಕರಣದ ಲೌಕಿಕ ಲಾಭಗಳು ಬಡತನದಲ್ಲೇ ಬೆಳೆದ ಭಾರತದಂತಹ ದೇಶಗಳ ಜನತೆಯನ್ನು ಪ್ರಜಾಪ್ರಭುತ್ವದ ಕೇಂದ್ರ ಮೌಲ್ಯವಾದ ಮಾನವ ಘನತೆಯ ಅರಿವೇ ಇರದೆ ಲೌಕಿಕ ಲಾಭ–ನಷ್ಟಗಳ ಲೆಕ್ಕಾಚಾರದಲ್ಲಷ್ಟೇ ಮುಳುಗಿರುವಷ್ಟು ಮೈಮರೆಸಿರುವುದು. ಜೊತೆಗೆ ಈಗ ನಿಧಾನವಾಗಿ ಅರಿವಿಗೆ ಬರುತ್ತಿರುವಂತೆ, ವ್ಯಕ್ತಿ ಮತ್ತು ಸಾಮಾಜಿಕ ಘನತೆಯ ಹಲವು ಮೌಲ್ಯಗಳ ಬೆಲೆ ತೆರುವಂತೆ ಮಾಡಿರುವ ಜಾಗತೀಕರಣದ ಸುಖ ಸೌಕರ್ಯಗಳನ್ನು ಈ ದೇಶಕ್ಕೆ ತಂದ ಕಾಂಗ್ರೆಸ್ ಈ 'ಸಾಧನೆ'ಯ ಅಮಲಿನಲ್ಲಿ ನಡೆಸಿದ ವ್ಯಾಪಕ ಭ್ರಷ್ಟಾಚಾರ, ಕುಟುಂಬ ರಾಜಕಾರಣ ಮತ್ತು ಮೃದು ಮತೀಯವಾದವೂ ಸೇರಿದಂತೆ ಪ್ರಜಾಪ್ರಭುತ್ವದ ಅಪಮೌಲ್ಯೀಕರಣವನ್ನೂ ಕಂಡಿರುವ ಜನ ಆಡಳಿತದಲ್ಲಿ ಯಾರಿದ್ದರೇನು ಎಂಬ ರಾಜಕೀಯ ಔದಾಸೀನ್ಯವನ್ನು ಬೆಳೆಸಿಕೊಂಡುಬಿಟ್ಟಿರುವುದು. ಪ್ರಜೆಗಳನ್ನು ಈ ಅಪಾಯಕಾರಿ ಔದಾಸೀನ್ಯದಿಂದ ಹೊರತರಬಲ್ಲ ತಾಕತ್ತನ್ನು ಮೇಲೆ ಹೇಳಿದ ತನ್ನ ದುರ್ಗುಣಗಳ ಬಗ್ಗೆ ಕಿಂಚಿತ್ತೂ ಪಶ್ಚಾತ್ತಾಪ ಹೊಂದಿರುವಂತೆ ತೋರದ ಕಾಂಗ್ರೆಸ್‌ಗೆ ಇಲ್ಲವಾಗಿದೆ. ಹಾಗೆ ನೋಡಿದರೆ ಅದೊಂದು, ತನ್ನ ಉಜ್ವಲ ಚರಿತ್ರೆಯನ್ನು; ಹಾಗಾಗಿ ಚಾರಿತ್ರ್ಯವನ್ನೂ ಕಳೆದುಕೊಂಡ ಪಕ್ಷವಾಗಿದೆ. ಆ ಅರಿವು ಅದಕ್ಕೆ ಬರುವವರೆಗೂ ಅದಕ್ಕೆ ಮತ್ತು ಈ ದೇಶಕ್ಕೆ ರಾಜಕೀಯ ಮುಕ್ತಿಯಿಲ್ಲ.

ಮೊದಲಿಗೆ ಕಾಂಗ್ರೆಸ್ ತಾನು ಒಂದು ರಾಜಕೀಯ ಪಕ್ಷದಂತೆ ಕಾಣದೆ, ರಾಷ್ಟ್ರ ಮಟ್ಟದಲ್ಲಿ ನೆಹರೂ ಕುಟುಂಬಕ್ಕೆ ಮತ್ತು ರಾಜ್ಯಗಳಲ್ಲಿ ಕೆಲ ಸಾಮಂತ ನಾಯಕರಿಗೆ ನಿಷ್ಠರಾಗಿರುವ ದಲ್ಲಾಳಿ ಚೇಲಾಗಳ ಗುಂಪಿನಂತೆ ಕಾಣುತ್ತಿರುವುದೇಕೆ ಎಂದು ಯೋಚಿಸಬೇಕು. ಇಂದು ಭಾಜಪ ಪೂರ್ಣ ಬೆಳೆದು ಅಧಿಕಾರದ ಕೇಂದ್ರಕ್ಕೆ ಬಂದು ಅದಕ್ಕೆ ಅಧಿಕಾರದ ರುಚಿ ಹತ್ತಿದ ಮೇಲೆ ರಾಷ್ಟ್ರದ ರಾಜಕಾರಣದ ಸ್ವರೂಪ ನಿರ್ಣಾಯಕವಾಗಿ ಬದಲಾಗಿದೆ. ಹಳೆಯ ಚಿಲ್ಲರೆ ಪಟ್ಟುಗಳು ಈಗ ನಡೆಯುವುದಿಲ್ಲ. ಒಂದು ಪಕ್ಷವಾಗಿ ಭಾಜಪಕ್ಕೆ ಅದರ ಎಲ್ಲ ನೆಲೆಗಳಲ್ಲಿ ಸಮನಾಗಿ ನಿಲ್ಲುವ ಪಕ್ಷವನ್ನು ಕಟ್ಟುವ ಹಾಗೆ ಮೈ ಬಗ್ಗಿಸುವ ಕೆಲಸವನ್ನು ಕಾಂಗ್ರೆಸ್ ಮಾಡಬೇಕು. ಅದಕ್ಕೆ ಮುಖ್ಯವಾಗಿ, ಈಗಿನಂತೆ ಅವಕಾಶ ತೆರೆದೊಡನೆ ಪಕ್ಷ ಬಿಟ್ಟು ಓಡಿಹೋಗುವುದನ್ನು, ಅವಕಾಶವಾದಿ ಮೈತ್ರಿಗೆ ಹಾತೊರೆಯುವುದನ್ನು ತಡೆಯಬಲ್ಲ ತನ್ನ ಸದಸ್ಯರನ್ನು ಭಾವನಾತ್ಮಕವಾಗಿ ಸೆಳೆದಿಟ್ಟುಕೊಳ್ಳಬಲ್ಲ ಒಂದು ಕೇಂದ್ರ ತತ್ವವನ್ನು ಅದು ರೂಪಿಸಿಕೊಳ್ಳಬೇಕು. ತನ್ನ ಹಿಂದಿನ ಹೆಮ್ಮೆಯ ಪರಂಪರೆಯ ಪ್ರತೀಕಗಳಾಗಿದ್ದ ಮಹಾತ್ಮ ಗಾಂಧಿ ಮತ್ತು ನೆಹರೂ ಅವರನ್ನು ಈ ಕಾಲಕ್ಕೆ ಪುನರನ್ವೇಷಿಸಿಕೊಳ್ಳಲು ಸಾಧ್ಯವೆ? ಪರಿಶೀಲಿಸಬೇಕು. ಇದಕ್ಕೆ ಒಂದು ಬೌದ್ಧಿಕ ಹಸಿವು ಮತ್ತು ಪ್ರತಿಭೆ ಹಾಗೂ ಪ್ರಯೋಗಶೀಲತೆಯ ಸಾಹಸದ ಗುಣ ಬೇಕು. ಅದಕ್ಕಾಗಿ ಅದು ಹೊಸ ನೀರು ಪಕ್ಷಕ್ಕೆ ಹರಿಯುವಂತೆ, ಒಳಗಿನ ನಿಂತ ನೀರನ್ನೆಲ್ಲ ಖಾಲಿ ಮಾಡಬೇಕು. ಕಳೆದ ಆರೇಳು ವರ್ಷಗಳಲ್ಲಿ ಭಾಜಪದಲ್ಲಿ ಮತ್ತು ಕಾಂಗ್ರೆಸ್‌ನಲ್ಲಿ ರೂಪುಗೊಂಡ ಹೊಸ ನಾಯಕರೆಷ್ಟು ಎಂಬುದನ್ನು ಗಮನಿಸಿದರೇ ಇದು ಅರ್ಥವಾಗುತ್ತದೆ. ಕಾಂಗ್ರೆಸ್‌ನಲ್ಲೂ ಯುವ ನಾಯಕರು ಹುಟ್ಟಿಕೊಂಡಿದ್ದಾರೆ ಆದರೆ ಅವರೆಲ್ಲ ಆ ಪಕ್ಷದ ಹಿರಿಯ ನಾಯಕರ ಮಕ್ಕಳಷ್ಟೇ. ಹೀಗಾಗಿ ಕಾಂಗ್ರೆಸ್ ಭಾಜಪದಿಂದ ಕಲಿಯಬೇಕಾದ ಹಲವು ಪಾಠಗಳಿವೆ.

ಕೊನೆಯಲ್ಲಿ ಒಂದು ಮಾತು. ಅಮೆರಿಕಾದ ಚುನಾವಣೆಯಲ್ಲಿ ಮೋದಿಯವರ ಗೆಳೆಯ ಟ್ರಂಪ್ ಸೋತಿದ್ದಾರೆ. ಡೆಮೋಕ್ರಾಟಿಕ್ ನಾಯಕ ಜೋ ಬೈಡನ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಹಾಗಾಗಿ ಪ್ರಜಾಪ್ರಭುತ್ವದ ಮೌಲ್ಯಗಳೊಂದಿಗೆ ಮೋದಿ ಸರ್ಕಾರ ಅಷ್ಟು ಸುಲಭವಾಗಿ ಚೆಲ್ಲಾಟ ಆಡುವಂತಿಲ್ಲ. ಜೊತೆಗೆ ಇತ್ತೀಚೆಗೆ ಅಂತಾರಾಷ್ಟ್ರೀಯ ಅಧಿಕಾರ ಕೇಂದ್ರಗಳ ಸಮೀಕರಣ ಬದಲಾಗಿ ಮೋದಿಯವರ ಅಂತಾರಾಷ್ಟ್ರೀಯ ಸ್ಥಾನಮಾನ ಕುಗ್ಗಿದೆ. ಈ ಸರ್ಕಾರದ ಹಿರಿಯಣ್ಣನ ನೀತಿಯಿಂದಾಗಿ ನಮ್ಮ ನೆರೆಹೊರೆಯ ದೇಶಗಳು ಕೆರಳಿವೆ. ರೈತರು, ಕಾರ್ಮಿಕರು ಭಾಜಪದ ಅವಾಂತರಗಳ ಬಗ್ಗೆ ಎಚ್ಚೆತ್ತಿದ್ದಾರೆ. ಬ್ಯಾಂಕೋದ್ಯಮವನ್ನು ಕಾರ್ಪೋರೇಟ್ ವಲಯಕ್ಕೆ ತೆರೆಯಲು ಸಿದ್ಧತೆಗಳು ನಡೆದಿವೆ. ಕಾಂಗ್ರೆಸ್ ಎಚ್ಚರಗೊಳ್ಳಲು ಇದು ಸಕಾಲ.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನವೆಂಬರ್ ತಿಂಗಳ ಸಂಚಿಕೆಯ ಸಂಪಾದಕೀಯ ಮತ್ತು ವಂದನಾ ಶಿವರವರ ಲೇಖನ ತಲ್ಲಣವನ್ನುಂಟು ಮಾಡಿದವು. ಸಂಪಾದಕೀಯ ಮೇಲ್ನೋಟಕ್ಕೆ ಭಾಷೆಯ ದುಸ್ಥಿತಿಯಿಂದ ಶುರುವಾಗಿ ಕೇಂದ್ರ ಸರ್ಕಾರ ತಂದೊಡ್ಡಿರುವ ದುರವಸ್ಥೆ , ಈ ದುರವಸ್ಥೆಯನ್ನು ಸಂಭ್ರಮಿಸಿ ತಮ್ಮ ರಾಜ್ಯದಲ್ಲಿ ಜಾರಿಗೆ ತರುತ್ತಿರುವ ಯೋಗಿ(?!)ಯವರ ಪ್ರಸ್ತಾಪದೊಂದಿಗೆ ಮುಗಿಯುವಂತೆ ಕಂಡರೂ, ಭಾಷೆಯ ದುರವಸ್ಥೆ , ಜನರ ಕೊಳ್ಳುಬಾಕ ಸಂಸ್ಕೃತಿ, ಸರ್ಕಾರಗಳ ವಿವೇಚನಾರಹಿತ ಯೋಜನೆಗಳ ಜಾರಿ, ಅರಾಜಕ, ಹಿಂಸ್ರಕ ಆಡಳಿತ ಇವೆಲ್ಲ ಹೇಗೆ ಒಂದರೊಡನೊಂದು ಬೆಸೆದುಕೊಂಡಿರುತ್ತವೆ ಮತ್ತು ಅವುಗಳನ್ನು ಬಿಡಿಯಾಗಿ ವಿವರಿಸಿದರೂ, ಇಡಿಯಾಗಿಯೇ ಗ್ರಹಿಸಿ ನೋಡಬೇಕೆಂಬುದನ್ನು ಸೂಚಿಸುವಂತಿದೆ.

ಭಾಷೆಯ ದುರವಸ್ಥೆ ಆ ಕಾಲದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಕ್ರಿಯೆಗಳ ಫಲಿತಾಂಶ ಆಗಿರುತ್ತದೆ ಎಂಬುದನ್ನು ಓದುಗರು ಗಮನಿಸುವಂತಿದೆ. ಬಹುತೇಕ ಕ್ಲೀಷೆಯಿಂದ ಕೂಡಿರುವ 'ನವೆಂಬರ್ ಸಂಪಾದಕೀಯ'ಗಳಿಗಿಂತ ನಿಮ್ಮ ಈ ಸಂಪಾದಕೀಯ ಸಂಕಟ, ತಲ್ಲಣ, ಸ್ಪಷ್ಟತೆಯಿಂದ ಕೂಡಿದ ಬರಹವಾಗಿದೆ.

– ಶ್ರೀಕಾಂತ, **ಕೊಟ್ಟೂರು**

ನವೆಂಬರ್ ಸಂಚಿಕೆಯ ಒಂದು ಪುಟದ ಸಂಪಾದಕೀಯ ಬರಹದಲ್ಲಿ ಕನ್ನಡ ಭಾಷೆಯ ಸ್ಥಿತಿಗತಿಯಿಂದದ ಪ್ರಾರಂಭಿಸಿ ಅಮೇರಿಕದ ಸೋತ ಅಧ್ಯಕ್ಷ ಟ್ರಂಪ್‌ನವರೆಗೆ ವ್ಯಾಪಿಸಿ ಬದುಕಿನ ಎಲ್ಲ ಆಯಾಮಗಳನ್ನು ವಿಶ್ಲೇಷಿಸಿ ಒಳಿತು–ಕೆಡಕುಗಳನ್ನು ಅನುಮಾನಕ್ಕೆಡೆಯಿಲ್ಲದಂತೆ ಗುರುತಿಸಿ ಓದುಗರನ್ನು ಚಿಂತನೆಗೊಡ್ಡಿ ಮೌನಕ್ಕೆ ಜಾರುವಂತೆ ಮಾಡುತ್ತದೆ. ಓದುಗನನ್ನು ಆತ್ಮ ವಿಮರ್ಶೆಗೊಳಪಡಿಸುತ್ತದೆ. ಹೀಗೆ ಆತ್ಮಾವಲೋಕನೆಗೊಳಪಟ್ಟ ಓದುಗ ತನ್ನ ಬದುಕಿನ ದಾರಿಯಲ್ಲಿ ಪರಿವರ್ತನಶೀಲನಾದಾಗ ಮಾತ್ರ ಸಂಪಾದಕರ ಶ್ರಮ ಸಾರ್ಥಕವಾಗಬಹುದು.

**–ಅಜ್ಜಪ್ಪ ಬಿರಡಿ,** ಗೋಕಾಕ

ನವೆಂಬರ್ ಸಂಚಿಕೆಯ ಕನ್ನಡದ ಬಗೆಗಿನ ಎರಡು ಲೇಖನಗಳು ನನ್ನ ಗಮನ ಸೆಳೆದಿವೆ. ಬಂಜಗೆರೆ ಜಯಪ್ರಕಾಶರು ತಾತ್ವಿಕವಾಗಿ, ಕಾವ್ಯಮಯವಾಗಿ ಕನ್ನಡ ಹಾಗೂ ಕನ್ನಡಿಗರ ಸ್ಥಿತಿಗತಿಗಳನ್ನು ಚಿತ್ರಿಸಿ ಸ್ವಾರಸ್ಯಕರ, ಕುತೂಹಲಕರ ಓದನ್ನು ಒದಗಿಸಿದ್ದಾರೆ. ಆದರೆ ಕನ್ನಡ, ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗಳು ಎಲ್ಲರಿಗೂ ತಿಳಿದದ್ದೇ; ಇಂಥ ಕಠಿಣ ಸಂದರ್ಭದಲ್ಲಿ ನಿಜಕ್ಕೂ ವಿಧಾಯಕವಾಗಿ ನಾವು, ನಮ್ಮ ಸರಕಾರಗಳು ಅಥವಾ ಕನ್ನಡಪರ ಸಂಘಟನೆಗಳು ಮಾಡಬೇಕಾದುದೇನು ಎಂಬ ಬಗ್ಗೆ ಖಚಿತವಾದ ಸಲಹೆ, ಸೂಚನೆ, ಕಾರ್ಯಕ್ರಮಗಳನ್ನು ನೀಡದಿದ್ದಲ್ಲಿ ಯಾವುದೇ ಲೇಖನ ನನ್ನಂಥವರ ಪಾಲಿಗೆ ನಿರುಪಯುಕ್ತವೆನಿಸುತ್ತದೆ.

'ಶಾಸ್ತ್ರೀಯ'ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರ ಜೊತೆಗಿನ ಸಂದರ್ಶನದಲ್ಲಿ ಕನ್ನಡವನ್ನು ಜನಪರ, ಜನೋಪಯೋಗಿ ಮಾಡುವ ಯಾವ ನಿರ್ದಿಷ್ಟ ಯೋಜನೆಗಳ ಪ್ರಸ್ತಾವವೂ ಕಂಡುಬರದೆ ನಿರಾಸೆ ಮೂಡಿದೆ. ಶಾಸ್ತ್ರೀಯ ಅನ್ನುವ ಪದ ಬಳಕೆಯನ್ನು ನಿರ್ದೇಶಕರು ಯಾಕೆ ಮುಂದುವರಿಸುತ್ತಿದ್ದಾರೆ? ಜಗತ್ತಿನ ಎಲ್ಲ ಭಾಷೆಗಳೂ ಶಾಸ್ತ್ರೀಯವೇ. ಶಾಸ್ತ್ರರಹಿತ ಭಾಷೆಯಿಲ್ಲ! 'ಕ್ಲಾಸಿಕಲ್' ಎಂಬ ಪದಕ್ಕೆ ಸಂವಾದಿಯಾಗಿ 'ಅಭಿಜಾತ' ಎಂಬ ಹೆಚ್ಚು ಸಮಂಜಸವಾದ ಪದ ಇದ್ದು ಅದನ್ನೇಕೆ ಬಳಸುತ್ತಿಲ್ಲ?

'ಧರ್ಮವಿಚಾರ ಪುಟ'ದಲ್ಲಿನ 'ಕನ್ನಡ ದಾಸ ದರ್ಶನ' ಬೇರೆಲ್ಲೋ ಅಚ್ಚಾಗಬೇಕಾದದ್ದು ತಪ್ಪಿ ಇಲ್ಲಿ ಬೆಳಕು ಕಂಡಂತಿದೆ! ಕವಿಯೊಬ್ಬ ತಾನು ಕಟ್ಟಿದ ಸೌಧಕ್ಕೆ ತಾನೇ ಕೊಳ್ಳಿ ಇಟ್ಟಂತಿದೆ ಮಮತಾ ಅರಸೀಕೆರೆ ಅವರ 'ಹಿಂಚಲನೆ' ಕವಿತೆ! "ಮಾತು ವ್ರಣ, ಮೌನ ಕನ್ನಡಿ" ಈ ಸಾಲುಗಳು ಪವಿತ್ರ ಪ್ರಿಯಭಾಷಿಣಿಯವರ 'ಈಚೆಗೆ ನನ್ನ ಮೌನ' ಕವನಕ್ಕೆ ಕಳಶ ಪ್ರಾಯವಾಗಿವೆ. ಈ ಬಗೆಯ ಸಾಲುಗಳೇ ತುಂಬಿಕೊಂಡಾಗ ಕವಿತೆ ಎತ್ತರಕ್ಕೆ ಏರುತ್ತದೆ.

**–ಮಹಾಬಲೇಶ್ವರ ರಾವ್,** ಉಡುಪಿ

ನವೆಂಬರ್ ಸಂಚಿಕೆ ಓದಿದೆ. ಬೆಂಗಳೂರಿನಲ್ಲಿ ಅದೆಷ್ಟೋ ವರುಷಗಳಿಂದ ವಾಸವಾಗಿದ್ದರೂ ಕನ್ನಡ ಕಲಿಯಲಾಗದಷ್ಟು ಜನಸಂಪರ್ಕ ಕಳೆದುಕೊಂಡ ರಾಮಚಂದ್ರ ಗುಹಾ ಅವರ ಮುಸಲೋನಿ–ನರೇಂದ್ರ ಮೋದಿ ಅವರನ್ನು ಹೋಲಿಸಿ ಬರೆದ ಲೇಖನ ಓದಿ ನಗು ಬಂತು. ಅಂತೆಯೇ ವಂದನಾ ಶಿವ ಅವರು ಬಿಲ್ ಗೇಟ್ಸ್ ಬಗ್ಗೆ ಬರೆದ ಲೇಖನ ಅವರಿಗೆ ಗೇಟ್ಸ್ ಬಗ್ಗೆ ಇರುವ ದ್ವೇಷ ಎದ್ದು ಕಾಣುತ್ತದೆ. ಇವೆಲ್ಲವೂ ಏಕಪಕ್ಷೀಯ ಕಥನನಗಳು. ಇನ್ನು ನಿಮ್ಮ ಸಂಪಾದಕೀಯ, ಗೀತಾ ವಸಂತ ಅವರ 'ಕನ್ನಡ ದಾಸ ದರ್ಶನ' ಸಂತೋಷ್ ಚೊಕ್ಕಾಡಿಯವರು ಕನ್ನಡ ಶಾಸ್ತ್ರೀಯ ಉನ್ನತ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಶಿವರಾಮಶೆಟ್ಟಿವರೊಡನೆ ನಡೆಸಿರುವ ಸಂದರ್ಶನ, ವಿಜಯೇಂದ್ರ ಪಾಟೀಲರ 'ಈ ಕನ್ನಡವನ್ನು ಏನು ಮಾಡಬೇಕು?' ಎಂಬ ವಿನೋದಮಯ ಬರಹ, ಅರಸು ಕುರಿತ ಪುಸ್ತಕದ ನಿಮ್ಮ ಅವಲೋಕನ ಓದುವಂತಿವೆ.

**–ಜಯವಂತ ಕಾಮತ್,** ಬೆಂಗಳೂರು

**ಡಿ.ಎಸ್. ನಾಗಭೂಷಣ** ಅವರ

**ಗಾಂಧಿ ಕಥನ**




೨೧ನೇ ಮುದ್ರಣಕ್ಕೆ ಸಜ್ಜಾಗುತ್ತಿದೆ.

೭೨೨ ಪುಟಗಳ ಈ ಪುಸ್ತಕದ ಬೆಲೆ ರೂ. ೩೮೦/–

ರಿಯಾಯ್ತಿ ದರದ ಬಿಡಿ ಪ್ರತಿಗಳಿಗಾಗಿ ಸಂಪರ್ಕಿಸಿ:

**೯೪೪೮೧೩೫೧೦೮೬**

ಹತ್ತಕ್ಕಿಂತ ಹೆಚ್ಚು ಪ್ರತಿಗಳಿಗಾಗಿ: **೭೨೦೪೬೬೦೬೧೭**

**–ಎಂ, ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು**

ನವೆಂಬರ್ ಸಂಚಿಕೆಯನ್ನು ಕಣ್ಣಾಡಿಸಿದಾಗ ಒಂದು ಪಂಥ ಅಥವಾ ಸಿದ್ಧಾಂತಕ್ಕೆ ಬದ್ಧರಾಗಿರುವ ಲೇಖಕ/ಸಾಹಿತಿಗಳ ಲೇಖನಗಳಿಂದ ಕೂಡಿದೆ ಅನ್ನಿಸದಿರದು. ಆದರೆ ಒಂದೊಂದೂ ಲೇಖನವನ್ನು ಓದುತ್ತಾ ಹೋದಂತೆ ಲೇಖಕರ ಅಭಿಪ್ರಾಯಗಳನ್ನು ನೂರಕ್ಕೆ ನೂರು ಒಪ್ಪದಿದ್ದರೂ ಅವರ ಅಭಿಪ್ರಾಯಗಳನ್ನು ಸರಾಸಗಟಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ ಇದು ಪಂಥಾತೀತವಾದ ಮಾಸಿಕ.

ರಾಜ್ಯೋತ್ಸವವನ್ನು ನೆಪಮಾಡಿಕೊಂಡಿರುವ ಸಂಪಾದಕೀಯ ಮೋದಿ ಮತ್ತು ಬಿ.ಜೆ.ಪಿ. ಸರ್ಕಾರದ ಅವಾಂತರಕಾರಿ ಮತ್ತು ಆಘಾತಕಾರಿ ನಿಲುವುಗಳು ಭಾರತವನ್ನು ಎತ್ತ ಕೊಂಡೊಯ್ಯುತ್ತಿವೆ ಎನ್ನುವ ವಿಶ್ಲೇಷಣೆ, ಚುನಾವಣೆಗಳು ಪ್ರಜಾಪ್ರಭುತ್ವವನ್ನು ಬಂಡವಾಳಶಾಹಿಗಳ ಕಪಿಮುಷ್ಟಿಗೆ ಸಿಲುಕಿಸುತ್ತಿರುವ ರೀತಿ ಓದುಗರನ್ನು ಚಿಂತೆಗೀಡುಮಾಡುತ್ತದೆ.

ವಂದನಾ ಶಿವ ಅವರು ತಮ್ಮ ಲೇಖನದಲ್ಲಿ 'ಕರೋನಾ ವೈರಸ್ಸಿನ ಈ ಲಾಕ್ ಡೌನ್ ಎಂಬುದು ಮನುಷ್ಯತ್ವವಿಲ್ಲದ ಭವಿಷ್ಯಕ್ಕೆ ಬರೆದ ಒಂದು ವ್ಯಾಖ್ಯಾನವಾಗಿದೆ' ಎಂದಿದ್ದಾರೆ. ರಾಮಚಂದ್ರ ಗುಹಾ ಅವರು 'ಮೋದಿ ಮತ್ತು ಮುಸಲೋನಿ' ಒಂದು ಸಮಾನಾಂತರ ನೋಟದಲ್ಲಿ ಇಬ್ಬರ ಆಡಳಿತವನ್ನು ತುಲನೆ ಮಾಡಿ ಇಂದಿನ ರಾಜಕಾರಣಕ್ಕೆ ಕನ್ನಡಿ ಹಿಡಿದಿದ್ದಾರೆ. ಬಂಜಗೆರೆಯವರು ತಮ್ಮ ಲೇಖನದಲ್ಲಿ ಹಣಗಳಿಕೆಯೊಂದನ್ನೇ ಬಹಳ ದೊಡ್ಡ ಮೌಲ್ಯವೆನ್ನುವಂತೆ ಬದುಕುತ್ತಿರುವ ಇಂದಿನ ಸಮಾಜ ನೆಲ ಜಲ ಭಾಷೆ ಮುಂತಾದ ಸಮಸ್ಯೆಗಳನ್ನು ಆಹ್ವಾನಿಸುತ್ತಿದೆ ಎಂದಿದ್ದಾರೆ.

'ಪುಸ್ತಕ ಲೋಕ' ಕೆಲವು ಉಪಯುಕ್ತ ಪುಸ್ತಕಗಳ ಪರಿಚಯ/ಅವಲೋಕನ ಅರ್ಥಪೂರ್ಣವಾಗಿದೆ. 'ಹೊಸಮನುಷ್ಯ' ಒಂದು ವಿಶಿಷ್ಟವಾದ ಮಾಸಿಕ.

**–ಟಿ.ಎಸ್.ದಕ್ಷಿಣಾಮೂರ್ತಿ,** ಬೆಂಗಳೂರು

ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಪ್ರೊ.ಶಿವರಾಮ ಶೆಟ್ಟಿ ಅವರು ಆಯ್ಕೆಯಾದ ವಿಷಯ ತಮ್ಮ ಪತ್ರಿಕೆಯಿಂದ ತಿಳಿದು ಸಂತೋಷವಾಯಿತು. ಅವರ ಸಂದರ್ಶನ ಚಿಕ್ಕದಾಗಿ ಅರ್ಥಪೂರ್ಣವಾಗಿದೆ. ನಿರ್ದೇಶಕರಾಗಿ ಅವರ ಕನಸುಗಳಲ್ಲಿ ಕೆಲವು ಗಮನಸೆಳೆಯುತ್ತವೆ. ನವ ಮಾಧ್ಯಮಗಳನ್ನು ಬಳಸಿಕೊಂಡು ಶಾಸ್ತ್ರೀಯ ಕನ್ನಡವನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವತ್ತ ಅವರು ಆಲೋಚಿಸಿದರೆ ಒಳಿತಾಗಬಹುದು. ಆದರೆ ತಮ್ಮ ಕೆಲಸಗಳ ಅನುಷ್ಟಾನಕ್ಕೆ ಅನುದಾನದ ಕೊರತೆ ಎಂದು ಹೇಳಿರುವುದು ಗಂಭೀರ ವಿಷಯ ಹಾಗೂ ಸರ್ಕಾರಕ್ಕೆ ಈ ಕೇಂದ್ರದ ಬಗೆಗಿನ ನಿಷ್ಕಾಳಜಿಯನ್ನು ಸೂಚಿಸುತ್ತದೆ.

**–ಮಲ್ಲಿಕಾರ್ಜುನ ಹೊಸಪಾಳ್ಯ,** ಹೊಸಪೇಟೆ

ಪ್ರತಿ ಸಂಚಿಕೆಯಲ್ಲೂ ನಾನು ಮೊದಲು ಓದುವ ಎರಡು ಬರಹಗಳೆಂದರೆ ನಿಮ್ಮ ಸಂಪಾದಕೀಯ ಮತ್ತು ಸಾಹಿತ್ಯ–ಕಲೆ ಇತ್ಯಾದಿಗಳ ಬಗ್ಗೆ ಬರೆಯುವ ಬಿಡಿ ಟಿಪ್ಪಣಿಗಳು. ಆದರೆ ಈ ನವೆಂವರ್ ಸಂಚಿಕೆಯಲ್ಲಿ ಸಾಹಿತ್ಯ ಕಲೆ ಕುರಿತ ನಿಮ್ಮ ಟಿಪ್ಪಣಿಗಳಿಲ್ಲದಿದ್ದುದು ನಿರಾಶೆ ಉಂಟಾಯಿತು. ಈ ಕೋವಿಡ್ ಕಾಲದಲ್ಲಿ ಕಲೆ–ಸಾಹಿತ್ಯ ಕ್ಷೇತ್ರಗಳಲ್ಲಿ ಹೊಸ ಬೆಳವಣಿಗೆಗಳೇನೂ ಇಲ್ಲದಿರುವುದು ಇದಕ್ಕೆ ಕಾರಣವಿರಬಹುದು. ಆದರೆ ವಿಮರ್ಶಕ ಜಿ.ಎಸ್. ಅಮೂರರನ್ನು ಕುರಿತ ರಾಜೇಂದ್ರ ಚೆನ್ನಿ ಮತ್ತು ಎಸ್.ಪಿ. ಬಾಲಸುಬ್ರಮಣ್ಯ ಕುರಿತ ಕೆ. ಪುಟ್ಟಸ್ವಾಮಿಯವರ ಶ್ರದ್ಧಾಂಜಲಿ ಬರಹಗಳು ಈ ಕೊರತೆಯನ್ನು ತುಂಬಿದೆ. ವಿಜಯೇಂದ್ರ ಪಾಟೀಲರ 'ಈ ಕನ್ನಡವನ್ನು ಏನು ಮಾಡಬೇಕು?' ಎಂಬ ಬರಹವನ್ನು ನೀವು ವಿನೋದ ಬರಹವೆಂದು ಕರೆಯದೆ ವಾರೆ ನೋಟವೆಂದು ಕರೆದಿರುವುದು ಅತ್ಯಂತ ಸೂಕ್ತವಾಗಿದೆ. ವಾರೆನೋಟದಷ್ಟೇ ಅದು ಸೂಕ್ಷ್ಮವೂ ಮಾರ್ಮಿಕವಾಗಿದ್ದು ಕನ್ನಡದ ಸಮಸ್ಯೆಯನ್ನು ಇನ್ನೊಂದು ದಿಕ್ಕಿನಿಂದ ನೋಡಿ ಗಮನ ಸೆಳೆಯುತ್ತದೆ.

**ಎನ್. ಲಕ್ಷ್ಮೀನಾರಾಯಣ, ತುಮಕೂರು**

ಡಿಸೆಂಬರ್, ೬ : ಅಂಬೇಡ್ಕರ್ ಅವರ ಪರಿನಿರ್ವಾಣ ದಿನ

ವಿಶೇಷ ಲೇಖನ-೧

# ಅಂಬೇಡ್ಕರ್‌ವಾದಿಗಳಿಗೆ ಇದು ಆತ್ಮಾವಲೋಕಲನದ ಕಾಲ

## ಅಂಬೇಡ್ಕರ್‌ವಾದಿಗಳು ಅಂಬೇಡ್ಕರ್ ಅವರನ್ನು ಅನುಕರಿಸಲು ಪ್ರಯತ್ನಿಸಬೇಕು

-ವಿನಯ ರಕ್ಕಿತ ಮಹಾಥೇರ

ಅಂಬೇಡ್ಕರ್ ತಮ್ಮ ಹೋರಾಟ, ಸಂವಿಧಾನಾತ್ಮಕ ಹಕ್ಕುಗಳು ಮತ್ತು ಬೌದ್ಧ ಧರ್ಮ ಸೇರಿ ನೀಡಿದ ಆತ್ಮವಿಶ್ವಾಸದ ಸಮಗ್ರ ಮಾರ್ಗದರ್ಶನದ ನಂತರವೂ ಅಂಬೇಡ್ಕರ್ ಅನುಯಾಯಿಗಳು ಆತ್ಮವಿಶ್ವಾಸವೇ ಇಲ್ಲದವರಂತೆ ಪರವಾಲಂಬಿಗಳಾಗಿ ಪರಾವಲಂಬಿತನವನ್ನೇ ಒಂದು ಹಕ್ಕಿನಂತೆ ಚಲಾಯಿಸುತ್ತಾ ಮುಂದುವರೆಯುತ್ತಿದ್ದಾರೆಂದು ವಿಷಾದಿಸುವ ಬಹುಜನ ಬೌದ್ಧ ಸಂಘಟನೆಯ ಸಂನ್ಯಾಸಿಯೊಬ್ಬರು ಇಲ್ಲಿ ಅಂಬೇಡ್ಕರ್‌ವಾದಿಗಳಿಗೆ ಕೆಲ ಹಿತವಚನಗಳನ್ನು ಹೇಳಿದ್ದಾರೆ.-ಸಂ.




೧೯೫೬ರ ಅಕ್ಟೋಬರ್ ೧೪ ರಂದು ತಮ್ಮ ಐದು ಲಕ್ಷ ಅನುಯಾಯಿಗಳೊಂದಿಗೆ ಡಾ॥ ಬಿ.ಆರ್.ಅಂಬೇಡ್ಕರ್ ಬುದ್ಧ ಧಮ್ಮ ಮತ್ತು ಸಂಘದ ಆಶ್ರಯಕ್ಕೆ ತೆರಳಿದರು. ವೈಚಾರಿಕತೆ ಮತ್ತು ಪ್ರಯೋಗಶೀಲತೆಗಳಿಗೆ ಬದ್ಧರಾಗಿದ್ದ ಅವರು, ಬೌದ್ಧ ಧರ್ಮದ ವೈಚಾರಿಕ ಮನೋಭಾವಕ್ಕೆ ಮಾರುಹೋಗಿದ್ದರು. ನೈತಿಕತೆಯೊಂದಿಗೆ ಬೆರೆತ ವೈಚಾರಿಕತೆಯನ್ನು ವೈಜ್ಞಾನಿಕ ಮನೋಭಾವದಿಂದ ಮತ್ತಷ್ಟು ಹುರಿಗೊಳಿಸಿಕೊಂಡ ಬೌದ್ಧ ಧರ್ಮವು ಅವರನ್ನು ಸಹಜವಾಗಿಯೇ ಆಕರ್ಷಿಸಿತು. ಬೌದ್ಧ ಧರ್ಮದ ಸಮಾನತೆ ಮತ್ತು ಐಕಮತ್ಯಗಳ ಬೋಧನೆ, ಸ್ವಪ್ರಯತ್ನದ ಮೂಲಕ ತನ್ನನ್ನು ಮತ್ತು ಪ್ರಪಂಚವನ್ನು ಬದಲಾಯಿಸಬೇಕೆಂಬ ನಿಲುವು ಅವರನ್ನು ಆಕರ್ಷಿಸಿದವು.

ಅಂಬೇಡ್ಕರ್ ಅವರು ಜಾತೀಯತೆಯ ಕರಾಳ ಚಂಡಮಾರುತದೊಳಗಿಂದ ಹುಟ್ಟಿದ ಬೌದ್ಧಿಕತೆಯ ಪ್ರಖರ ಮಿಂಚಾಗಿದ್ದರು. ಆದ್ದರಿಂದ ಅಂಬೇಡ್ಕರ್‌ವಾದಿಗಳು ಮತ್ತು ಅವರ ಅನುಯಾಯಿಗಳು ಪದೇ ಪದೇ ತಮ್ಮದು ದಮನಿತ ವರ್ಗ ಎಂದು ಹಲುಬುವುದನ್ನು ಬಿಟ್ಟು ತಮ್ಮ ನಾಯಕನನ್ನು ಅನುಕರಿಸಲು ಪ್ರಯತ್ನಿಸಬೇಕು, ತಾವು ದಮನಿತರು ಎಂಬುದನ್ನು ಪುನರುಚ್ಛರಿಸುವುದರಿಂದ, ಇತರರ ಸಹಾಯವನ್ನು ನಿರೀಕ್ಷಿಸುವುದರ ಹೊರತಾಗಿ ತಾವೇನೂ ಮಾಡಲಾರೆವು ಎಂದು ಸ್ವಯಂಸೂಚನೆ ಕೊಟ್ಟುಕೊಳ್ಳುತ್ತಿದ್ದಾರೆ ಅಥವಾ ಮತ್ತೊಬ್ಬ ಅಂಬೇಡ್ಕರ್, ಅಥವಾ ಬುದ್ಧ ತಮ್ಮನ್ನು ಬಿಡುಗಡೆಗೊಳಿಸಲು ಬರಬೇಕೆಂದು ಕಾಯುತ್ತಿದ್ದಾರೆ ಎಂಬರ್ಥ ಹೊರಡುತ್ತದೆ,

ಇಂದು ಅಂಬೇಡ್ಕರ್‌ವಾದಿಗಳು ಯಾವ ದುಸ್ಥಿತಿಯಲ್ಲಿದ್ದಾರೆಂಬುದರ ಬಗ್ಗೆ ನಾವು ಚಿಂತಿಸಬೇಕಿದೆ. ಒಂದು ಕಡೆ ತಮ್ಮನ್ನು ಸಮಾನರೆಂದು ಒಪ್ಪಿಕೊಳ್ಳಲು ಸಿದ್ಧರಿಲ್ಲದ ಜಾತಿವಾದಿ ಸಮಾಜವನ್ನು ಅವರು ಎದುರಿಸಬೇಕಿದೆ, ಮತ್ತೊಂದು ಕಡೆ ಅಂಬೇಡ್ಕರ್ ಅವರನ್ನು ಒಂದು ಪ್ರತಿಮೆಯನ್ನಾಗಿ ಮಾಡಿಕೊಂಡು ಬೌದ್ಧ ಧರ್ಮದ ಆಚರಣೆಯ ವಿಚಾರದಲ್ಲಿ ಅವರ ಆದರ್ಶಗಳಿಗೆ ವಂಚನೆ ಮಾಡುವ ಅವಕಾಶವಾದಿ ರಾಜಕೀಯ ನಾಯಕರಿಂದ ವಂಚನೆಗೆ ಒಳಗಾಗಬೇಕಿದೆ. ಅವರು ಗಳಿಸಿದ ರಾಜಕೀಯ ಮೀಸಲಾತಿಯನ್ನು ಪಡೆಯಲು ಪ್ರತಿಯೊಬ್ಬರೂ ಸಿದ್ಧರಿದ್ದಾರೆ, ಆದರೆ ಅವರ ಧರ್ಮವನ್ನಲ್ಲ. ಬೌದ್ಧ ಧರ್ಮದ ಸೇವೆ ಎಂದರೆ ಮಾನವಕೋಟಿಯ ಸೇವೆ ಎಂದು ಅಂಬೇಡ್ಕರ್ ಹೇಳಿದ್ದು ಯಾರಿಗೂ ನೆನಪಿಲ್ಲ.

ಅಂಬೇಡ್ಕರ್‌ವಾದಿಗಳು ಆತ್ಮಗೌರವವನ್ನು ಗಳಿಸುವುದಕ್ಕಾಗಿ ಸ್ವಪ್ರಯತ್ನದಲ್ಲಿ ನಂಬಿಕೆ ಇರಿಸಬೇಕು, ಆತ್ಮವಿಶ್ವಾಸ ಗಳಿಸಬೇಕು, ಅಂಬೇಡ್ಕರ್ ಅವರಂತೆ – ಉನ್ನತ ನೈತಿಕ ನಡವಳಿಕೆ, ಉನ್ನತ ವಿದ್ಯಾಭ್ಯಾಸ, ಆತ್ಮವಿಶ್ವಾಸ, ಸ್ವಪ್ರಯತ್ನಗಳ ಮೂಲಕ – ಆಗಬೇಕು.

ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ಏಕೆ ತ್ಯಜಿಸಿದರು ಎಂಬ ಪ್ರಶ್ನೆಗೆ ಅವರ ಮಾತುಗಳಲ್ಲೇ ಉತ್ತರ ದೊರೆಯುತ್ತದೆ, "ಹಿಂದೂ ಸಮಾಜವು ಅದರ ಕೇಡುಗಳನ್ನು ತ್ಯಜಿಸುವಂತೆ ಮಾಡಬಹುದು, ದಮನಿತ ವರ್ಗಗಳನ್ನು ಸಮಾನತೆಯ ಆಧಾರದಲ್ಲಿ ಆ ಧರ್ಮದೊಳಗೆ ಒಂದಾಗಿಸಬಹುದೆಂದು ನಾನು ಬಹಳ ಕಾಲ ಯೋಚಿಸಿದೆ, ಆದರೆ ಅನುಭವವು ನನಗೆ ಉತ್ತಮವಾದ ಪಾಠ ಕಲಿಸಿತು. ಹಿಂದೂ ಧರ್ಮದಲ್ಲಿ ಸಮಾನತೆ ಸಾಧ್ಯವಿಲ್ಲ, ಏಕೆಂದರೆ ಆ ಧರ್ಮವು ನಿಂತಿರುವುದೇ ಅಸಮಾನತೆಯ ನೆಲೆಗಟ್ಟಿನ ಮೇಲೆ ಎಂಬುದು ನನಗೀಗ ಸಂಪೂರ್ಣ ಮನವರಿಕೆಯಾಗಿದೆ"

ಬಹಳಷ್ಟು ಹಿಂದೂ ನಾಯಕರು ಆಷಾಢಭೂತಿಗಳು, ಅವರು ಜಾತೀಯತೆಯ ವಿರುದ್ಧ ಹೋರಾಡುವುದಾಗಿ ಹೇಳಿಕೊಳ್ಳುತ್ತಾರೆ, ಆದರೆ ವಾಸ್ತವದಲ್ಲಿ ಅವರು ಅದರ ನಿಯಮಗಳಿಗೆ ಬದ್ಧರಾಗಿರುತ್ತಾರೆ. ಬ್ರಾಹ್ಮಣ ಅಧಿಕಾರ ಶಾಹಿಯು ಪ್ರಜಾತಾಂತ್ರಿಕ ವಿಚಾರಗಳನ್ನು ಹೊಂದಿರುವುದಾಗಿ ಹೇಳಿಕೊಂಡು, ಹಿಂದುಳಿದ ವರ್ಗಗಳನ್ನು ಮೇಲಕ್ಕೆತ್ತುವ ಮಾತನಾಡುತ್ತದೆ, ಆದರೆ ಅದು ತನ್ನದೇ ಒಂದು ಮಿತಜನತಂತ್ರವನ್ನು (oligarchy) ಬಯಸುತ್ತಿರುತ್ತದೆ. ಶಿಕ್ಷಣವು ಗುಲಾಮಗಿರಿ ಮತ್ತು ಸ್ವಾರ್ಥ ಮನೋಭಾವದ ಜನರನ್ನೇ ಸೃಷ್ಟಿಸುವುದಾದರೆ ಅಸ್ಪೃಶ್ಯತೆ ಮತ್ತು ಅಸಮಾನತೆಗಳನ್ನು ನಿವಾರಿಸುವುದು ಎಂದಿಗೂ ಸಾಧ್ಯವಾಗದು. ಮೇಲಾಗಿ ನಾವು ಜಾತಿ ವ್ಯವಸ್ಥೆಯ ಒಳಗೇ ಇದ್ದು ಗಳಿಸುವುದೇನನ್ನು?

ಬೌದ್ಧ ಧರ್ಮವು ಬಡವರ ಮತ್ತು ದಮನಿತರ ಸೇವೆಯಲ್ಲಿ ಎಂದೂ ನಿರತವಾಗಿದೆ. ಬುದ್ಧನ ಉಪದೇಶಗಳು ದುಃಖ ಎಂಬ ಸಂಗತಿಯನ್ನು, ದುಃಖದ ಕಾರಣವನ್ನು, ಮತ್ತು ದುಃಖ ನಿವಾರಣೆಯ ದಾರಿಯನ್ನು ಆಧರಿಸಿದೆ. ಈ ಕಾರಣಕ್ಕಾಗೇ ಅಂಬೇಡ್ಕರ್ ಅವರು ಬುದ್ಧನನ್ನು ಆಯ್ದುಕೊಂಡಿದ್ದು. ಜನರನ್ನು ಶೋಷಿಸುತ್ತಲೇ ಹೊಗುವ ಉದ್ದೇಶದಿಂದ ಮನುವಾದಿಗಳು ಅವರನ್ನು ಜಾತಿವಾದಿ ಧರ್ಮದ ಒಳಗೇ ಹಿಡಿದಿಡಲು ಬಯಸುತ್ತಾರೆ.

ಕೆಲವು ಅಪವಾದಗಳನ್ನು ಹೊರತುಪಡಿಸಿ ಅಂಬೇಡ್ಕರ್ ಅವರ ಸಮುದಾಯದವರೇ ಆದ ಬಹಳಷ್ಟು ಜನ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಬೇಕೆಂದು ಅವರು ನೀಡಿದ ಕರೆಯನ್ನು ಕಡೆಗಣಿಸಿದ್ದಾರೆ. ಅಂಬೇಡ್ಕರ್ ಅವರು ದಲಿತರ ಹಕ್ಕುಗಳಿಗಾಗಿ ಹೋರಾಡಿದರು, ಅವರು ಒಂದು ವಿಶಾಲ ದೃಷ್ಟಿಯನ್ನು ಹೊಂದಿದ್ದರು, ಆದರೆ ಅಂಬೇಡ್ಕರೋತ್ತರ ಅಂಬೇಡ್ಕರ್‌ವಾದಿಗಳು ಈ ಗುಣವನ್ನು ಅನುಕರಿಸಲಾರದವರಾಗಿದ್ದಾರೆ. ತಮ್ಮ ಜನರಿಗೆ ವರ್ಣ ವ್ಯವಸ್ಥೆಯ ಹೊರಗೆ ಒಂದು ಅಸ್ಮಿತೆಯನ್ನು ತಂದುಕೊಡಬೇಕೆಂದು ಅಂಬೇಡ್ಕರ್ ಬಯಸುತ್ತಿದ್ದರು. ಆದರೆ ಈಗ ನಾವು ನೋಡುತ್ತಿರುವುದು ದಲಿತರ ನಡುವೆ ಜಾತಿ ಮತ್ತು ವರ್ಣವ್ಯವಸ್ಥೆಯ ಪ್ರಚೋದನೆಯನ್ನು.

ಸಾಂವಿಧಾನಿಕ ಖಾತರಿ ಮಾತ್ರವೇ ಸಾಕು ಎನ್ನುವಂತಿದ್ದರೆ ಅಂಬೇಡ್ಕರ್ ಅವರು ಶಾಂತಿಯಿಂದ ವಿಶ್ರಮಿಸುತ್ತಿದ್ದರು. ಅನಾರೋಗ್ಯದ ನಡುವೆಯೂ ಅವರು ಮರವೆಯಿಂದ ಬೌದ್ಧ ಧರ್ಮವನ್ನು ಅಗೆದು ತೆಗೆಯುವಲ್ಲಿ ಹಲವಾರು ವರ್ಷಗಳನ್ನು ಕಳೆಯುತ್ತಿರಲಿಲ್ಲ.

ಹಿಂದೂ ಧರ್ಮಕ್ಕೆ ವಿಶಿಷ್ಟವಾದ ವಿಭಜಿತ ನೈತಿಕತೆಯು, ಅದರ ಅಡಿಯಲ್ಲಿ ನಲುಗುತ್ತಿರುವವರಿಗೆ ದಮನಕಾರಿಯಾದುದು. ಆದರೆ ಅಶಿಕ್ಷಿತ ಮತ್ತು ವಿದ್ಯಾವಂತ ದಲಿತರಿಬ್ಬರೂ ಎರಡು ವಿಭಿನ್ನ ಸಂಕಥನಗಳ–ಮಾರ್ಗಸೂಚೆಗಳ ನಡುವೆ ತುಯ್ದಾಡುವಂತೆ ಕಾಣುತ್ತಿದೆ. ಒಂದು ಕಡೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದನ್ನು ದಲಿತ ಚಳುವಳಿಯ **ಚಿಹ್ನೆಯಾಗಿ** ಅವರನ್ನು ಹೊಗಳಲಾಗುತ್ತದೆ/ಶ್ಲಾಘಿಸಲಾಗುತ್ತದೆ, ಆದರೆ ಮತ್ತೊಂದು ಕಡೆ ಅವರೆಲ್ಲ ತಮ್ಮ ಹಳೆ ಜಾತಿ ವ್ಯವಸ್ಥೆಗೆ ಅಂಟಿಕೊಳ್ಳುತ್ತಾರೆ.

**(ಬೌದ್ಧ ದೀಕ್ಷೆ ಪೆದು ಸಂನ್ಯಾಸಿಯಾಗಿ ಜಾತಿ ವುಚಾರ, ದಲಿತತ್ವ ಎಂಬಿತ್ಯಾದಿ ವಿಷಯಗಳ ಬಗ್ಗೆ ಪುಸ್ತಕ–ಅಂಕಣಗಳನ್ನು ಬರೆಯುವ ಲೇಖಕರು ತಮ್ಮನ್ನು ಬಹುಜನ ಅಂಬೇಡ್ಕರ್‌ವಾದಿ ಎಂದು ಗುರುತಿಸಕೊಳ್ಳಬಯಸುತ್ತಾರೆ)**

(ಕೃಪೆ: ***ದ ಇಂಡಿಯನ್ ಎಕ್ಸ್‌ಪ್ರೆಸ್***, ನವೆಂಬರ್ ೧, ೨೦೨೦
ಕನ್ನಡಕ್ಕೆ : **ಎಂ. ರಾಜು**).

ವಿಶೇಷ ಲೇಖನ-೨

# ಅಂಬೇಡ್ಕರ್ ಸಂವಿಧಾನವನ್ನು ಸುಟ್ಟುಹಾಕುಲು ಬಯಸಿದ್ದೇಕೆ?

-ಜೆ.ಎಸ್. ಸದಾನಂದ

**ನಮ್ಮ ಸಂವಿಧಾನ ರಚನೆಯ ಹಿಂದಿನ ಬಹುಮುಖ್ಯ ಶಕ್ತಿ ಎಂದು ನಾವು ಭಾವಿಸಿ, ಹೆಮ್ಮೆಯನ್ನೂ ಪಡುವ ಅಂಬೇಡ್ಕರ್ ಈ ಸಂವಿಧಾನದ ಬಗ್ಗೆ ಬಹಳಷ್ಟು ಕಾರಣಗಳಿಗಾಗಿ ಭ್ರಮನಿರಸನ ಹೊಂದಿದ್ದರು ಮಾತ್ರವಲ್ಲ, ಒಮ್ಮೆ ಭಾವಾವೇಶದಿಂದ ಅದನ್ನು ಸುಟ್ಟುಹಾಕುವಲ್ಲಿ ನಾನೇ ಮೊದಲಿಗನಾಗಿರುತ್ತೇನೆ' ಎಂದು ಕೂಡ ಹೇಳಿದ್ದರು. ಅಂಬೇಡ್ಕರ್ ಅವರ ಈ ಹೇಳಿಕೆಯನ್ನು ಭಾರತದ ಇಂದಿನ ರಾಜಕೀಯ ಸಂದರ್ಭದಲ್ಲಿ ಅದರ ಹಿನ್ನೆಲೆಯ ಪರಿಪ್ರೇಕ್ಷ್ಯದೊಂದಿಗೆ ಅರ್ಥ ಮಾಡಿಕೊಳ್ಳುವುದು ನಮ್ಮ ಕಾಲದ ರಾಜಕೀಯ ಸವಾಲುಗಳನ್ನೆದುರಿಸಲು ನಮಗೆ ನೆರವಾಗಬಹುದು-ಸಂ**



ಭಾರತದ ಸಂವಿಧಾನವನ್ನು ಒಂದು ವಿಮರ್ಶಾತೀತ ಪವಿತ್ರ ಗ್ರಂಥವೆಂಬಂತೆ ಬಿಂಬಿಸಲಾಗುತ್ತಿದ್ದು ಸಂವಿಧಾನವನ್ನು ಟೀಕಿಸುವುದು ಅದಕ್ಕೆ ಮಾಡಿದ ಅವಹೇಳನವೇನೋ ಎಂಬಂತೆ ನೋಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಸಂವಿಧಾನದಲ್ಲಿ ಅಡಕವಾಗಿರುವ ಯಾವುದೇ ಅಂಶವನ್ನು ಸಕಾರಣವಾಗಿ ಟೀಕಿಸುವುದಕ್ಕೂ ಆಳುವ ಪಕ್ಷ ಅಥವಾ ವರ್ಗ ಸಂವಿಧಾನಾತ್ಮಕ ಆಡಳಿತದ ಬಗ್ಗೆ ಅಗೌರವ ತೋರುವದಕ್ಕೂ ವ್ಯತ್ಯಾಸವೇ ಇಲ್ಲವೇನೋ ಎಂಬಂತೆ ಕೆಲವರು ಭಾವಿಸಿದಂತಿದೆ. ಈ ಸಂದರ್ಭದಲ್ಲಿ ಭಾರತದ ಸಂವಿಧಾನದ ರಚನೆಯಲ್ಲಿ ಅಗಾಧ ಪರಿಶ್ರಮ ವಹಿಸಿದ್ದ ಮತ್ತು ಭಾರತದ ಸಂವಿದಾನದ ಶಿಲ್ಪಿ ಎಂದೇ ಖ್ಯಾತರಾಗಿರುವ ಡಾ. ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನದ ಬಗ್ಗೆ ಹೊಂದಿದ್ದ ನಿಲುವು ಒಂದು ಪ್ರಭುತ್ವದಲ್ಲಿ ಸಂವಿಧಾನವನ್ನು ಹೇಗೆ ನೋಡಬೇಕು ಎನ್ನುವುದರ ಕುರಿತು ಕೆಲವು ಒಳನೋಟಗಳನ್ನು ನೀಡುತ್ತದೆ.

ತಾವೇ ಬಹುಮುಖ್ಯ ಪಾತ್ರವಹಿಸಿ ರಚಿಸಿದ ಸಂವಿಧಾನವನ್ನೇ ಸುಟ್ಟುಹಾಕುವ ಮಾತನ್ನು ಅಂಬೇಡ್ಕರ್ ಆಡಿದ್ದರು ಎಂದರೆ ಹಲವರು, ವಿಶೇಷವಾಗಿ ಅಂಬೇಡ್ಕರ್‌ವಾದಿಗಳೆಂದು ಗುರುತಿಸಿಕೊಂ<ಡವರು ನಂಬುವುದಿಲ್ಲ. ಆದರೆ ಅಂಬೇಡ್ಕರ್‌ರವರ ಈ ಹೇಳಿಕೆ ಅತ್ಯಂತ ಅನಿರೀಕ್ಷಿತವೇನೂ ಆಗಿರಲಿಲ್ಲ. ಬಹಳ ಹಿಂದೆಯೆ ಇದರ ಬಗ್ಗೆ ಅವರು ಸೂಚನೆಯನ್ನು ನೀಡಿದ್ದರು. ಭಾರತದ ಸಂವಿಧನದ ರಚನೆ ಪೂರ್ಣಗೊಂಡು ಸಂವಿಧಾನ ರಚನಾ ಸಭೆಯಲ್ಲಿ ಅದು ಮಂಡನೆಯಾದಾಗ ಅದರ ಕುರಿತು ಸಾಕಷ್ಟು ಪ್ರಶಂಸೆಗೆ ಅವರು ಪ್ರತಿಕ್ರಿಯಿಸಿದ್ದು ಹೀಗೆ:

"ಒಂದು ಸಂವಿಧಾನ ಎಷ್ಟೇ ಒಳ್ಳೆಯದಿರಬಹುದು, ಅದನ್ನು ಅಳವಡಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗುತ್ತದೋ ಅಂತಹ ಮಂದಿ ಕೆಟ್ಟವರಾಗಿದ್ದರೆ ಸಂವಿಧಾನವೂ ಸಹ ಖಂಡಿತವಾಗಿ ಕೆಟ್ಟದಾಗಿ ಬಿಡುತ್ತದೆ. ಹಾಗೆಯೆ, ಸಂವಿಧಾನವು ಎಷ್ಟೆ ಕೆಟ್ಟದಾಗಿದ್ದರೂ ಅದರ ಕಾರ್ಯನಿರ್ವಹಣೆಯ ಜವಾಬ್ದಾರಿ ಹೊತ್ತವರು ಒಳ್ಳೆಯವರಾಗಿದ್ದರೆ ಅದು ಒಳ್ಳೆಯದಾಗಿ ಬದಲಾಗಿಬಿಡುತ್ತದೆ". ಸಂವಿಧಾನ ರಚನೆಯಾಗಿ ಕೇವಲ ಮೂರು ವರ್ಷಗಳಲ್ಲಿ ಅವರಿಗೆ ಸಂವಿಧಾನದ ಕಾರ್ಯನಿರ್ವಹಣೆಯ ಕುರಿತು ಭ್ರಮನಿರಸನವಾಗಿತ್ತು. ೧೯೫೩ರಲ್ಲಿ ರಾಜ್ಯಸಭೆಯಲ್ಲಿ ಅವರು ರಾಜ್ಯ ಸರಕಾರವು ತೆಗೆದುಕೊಂಡ ನಿರ್ಣಯಗಳ ವಿರುದ್ಧ ವಿಟೊ ಚಲಾಯಿಸುವ ಅಧಿಕಾರವನ್ನು ರಾಜ್ಯಪಾಲರಿಗೆ ನೀಡಲು ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂದು ವಾದಿಸುತ್ತಿದ್ದಾಗ ನಡೆದ ಚರ್ಚೆಯ ಸಮಯದಲ್ಲಿ ಸಂವಿಧಾನವನ್ನು ಸುಡುವ ಈ ಮಾತನ್ನು ಅವರಾಡಿದ್ದರು: "ಮಾನ್ಯರೆ, ನಾನು ಸಂವಿಧಾನವನು ರಚಿಸಿದ್ದೇನೆಂದು ನನ್ನ ಸ್ನೇಹಿತರು ಹೇಳುತ್ತಾರೆ. ಆದರೆ ಅದನ್ನು ಸುಟ್ಟುಹಾಕಲು ನಾನೇ ಮೊದಲನೆಯವನಾಗಿರುತ್ತೇನೆ ಎಂದು ಹೇಳಲು ತಯಾರಿದ್ದೇನೆ. ಅದು ನನಗೆ ಬೇಕಿಲ್ಲ. ಅದು ಯಾರಿಗೂ ಸೂಕ್ತವಾದುದಲ್ಲ".

ರಾಜ್ಯಪಾಲರಿಗೆ ಹೆಚ್ಚಿನ ಅಧಿಕಾರವನ್ನು ನೀಡಬೇಕೆಂದು ಅಂಬೇಡ್ಕರ್ ರಾಜ್ಯಸಭೆಯಲ್ಲಿ ವಾದಿಸುತ್ತಿದ್ದಾಗಲೇ ಸದಸ್ಯರೊಬ್ಬರು ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಇದಕ್ಕೆ ತದ್ವಿರುದ್ಧವಾದ ನಿಲವನ್ನು ವ್ಯಕ್ತಪಡಿಸಿದ್ದರು ಎಂಬುದನ್ನು ಅವರಿಗೆ ನೆನಪಿಸುತ್ತಾರೆ (ಸಂವಿಧನ ರಚನಾ ಸಭೆಯಲ್ಲಿ ಅಂಬೇಡ್ಕರ್ ರಾಜ್ಯಪಾಲರಿಗೆ ಮುಖ್ಯಮಂತ್ರಿಯಷ್ಟೆ ಅಧಿಕಾರ ಕೊಟ್ಟರೆ ರಾಜ್ಯದಲ್ಲಿ ಎರಡು ಶಕ್ತಿ ಕೇಂದ್ರಗಳು ಹುಟ್ಟಿಕೊಂಡು ಆಡಳಿತದಲ್ಲಿ ಗೊಂದಲ ಸೃಷ್ಟಿಯಾಗುತ್ತದೆ ಎಂದು ಹೇಳಿದ್ದರು). ಆಗ ಅಂಬೇಡ್ಕರ್ ಕೊಟ್ಟ ಉತ್ತರ ಬಹಳ ಕುತೂಹಲಕಾರಿಯಾಗಿತ್ತು: " ಆ ಸಭೆಯಲ್ಲಿ ತಾನು ಉಳಿದವರು ಹೇಳಿದ್ದನ್ನು ದಾಖಲಿಸುವ ಕೇವಲ ಚಾಕರಿಯ ಕೆಲಸ ಮಾತ್ರ ಮಾಡುತ್ತಿದ್ದೆನಷ್ಟೆ" ಹಾಗೆ ಹೇಳಲು ಕಾರಣವೂ ಇತ್ತು. ಅಂಬೇಡ್ಕರ್‌ರವರ ಪ್ರಕಾರ ಭಾರತಕ್ಕೆ ಶಾಸಕಾಂಗದ ಬಹುಸಂಖ್ಯಾತ ಸದಸ್ಯರಿಂದ ಚುನಾಯಿತರಾಗುವವರೇ ಕಾರ್ಯಾಂಗದ ಮುಖ್ಯಸ್ಥರಾಗುವ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಗಿಂತ ಅಮೇರಿಕಾದಲ್ಲಿದ್ದ ಸಂಯುಕ್ತ ರಾಜ್ಯ ವ್ಯವಸ್ಥೆ ಹೆಚ್ಚು ಸೂಕ್ತವಾದುದು ಎಂದೆನಿಸಿತ್ತು. ಮತ್ತು ಪ್ರಬಲ ಕೇಂದ್ರಸರಕಾರವಿರುವ ವ್ಯವಸ್ಥೆಗಿಂತ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಇರಬೇಕು ಎನ್ನುವುದದು ಅವರ ನಿಲುವಾಗಿತ್ತು. ಅದರ ಬಗ್ಗೆ ಅವರು ಒಂದು ಪ್ರಸ್ತಾವನೆಯನ್ನೂ ಸಹ ಅವರು ಸಂವಿಧಾನ ರಚನಾ ಸಮಿತಿಯ ಉಪಸಮಿತಿಗೆ ಸಲ್ಲಿಸುತ್ತಾರೆ ಆದರೆ ಅದು ಅಲ್ಲಿ ತಿರಸ್ಕೃತವಾಗಿತ್ತು..

ಹಿಂದೊಮ್ಮೆ ತಾವೇ ಸಮರ್ಥಿಸಿಕೊಂಡ ಸಂವಿಧಾನವನ್ನು ಸುಟ್ಟುಹಾಕುವ ಮಾತನ್ನಾಡಿದ್ದಕ್ಕೆ ಅಂಬೇಡ್ಕರ್ ಕೊಟ್ಟ ಕಾರಣ: "ದೇವರು ಬಂದು ಕೂರಲಿ ಎಂದು ನಾವು ದೇವಸ್ಥಾನವನ್ನು ಕಟ್ಟಿದರೆ ಅಲ್ಲಿ ದೇವರಿಗೆ ಮೊದಲೇ ದೆವ್ವ ಬಂದು ಕೂತರೆ ದೇವಸ್ಥಾನವನ್ನು ಕೆಡುವದೇ ಇನ್ನೇನು ಮಾಡಬೇಕು?' ಕೆ.ಪಿ.ಸಿನ್ಹಾ ಎಂಬ ಸದಸ್ಯರೊಬ್ಬರು ರವರು "ದೇವಸ್ಥಾನದ ಬದಲು ದುಷ್ಟಶಕ್ತಿಯನ್ನು ನಾಶ ಮಾಡಿ" ಎಂದಾಗ ಅಂಬೇಡ್ಕರ್ ನಮ್ಮಲ್ಲಿ ಅದಕ್ಕೆ ಬೇಕಾದ ಶಕ್ತಿ ಇಲ್ಲ. ನೀವು ಶತಪಥ ಬ್ರಾಹ್ಮಣವನ್ನು ಓದಿದರೆ ದೇವತೆಗಳು ಯಾವಾಗಲೂ ಅಸುರರಿಗೆ ಸೋಲುತ್ತಿದ್ದರು ಎನ್ನುವುದು ತಿಳಿಯುತ್ತದೆ. ಅಸುರರ ಹತ್ತಿರ ಅಮೃತವಿತ್ತು ದೇವತೆಗಳು ತಮ್ಮ ಉಳಿವಿಗೋಸ್ಕರ ಅದನ್ನು ಅವರಿಂದ ಕಿತ್ತುಕೊಳ್ಳಬೇಕಾಯಿತು".

ಅಂಬೇಡ್ಕರ್‌ರವರು ಇಂತಹ ನಿಲುವಿಗೆ ಬರಲು ಹಲವಾರು ಕಾರಣಗಳಿವೆ. ಭಾರತದ ಪ್ರಭುತ್ವದ ಸ್ವರೂಪ ಹೇಗಿರಬೇಕೆಂಬ ದೃಷ್ಟಿಯಿಂದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾದ ಅಂಶಗಳಿಗೂ, ವಾಸ್ತವದಲ್ಲಿ ಬಾರತೀಯ ಪ್ರಜಾಪ್ರಭುತ್ವವು ತೆಗೆದುಕೊಳ್ಳುತ್ತಿದ್ದ ತಿರುವುಗಳಿಗೂ ಅಗಾಧವಾದ ವ್ಯತ್ಯಾಸವಿರುವುದು ಅವರಿಗೆ ಅರಿವಾಗತೊಡಗಿತ್ತು. ದಲಿತರಿಗೆ, ದುರ್ಬಲರಿಗೆ, ಅಲ್ಪಸಂಖ್ಯಾತರಿಗೆ ಬಲ ತುಂಬುವ ಉದ್ದೇಶದಿಂದ ಸಂವಿಧಾನದಲ್ಲಿ ಅಳವಡಿಸಿಕೊಂಡ ಅಂಶಗಳು ಕಾರ್ಯರೂಪಕ್ಕಿಳಿಯುವ ಸಾಧ್ಯತೆಗಳೇ ಇಲ್ಲ ಎಂದು ಅವರಿಗನಿಸತೊಡಗಿತ್ತು. ಅವರು ಸಚಿವ ಸಂಪುಟದಲ್ಲಿ ಮಂಡಿಸಿದ 'ಹಿಂದು ಸಂಹಿತೆ ಮಸೂದೆ'ಯ ಬಗ್ಗೆ ಭಿನ್ನಮತ ವ್ಯಕ್ತವಾದಾಗ ಅವರ ಸಂಪುಟಕ್ಕೆ ರಾಜಿನಾಮೆ ನೀಡಿ ಹೊರಬಂದಿದ್ದರು. ೧೯೫೨ ಹಾಗೂ ೧೯೫೪ರಲ್ಲಿ ಎರಡು ಬಾರಿ ಚುನಾವಣೆಗೆ ಸ್ಪರ್ಧಿಸಿ ಎರಡು ಬಾರಿಯೂ ಪರಾಜಿತರಾಗಿದ್ದರು. ೧೯೫೨ರ ಚುನಾವಣೆಯಲ್ಲಿ ಒಂದು ಕಾಲದಲ್ಲಿ ಅವರ ಆಪ್ತರಾಗಿದ್ದ ನೆಹರೂರವರು ಅವರ ವಿರುದ್ಧ ಚುನಾವಣಾ ಪ್ರಚಾರವನ್ನೂ ಮಾಡಿದ್ದರು. ಭಾರತೀಯ ಸಮಾಜವು ಮೇಲ್ಜಾತಿಯ ಬಿಗಿಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬ ಹತಾಶೆ ಅವರನ್ನು ಕಾಡತೊಡಗಿತ್ತು. "ಸಂಸದೀಯ ಪ್ರಜಾಪ್ರಭುತ್ವಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದ ಸಾಮಾಜಿಕ ರಚನೆ ಭಾರತದಲ್ಲಿರುವುದರಿಂದ ಪ್ರಜಾಪ್ರಭುತ್ವವನ್ನು ಕಾರ್ಯಗತಗೊಳಿಸಲು ಸಾಧ್ಯವೇ ಇಲ್ಲ" ಎಂದು ೧೯೫೩ರಲ್ಲಿ ಬಿ.ಬಿ.ಸಿ.ಗೆ ಕೊಟ್ಟ ಸಂದರ್ಶನದಲ್ಲಿ ಅವರು ಹೇಳಿದ್ದರು.

ಅಂಬೇಡ್ಕರ್‌ರವರಿಗೆ ದಲಿತರ, ಅಲ್ಪಸಂಖ್ಯಾತರ, ಮತ್ತು ಇತರ ದುರ್ಬಲರ ರಕ್ಷಣೆಗೆ ಸಂವಿಧಾನದಲ್ಲಿ ನೀಡಲಾದ ಹಕ್ಕುಗಳ ಅಳವಡಿಕೆ ವಾಸ್ತವದಲ್ಲಿ ಸಾಧ್ಯವಾಗುತ್ತಿಲ್ಲ ಎನ್ನುವ ಅರಿವು ತೀವ್ರ ನಿರಾಶೆಯನ್ನುಂಟುಮಾಡಿತ್ತು. ಸಮಾಜವನ್ನು ಪರಿವರ್ತನೆ ಮಾಡುವ ಒಂದು ಬಲವಾದ ರಾಜಕೀಯ ಪ್ರಭುತ್ವದ ರಚನೆ ಅವರ ಹಂಬಲವಾಗಿತ್ತು ಮತ್ತು ಹಾಗಾಗುತ್ತಿಲ್ಲ ಎನ್ನುವ ಹತಾಶೆ ಅವರನ್ನು ಕಾಡತೊಡಗಿತು. ಸಂವಿಧಾನದ ಆಶಯಕ್ಕನುಗುಣವಾಗಿ ಸಾಮಾಜಿಕ ಬದಲಾವಣೆಯನ್ನು ತರುವ ಕಾರ್ಯವನ್ನು ಹೊಸ ಪ್ರಭುತ್ವವು ಮಾಡುತ್ತದೆ ಎನ್ನುವ ನಂಬಿಕೆ ಹುಸಿಯಾಗತೊಡಗಿದಾಗ ಅವರು ಅಧೀರರಾದರು.

ರಾಜಕೀಯ ಪ್ರಭುತ್ವವನ್ನು ಕುರಿತ ಗಾಂಧೀಜಿಯರ ಚಿಂತನೆಯು ಅಂಬೇಡ್ಕರ್‌ರವರ ಈ ಚಿಂತನೆಗಿಂತ ಭಿನ್ನವಾಗಿರುವುದನ್ನು ಈ ಸಂದರ್ಭದಲ್ಲಿ ಗುರುತಿಸುವುದು ಸೂಕ್ತ ಎನಿಸುತ್ತದೆ. ರಾಜಕೀಯ ಪ್ರಭುತ್ವದ ಮೂಲಕ ಸಮಾಜವನ್ನು ಬದಲು ಮಾಡಬಹುದು ಎನ್ನುವ ನಂಬಿಕೆ ಗಾಂಧಿಯವರಿಗಿರಲಿಲ್ಲ. ಬದಲಾವಣೆ ಅವರ ಪ್ರಕಾರ ವ್ಯಕ್ತಿಯ ಆಂತರ್ಯ ಹಾಗೂ ಸಮಾಜದ ಆಂತರ್‌ಸಂಬಂಧಗಳಿಗೆ ಸಂಬಂದಿಸಿದ್ದು. ಸಾಮಾಜಿಕ ಬದಲಾವಣೆಗೆ ಅವರ ಮೊದಲ ಪ್ರಾಶಸ್ತ್ಯ, ನಂತರದ ಸ್ಥಾನ ಪ್ರಭುತ್ವಕ್ಕೆ. ಅಂಬೇಡ್ಕರ್ ಬಲಿಷ್ಠವಾದ ಪ್ರಭುತ್ವವನ್ನು ನಿರ್ಮಿಸುವುದರ ಮೂಲಕ ಸಮಾಜವನ್ನು ಬದಲು ಮಾಡಬಹುದೆಂದು ನಂಬಿದ್ದರು. ಹಾಗಾಗಿಯೆ ಅವರಿಗೆ ತಮ್ಮ ಕಣ್ಮುಂದಿನ ಪ್ರಭುತ್ವದ ಕಾರ್ಯಾಚರಣೆಯ ಬಗ್ಗೆ ಭ್ರಮನಿರಸನವಾಗಿದ್ದಂತೆ ಕಾಣಿಸುತ್ತದೆ. ಅಲ್ಲದೆ ಅಂಬೇಡ್ಕರ್ ವ್ಯಕ್ತಿಗಳಿಗೆ ನೀಡುವ ಹಕ್ಕಿನ ಮೂಲಕ ಅವರ ಬಲವರ್ಧನೆ ಮಾಡಬಹುದು ಎಂದು ನಂಬಿದ್ದರಿಂದ ಪ್ರತಿಯೊಬ್ಬರೂ, ಅದರಲ್ಲೂ ವಿಶೇಷವಾಗಿ ಶೋಷಣೆಗೊಳಗಾದವರು,

(೫ನೇ ಪುಟಕ್ಕೆ

ವಿಶೇಷ ಲೇಖನ-೩

# ದಲಿತ ರಾಜಕಾರಣ ಇಂದು ನಿರ್ಣಾಯಕವಾಗಿ ಬದಲಾಗಬೇಕಿದೆ

-ಎಸ್.ಆರ್. ದಾರಾಪುರಿ

**ಪ್ರಜಾಪ್ರಭುತ್ವ ನಿಧಾನವಾಗಿ ನಿರಂಕುಶ ಪ್ರಭುತ್ವವಾಗಿ ಮಾರ್ಪಾಡಾಗುತ್ತಾ ಸಂವಿಧಾನದ ಮೂಲಕ ಅಂಬೇಡ್ಕರ್ ಒದಗಿಸಿದ ಸಾರ್ವತ್ರಿಕ ಹಕ್ಕುಗಳಿಗೆ ಸಂಚಕಾರ ಬಂದಿರುವ ಈ ಹೊತ್ತಿನಲ್ಲಿ ದಲಿತರು ತಮ್ಮ ಅಸ್ಮಿತೆಯ ರಾಜಕಾರಣವನ್ನು ಬಿಟ್ಟು ನೆಲಮೂಲದ ಜನಪರ ಸಮಾಜವಾದಿ ರಾಜಕಾರಣ ಮಾಡುತ್ತಿರುವ ಶಕ್ತಿಗಳೊಂದಿಗೆ ಕೈಜೋಡಿಸುವ ಅಗತ್ಯವನ್ನು ಪ್ರತಿಪಾದಿಸುವ ಈ ಲೇಖನ ದಲಿತ ಚಳುವಳಿಯ ಗಮನಕ್ಕೆ ಅರ್ಹವಾಗಿದೆ-ಸಂ>**



ಇಲ್ಲಿಯವರೆಗೂ ದಲಿತ ರಾಜಕಾರಣ/ದಲಿತ ಚಳವಳಿಗಳು ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿಯನ್ನು ಕಾಪಾಡಿಕೊಳ್ಳುವುದಕ್ಕೇ ಸೀಮಿತಗೊಂಡಿದೆ ಮತ್ತು ಅಧಿಕಾರ ಪಡೆಯುವುದರಲ್ಲಿಯೇ ದಲಿತ ರಾಜಕಾರಣದ ಗೆಲುವೆಂದು ದಲಿತ ನಾಯಕರು ಪರಿಗಣಿಸುತ್ತಿದ್ದಾರೆ. ಅವರ ಗುರಿ ಬಹಳ ಸಂಕುಚಿತವಾಗಿದೆ. ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದಲಿತನೊಬ್ಬ ಪ್ರಧಾನಮಂತ್ರಿಯಾದರೂ ದಲಿತರನ್ನು ಕಾಪಾಡಲಾಗದು ಎಂಬುದು ಸ್ಪಷ್ಟವಾಗಿ ಅರಿವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇದರ ಲಾಭ ಪಡೆಯುವವರು, ಒಂದೆರಡು ಸಾವಿರದಷ್ಟಿರಬಹುದಾದ ಸಂಸದರು, ಶಾಸಕರು, ನಿಗಮಮಂಡಳಿಗಳ ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು ಮಾತ್ರ. ಬಡತನದಲ್ಲಿ ತತ್ತರಿಸುತ್ತಿರುವ ದಲಿತ ಸಮೂಹದ ವಲಸೆ ಕಾರ್ಮಿಕರು, ಭೂ ರಹಿತ ಕೃಷಿಕರು, ಕೂಲಿ ಕಾರ್ಮಿಕರು, ನರಳುತ್ತಲೇ ಇರುತ್ತಾರೆ. ಅವರ ಆರ್ಥಿಕ ಸ್ಥಿತಿಗತಿಗಳಲ್ಲಿ ಯಾವುದೇ ಸುಧಾರಣೆ ಇರುವುದಿಲ್ಲ. ಇವರ ವಿರುದ್ಧದ ಹಿಂಸಾಚಾರಗಳ ನಿಲುಗಡೆಯ ಸೂಚನೆಗಳಿಲ್ಲ. ಹಾಗಾಗಿ ವ್ಯವಸ್ಥೆಯ ಬದಲಾವಣೆ ಆಗುವವರೆಗೂ ಈ ಸಮಸ್ಯೆ ಇದ್ದದ್ದೆ. ನಾಲ್ಕು ಅವಧಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ, ಮಾಯಾವತಿ ಅವರೇ ಇದರ ಅತ್ಯುತ್ತಮ ಉದಾಹರಣೆ. ಡಾ. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಸಭೆಯಲ್ಲಿ ಪ್ರಭುತ್ವದ ಸಮಾಜವಾದದ(State Socialism) ನೀತಿಗಳೇ ಇಲ್ಲದೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಳನ್ನು ಭವಿಷ್ಯದ ಸರ್ಕಾರಗಳು ಸಾಧಿಸುವುದಾದರೂ ಹೇಗೆ? ಎಂದು ಪ್ರಶ್ನಿಸಿದ್ದರು. ಅವರ ಆತಂಕಗಳು ನಿಜವಾಗಿವೆ. ಅವರು ಹೇಳಿದ್ದು, ದಲಿತರಿಗೆ ಇಬ್ಬರು ಶತ್ರುಗಳಿದ್ದಾರೆ. ಒಂದು ಬಂಡವಾಳಶಾಹಿಗಳು, ಇನ್ನೊಂದು ಬ್ರಾಹ್ಮಣ್ಯ. ಆದರೆ ಇಂದಿನ ದಲಿತ ನಾಯಕರು, ಬಂಡವಾಳದೊಂದಿಗೆ ಅನ್ಯೋನ್ಯ ಸ್ನೇಹ ಹೊಂದಿದ್ದಾರೆ. ಅಧಿಕಾರದಲ್ಲಿರುವ ಬಂಡವಾಳಶಾಹಿಗಳಿಗೆ ಹಾಗೂ ಬ್ರಾಹ್ಮಣವಾದಿಗಳಿಗೆ ಇಂತಹ ದಲಿತ ನಾಯಕರಿಂದ ಯಾವುದೇ ಅಪಾಯವಿಲ್ಲ. ಆದ್ದರಿಂದ ರಾಷ್ಟ್ರದ ಸಂಪತ್ತಿನ ಒಡೆತನದಿಂದ ಮತ್ತು ಬಂಡವಾಳದ ಬಲದಿಂದ ಇವರು ರಾಷ್ಟ್ರೀಯ ಕಾರ್ಯನೀತಿಗಳನ್ನು ತಮ್ಮಿಚ್ಛೆಗೆ ತಕ್ಕಂತೆ ರೂಪಿಸುವುದನ್ನು ಮುಂದುವರೆಸುತ್ತಾರೆ.

ಅಮೆರಿಕದ ಉದಾಹರಣೆ ನಮ್ಮ ಮುಂದಿದೆ. ಬಿಳಿಯರ ದೌರ್ಜನ್ಯದಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದ ಕರಿಯ ಜನತೆ, ವರ್ಣೀಯತೆಯ ವಿರುದ್ಧದ ಹೋರಾಟ ಹಾಗೂ ನಾಗರಿಕ ಹಕ್ಕುಗಳ ಚಳವಳಿಯಿಂದ ೧೯೬೪ರಲ್ಲಿ ಸಮಾನತೆಯ ಹಕ್ಕುಗಳ ವಿಜಯ ಸಾಧಿಸುವತ್ತ ಮುನ್ನಡೆದರು. ಆದಾಗ್ಯೂ ವರಲ್ಲಿ ಇಂದಿಗೂ ಹೆಚ್ಚಿನ ಬದಲಾವಣೆಗಳಾಗಿಲ್ಲ ಮತ್ತು ಅಮೆರಿಕದಲ್ಲಿ ಬಹುತೇಕ ಕಪ್ಪು ಜನತೆ ಬಡತನದಲ್ಲೇ ಬದುಕುತ್ತಿದ್ದಾರೆ. ಇದಷ್ಟೇ ಅಲ್ಲ, ೨೦೦೯ರಿಂದ ೨೦೧೭ರ ವರೆಗೆ ಅಧ್ಯಕ್ಷರಾಗಿದ್ದ ಕರಿಯ ನಾಯಕ ಬರಾಕ್ ಒಬಾಮಾ ಆಡಳಿತದ ನಂತರವೂ-ಅವರು ಬಡತನದಿಂದ ದೂರವಾಗಲಿಲ್ಲ ಮತ್ತು ಇದೀಗ ಕರೋನಾ ಸಾಂಕ್ರಾಮಿಕ ರೋಗದಿಂದ ಜರ್ಝರಿತರಾದವರೂ ಅವರೇ.

೧೯೪೭ರಲ್ಲಿ ಡಾ. ಅಂಬೇಡ್ಕರ್ ಅವರು, 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎಂಬ ತಲೆಬರಹದ ಮನವಿಯೊಂದನ್ನು ಸಂವಿಧಾನದ ಕರಡು ಪ್ರತಿಯಾಗಿ ಸಿದ್ಧಪಡಿಸಿದರು. ಅಖಿಲ ಭಾರತ ಪರಿಶಿಷ್ಟ ಜಾತಿಗಳ ಸಂಘಟನೆಯ ಪರವಾಗಿ ಬಹುಜನ ಸಮಾಜದ ಹಕ್ಕುಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಂವಿಧಾನ ರಚನಾ ಸಮಿತಿಗೆ ಸಲ್ಲಿಸಿದರು. ಅವರ ಸಲಹೆಗಳು ಹೀಗಿದ್ದವು: ದೇಶದ ಅತಿ ಮುಖ್ಯ ಹಾಗೂ ತಳಮಟ್ಟದ ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದಲ್ಲಿರಬೇಕು ಮತ್ತು ದೇಶದ ಕೃಷಿ ಭೂಮಿಯನ್ನು ರಾಷ್ಟ್ರೀಕರಣಗೊಳಿಸಿ, ಅದರಲ್ಲಿ ಸಾಮೂಹಿಕ ಕೃಷಿ ಜಾರಿಗೊಳಿಸಬೇಕು. ಹೀಗಾದಲ್ಲಿ ಮಾತ್ರ, ಭೂರಹಿತ ದಲಿತರಿಗೂ ಕೃಷಿ ಭೂಮಿಯಲ್ಲಿ ಸಮಾನ ಹಕ್ಕು ದೊರೆತು, ರಾಷ್ಟ್ರೀಯ ಕೈಗಾರಿಕೆಗಳಲ್ಲಿ ಸಮಾನ ಅವಕಾಶಗಳನ್ನು ಹೊಂದಬಹುದು. ಆದರೆ ಹೀಗಾಗಲಿಲ್ಲ ಮತ್ತು ದಲಿತರ ಶೋಷಣೆ ಎಗ್ಗಿಲ್ಲದೆ ಮುಂದುವರೆಯಿತು. ಎಲ್ಲರಿಗೂ ಸ್ಪಷ್ಟವಾಗಿ ತಿಳಿದಿರುವಂತೆ, ಈಗಾಗಲೇ ಭೂಮಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿರುವವರು ಮತ್ತು ಧನ ಸಂಪತ್ತುಳ್ಳವರು ಬಂಡವಾಳಶಾಹಿ ವ್ಯವಸ್ಥೆಯ ಲಾಭ ಪಡೆಯುತ್ತಿದ್ದಾರೆ ಮತ್ತು ಮುಂದೆಯೂ ಸಹ ಅದರ ಲಾಭ ಪಡೆಯುತ್ತಾರೆ.

ಈಗ ಸರ್ಕಾರಿ ಉದ್ಯಮಗಳ ಖಾಸಗೀಕರಣದೊಂದಿಗೆ, ದಲಿತರ ಮೀಸಲಾತಿ ಅವಕಾಶಗಳು ಕುಗ್ಗುತ್ತಿವೆ. ಜಮ್ಮು ಮತ್ತು ಕಾಶ್ಮೀರ, ಕೇರಳ ಮತ್ತು ಬಂಗಾಳ ರಾಜ್ಯಗಳ ಹೊರತಾಗಿ, ಇನ್ನೆಲ್ಲಿಯೂ ಭೂಸುಧಾರಣೆ ಸಮರ್ಪಕವಾಗು ಅನುಷ್ಠಾನಗೊಂಡಿಲ್ಲ. ಪರಿಣಾಮವಾಗಿ ಶೇ೭೩ರಷ್ಟು ದಲಿತರು ಕೃಷಿಕ್ಷೇತ್ರದಲ್ಲಿ ದುಡಿಯುತ್ತಿದ್ದರೂ ಭೂರಹಿತರಾಗಿಯೇ ಉಳಿದಿದ್ದಾರೆ. ಹಳ್ಳಿಗಳಲ್ಲಿ ದಲಿತರ ಭೂಹೀನತೆ ಮತ್ತು ದೈಹಿಕ ಶ್ರಮದ ಕೂಲಿ ಕೆಲಸಗಳೇ ಅವರ ಅತಿಯಾದ ಬಲಹೀನತೆಗಳಾಗಿವೆ. ಹಾಗಾಗಿ ಭೂ ಸುಧಾರಣೆ ಈ ಹಿಂದೆಯಂತೆಯೇ ಇಂದೂ ಪ್ರಸ್ತುತವಾಗಿದೆ. ಈ ಕಳೆದ ಕೆಲವು ವರ್ಷಗಳಲ್ಲಿ ತಮ್ಮ ಅಸ್ಮಿತೆಯ ರಾಜಕಾರಣದ ಮೂಲಕ ದಲಿತರು ತಕ್ಕಮಟ್ಟಿನ ರಾಜಕೀಯ ಬಲಗಳಿಸಿದ್ದಾರೆ ಎಂಬುದೇನೊ ನಿಜ. ಆದರೆ ಅದಯ ಅಧಿಕಾರದ ರಾಜಕಾರಣದ ಪ್ರದರ್ಶನವಾಯಿತೇ ಹೊರತು, ಅವರ ಸಮಸ್ಯೆಗಳಿಗೆ ಪರಿಹಾರ ಸಿಗಲಿಲ್ಲ. ಇದರ ವ್ಯತಿರಿಕ್ತ ಪರಿಣಮವಾಗಿ ಹಿಂದುತ್ವದ ವಿಚಾರಧಾರೆ ಬಲಗೊಂಡು ದಲಿತರ ಅತಿದೊಡ್ಡ ವಲಯವೊಂದು ಹಿಂದುತ್ವದ ಬಲೆಯಲ್ಲಿ ಸಿಕ್ಕಿಕೊಂಡಿತು. ಇಂದಿನ ಪರಿಸ್ಥಿತಿ ಹೇಗಿದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಕೆಲವು ಸಾಂವಿಧಾನಿಕ ಹಕ್ಕುಗಳನ್ನಾದರೂ ಪಡೆಯಬಹುದೇನೊ ಎಂಬ ನಿರೀಕ್ಷೆಗೆ ಬದಲಾಗಿ, ನಿರಂಕುಶ ಬಿಜೆಪಿ ಆಡಳಿತದಲ್ಲಿ ಅವು ನಿರಂತರವಾಗಿ ದೂರವಾಗುತ್ತಿವೆ. ಡಾ. ಅಂಬೇಡ್ಕರ್ ಅವರ ಸಾಮಾಜಿಕ ಸಮಾನತೆಯ ಪ್ರಭುತ್ವದ ಬದಲಾಗಿ, 'ಚೇಲಾ ಬಂಡವಾಳಶಾಹಿ'ಯ ಪ್ರಾಬಲ್ಯ ಹಾಗೂ ಹಣ ಬಲದ ಅಧಿಕಾರದ ಕೇಂದ್ರವೊಂದು ಸ್ಥಾಪಿಸಲಟ್ಟಿದೆ. ಇದರಿಂದಾಗಿ ಈಗ ಕೇವಲ ದಲಿತರಷ್ಟೇ ಅಲ್ಲ, ದೇಶದ ಜನಸಂಖ್ಯೆಯ ಅತಿ ದೊಡ್ಡ ಭಾಗ, ಬಡತನ, ನಿರುದ್ಯೋಗ, ಅಪೌಷ್ಟಿಕತೆ, ಹಸಿವು ಮತ್ತು ಶೋಷಣೆಗೆ ಬಲಿಯಾಗುತ್ತಿದೆ. ಆದ್ದರಿಂದ ಅಸ್ಮಿತೆಯ ರಾಜಕಾರಣದಿಂದ ದಲಿತ ರಾಜಕಾರಣ ಬೇರ್ಪಟ್ಟು, ನೆಲಮಟ್ಟದ ಕಾರ್ಯಸೂಚಿಯೊಂದಿಗೆ, ಜನಪರ ಮತ್ತು ಸಮಾಜವಾದದ ರಾಜಕಾರಣದೊಂದಿಗೆ, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಇತರ ರಾಜಕೀಯ ಶಕ್ತಿಗಳೊಂದಿಗೆ ಕೈ ಜೋಡಿಸುವುದು ಅತಿ ಮುಖ್ಯವಾಗಿದೆ.



**(ಲೇಖಕರು ನಿವೃತ್ತ ಐಪಿಎಸ್ ಅಧಿಕಾರಿಯಾಗಿದ್ದು** ಆಲ್ ಇಂಡಿಯಾ ಪೀಪಲ್ಸ್ ಫ್ರಟ್ **ಎಂಬ ಸಂಘಟನೆಯ ವಕ್ತಾರರಾಗಿದ್ದಾರೆ.)**

(ಕೃಪೆ: ಮೇನ್‌ಸ್ಟ್ರೀಂ ಸಾಪ್ತಾಹಿಕ ಕನ್ನಡಕ್ಕೆ: **ಬಿ.ಎಸ್. ದಿವಾಕರ)**

---

**೪ನೇ ಪುಟದಿಂದ)**

ತಮ್ಮ ಹಕ್ಕಿನ ಬಗ್ಗೆ ಜಾಗೃತರಾಗಿರಬೇಕೆಂಬುದು ಅವರ ಬಯಕೆಯಾಗಿತ್ತು. ಹಕ್ಕುಗಳಿಗೆ ಪ್ರಾಶಸ್ತ್ಯ ಕೊಡುವುದರಿಂದ ಬದಲಾವಣೆ ಸಾಧ್ಯವಿಲ್ಲ ಎನ್ನುವುದು ಗಾಂಧಿಯ ನಿಲುವು. ಹಾಗಾಗಿ ಅವರ ಮೊದಲ ಪ್ರಾಶಸ್ತ್ಯ ಯಾವಾಗಲೂ ಬಾಧ್ಯತೆಗೆ ಹೊರತು ಹಕ್ಕಿಗಲ್ಲ. ಗಾಂಧಿ ಪ್ರಕಾರ ಒಬ್ಬ ತಂದೆಗೆ ತನ್ನ ಮಗನಿಂದ ಗೌರವಿಸಲ್ಪಡುವ ಹಕ್ಕಿದೆ, ಆದರೆ ಅವನಿಗೆ ಆ ಹಕ್ಕು ಲಭಿಸುವುದು ಮಗನಿಗೆ ತಂದೆಗೆ ಗೌರವ ನೀಡಬೇಕೆಂಬ ಎನ್ನುವ ಬಾಧ್ಯತೆಯಿದ್ದಾಗ ಮಾತ್ರ. ಒಂದೊಂದು ದೃಷ್ಟಿಯಿಂದ ಇಬ್ಬರ ನಿಲುವೂ ಸರಿ ಎನಿಸುತ್ತದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದನ್ನು ಆಯ್ಕೆ ಮಾಡಿಕೊಳ್ಳದೆ ಎರಡನ್ನೂ ಹೇಗೆ ಸಮಗ್ರಗೊಳಿಸಬಹುದೆಂದು ಯೋಚಿಸುವುದು ಹೆಚ್ಚು ಫಲಪ್ರದವಾಗಬಹುದು.



**(ಲೇಖಕರು ಕುವೆಂಪು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ನಿವೃತ್ತ ಪ್ರಾಧ್ಯಾಪಕರು ಮತ್ತು ರಾಜಕೀಯ ಚಿಂತಕರು)**

ವಿಶೇಷ ಲೇಖನ-೪

# ಗಾಂಧಿ ಮತ್ತು ಅಂಬೇಡ್ಕರ್ : ಪ್ರತಿದ್ವಂದಿಗಳೋ ಸಹಯಾತ್ರಿಕರೋ?

-ರಾಜೇಂದ್ರ ಚೆನ್ನಿ

**ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ, ವಿಶೇಷವಾಗಿ ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರ ನಡುವೆ ಜಾತಿ ಪದ್ಧತಿ ಮತ್ತು ಅದೊರೊಡನೆಯ ಅಸ್ಪೃಶ್ಯತಾ ನಿವಾರಣೆಯ ಸಂಬಂಧ ನಡೆದ ಚರ್ಚೆ-ಸಂವಾದ-ವಿವಾದಗಳಲ್ಲಿನ ತೊಡಕುಗಳು ಇಂದೂ ಪರಿಹಾರವಾಗದೆ ಇಂದಿನ ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ಈ ಇಬ್ಬರ ದಾರಿಗಳೂ ಒಂದೆಡೆ ಕೂಡುವ ಅನಿವಾರ್ಯತೆ ಉಂಟಾಗಿದ್ದರೂ, ಅದು ಸಾಧ್ಯವಾಗದೆ ಹೋಗಿದೆ, ಇದಕ್ಕೆ ಕಾರಣಗಳ ಜೊತೆಗೆ ಇದನ್ನು ಸಾಧಿಸಬಹುದಾದ ಬಗೆಯನ್ನೂ ಈ ಲೇಖನ ಹೇಳುವ ಪ್ರಯತ್ನ ಮಾಡುತ್ತದೆ**-ಸಂ.



**ಪೂ**ನಾ ಒಪ್ಪಂದದ ನಂತರ ಗಾಂಧಿ ತಮ್ಮನ್ನು ದಲಿತರ ಪರವಾಗಿರುವ ಕಾರ್ಯಕ್ರಮಗಳಿಗಾಗಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ನಿರ್ಧಾರವನ್ನು ಕೈಕೊಂಡರು. ಅನೇಕ ಸಂಶೋಧಕರು ಹೇಳುವ ಹಾಗೆ ಈ ಮೊದಲೇ ಗಾಂಧಿಯವರು ನಂಬಿಕೊಂಡು ಬಂದಿದ್ದ ವರ್ಣ ಹಾಗೂ ಜಾತಿಗಳ ಬಗೆಗಿನ ಸಾಂಪ್ರದಾಯಿಕ ನಂಬುಗೆಗಳನ್ನು ಅನೇಕರು ಪ್ರಶ್ನಿಸಿದ್ದರಿಂದ ಅಲುಗಾಡಲು ತೊಡಗಿದ ಈ ನಂಬುಗೆಗಳಿಗೆ ಅಂತಿಮ ಪ್ರಹಾರವು ಅಂಬೇಡ್ಕರ್ ಅವರಿಂದ ಬಂದಿತು. ಗಾಂಧೀಜಿ ಆರಂಭದಲ್ಲಿ ದಕ್ಷಿಣ ಆಫ್ರಿಕಾದ ಕಪ್ಪು ಜನಾಂಗದವರ ಬಗ್ಗೆ, ಅಲ್ಲಿ ತಾವು ವ್ಯವಹರಿಸುತ್ತಿದ್ದ ಭಾರತೀಯ ವ್ಯಾಪಾರಿಗಳ ಸಣ್ಣ ಜಗತ್ತಿನ ಆಚೆಗಿದ್ದ ಭಾರತೀಯ ಕರಾರು ಕೂಲಿಗಳ ಬಗ್ಗೆ ಸಾಂಪ್ರದಾಯಿಕ ಪೂರ್ವಗ್ರಹಗಳನ್ನು ಇಟ್ಟುಕೊಂಡಿದ್ದರು. ಹೀಗಾಗಿಯೆ ಇತ್ತೀಚಿನ ವರ್ಷಗಳಲ್ಲಿ ಅವರು ಜನಾಂಗೀಯವಾದಿ (racist) ಆಗಿದ್ದರು ಎನ್ನುವ ಪ್ರತಿಭಟನೆಗಳು ಅಲ್ಲಲ್ಲಿ ನಡೆದಿವೆ. ಭಾರತಕ್ಕೆ ಬಂದ ಮೇಲೆ ಕೂಡ ಅಂಬೇಡ್ಕರ್ ಅವರ ಜೊತೆಗಿನ ಸಂಘರ್ಷದ ಕಾಲದಲ್ಲಿಯೂ ಗಾಂಧಿಯವರು ಅಸ್ಪೃಶ್ಯರನ್ನು ಸ್ವಂತ ಚಿಂತನೆಯಿರದ ಮುಗ್ಧ 'ಹಸು'ಗಳನ್ನಾಗಿ ರಾಜಕೀಯವನ್ನು ಅರ್ಥಮಾಡಿಕೊಳ್ಳಲಾಗದ ಕುರಿಮಂದೆಯನ್ನಾಗಿಯೇ ನೋಡಿದರು. ಅಂದರೆ ದಲಿತರ ಬಗ್ಗೆ ಅಪಾರವಾದ ಕರುಣೆ, ಬದ್ಧತೆ ಇವೆಲ್ಲವೂ ಇದ್ದ ಮತ್ತು ಆ ಕಾಲದಲ್ಲಿ ಹಿಂದೂ ಜಾತಿವ್ಯವಸ್ಥೆಯಲ್ಲಿದ್ದ ಅಸ್ಪೃಶ್ಯತೆಯ ಬಗ್ಗೆ ಅತ್ಯಂತ radical ಆದ ಹಾಗೂ ಅಪಾಯಕಾರಿಯಾಗುವಷ್ಟು ತೀಕ್ಷ್ಣವಾದ ಧೋರಣೆ ಹೊಂದಿದ್ದ ಗಾಂಧಿಯವರು ದಲಿತರನ್ನು "ಮುಗ್ಧರು", "ಶೋಷಿತರು", ನಮ್ಮಿಂದ ಉದ್ಧಾರವಾಗಬೇಕಾದ ಜನಾಂಗಗಳು ಎನ್ನುವ ಸಾಂಪ್ರದಾಯಿಕ ಚೌಕಟ್ಟುಗಳಲ್ಲಿಯೆ ನೋಡಿದರು. ಹೀಗಾಗಿ ಅಂಬೇಡ್ಕರ್ ಅವರ ಚಿಂತನೆಯ ಹಿಂದೆ ಮಹಾರಾಷ್ಟ್ರದಲ್ಲಿ ಜೋತಿಬಾ ಫುಲೆಯಿಂದ ಅಂಬೇಡ್ಕರ್ ಅವರವರೆಗೆ ನಡೆದ ಉಜ್ವಲವಾದ ಬ್ರಾಹ್ಮಣ ವಿರೋಧಿ, ಜಾತಿ ವಿರೋಧಿ ಹೋರಾಟಗಳಿರುವ ಸಂಗತಿಯು ಅವರಿಗೆ ಅಪರಿಚಿತವಾಗಿತ್ತು.

ಸ್ವತಃ ಅಂಬೇಡ್ಕರ್ ಅವರು ಹುಟ್ಟಿದ ಮಹಾರ್ ಜನಾಂಗವು ಬ್ರಿಟಿಷ್ ಸೇನೆಯಲ್ಲಿ ದುಡಿದು, ಶಿಕ್ಷಣದ ಸವಲತ್ತು ಪಡೆದು, ನಗರಗಳಿಗೆ ವಲಸೆ ಹೋಗಿ ಕಾರ್ಮಿಕರಾಗಿ ದುಡಿಯುವ ಸಾಮಾಜಿಕ ಚಲನೆಯನ್ನು ಅನುಭವಿಸಿತ್ತು. ಅಲ್ಲದೆ ಬ್ರಿಟಿಷ್ ಸರಕಾರದಿಂದ ತಮ್ಮ ಹಕ್ಕುಗಳ ಬಗ್ಗೆ ಅತ್ಯಂತ ಪ್ರಬುದ್ಧವಾಗಿ ಅಹವಾಲು ಸಲ್ಲಿಸಿ, ಸಂಘಟಿತವಾಗಿ ರಾಜಕೀಯ ಪ್ರಜ್ಞೆಯನ್ನು ಪಡೆದುಕೊಂಡಿತ್ತು. ಇಷ್ಟು ಮಾತ್ರವಲ್ಲ ಸಾಂಪ್ರದಾಯಿಕ ಪ್ರದರ್ಶನ ಕಲೆಗಳು, ಉದಾಹರಣೆಗೆ ತಮಾಶಾ, ಜಲ್‌ಸಾ, ಇವುಗಳ ಮೂಲಕ ರಾಜಕೀಯ ಪ್ರಜ್ಞೆಯನ್ನು ಹರಡುವ, ಶಾಹೀರ್‌ಗಳ ಹಾಡುಗಳ ಮೂಲಕ ಅಶಿಕ್ಷಿತ ಸಮುದಾಯಗಳನ್ನು ತಲುಪುವ ಗಟ್ಟಿಯಾದ ಸಂಪ್ರದಾಯವೂ ಬೆಳೆದಿತ್ತು. ಬಹು ಮುಖ್ಯವಾಗಿ ಸರ್ ನಾರಾಯಣ ಚಂದಾವರ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ನಿಮ್ನ ವರ್ಗಗಳ ಸಮಾವೇಶದಲ್ಲಿ ಮತ್ತು ಇಂಥ ಇತರ ಸಮಾವೇಶಗಳಲ್ಲಿ ಮಂಡಿಸಲಾದ ಗೊತ್ತುವಳಿಗಳು ಅತ್ಯಂತ ಖಚಿತವಾಗಿ ನಿಮ್ನ ವರ್ಗ-ಜಾತಿಗಳ ರಾಜಕೀಯ ಹಕ್ಕೊತ್ತಾಯವನ್ನು ಬ್ರಿಟಿಷ್ ಆಡಳಿತದ ಎದುರಿಗಿಡುತ್ತವೆ. ಅಂಬೇಡ್ಕರ್ ಅವರು ಆನಂತರ ದುಂಡು ಮೇಜಿನ ಪರಿಷತ್ತಿನಲ್ಲಿ ಪ್ರಸ್ತಾಪಿಸುವ ವಾದಗಳು ಇದರಲ್ಲಿ ಅಡಕವಾಗಿದೆ. ಖ್ಯಾತ ಸಂಶೋಧಕಿ ಅನುಪಮಾ ರಾವ್ ಅವರ ಮಾತಿನಲ್ಲಿ ವಿವರಿಸುವುದಾದರೆ ಅಂಬೇಡ್ಕರ್ ಅವರ ಸ್ವಂತಿಕೆಯಿದ್ದದ್ದು ಸಾಮಾಜಿಕವಾಗಿ ಕಳಂಕಿತವಾಗಿದ್ದ (stigmatized) ದಲಿತ ವರ್ಗವನ್ನು ಅದೇ ಕಾರಣಕ್ಕಾಗಿ ಅಂದರೆ ಜಾತಿ ವ್ಯವಸ್ಥೆಯಿಂದ ಅತಿಶಯವಾದ ಶೋಷಣೆ, ಹೀನಾಯಕ್ಕೆ ಗುರಿಯಾಗಿ ದಮನಿತವಾಗಿದ್ದ ವರ್ಗವನ್ನು ಈಗ ಬ್ರಿಟಿಷ್ ಆಳ್ವಿಕೆಯಲ್ಲಿ ತನ್ನ ಹಕ್ಕುಗಳನ್ನು ಮಂಡಿಸುವ ರಾಜಕೀಯ ವರ್ಗವನ್ನಾಗಿ ಪರಿವರ್ತಿಸಿದ್ದು- ಅಂದರೆ ಕಳಂಕಿತ ಸಮುದಾಯದ ವ್ಯಕ್ತಿಗಳನ್ನು ನಾಗರೀಕ, ಸಾಮಾಜಿಕ ಹಕ್ಕುಗಳನ್ನು ಒತ್ತಾಯಿಸುವ ರಾಜಕೀಯ ಪ್ರಜೆಗಳನ್ನಾಗಿ ಪರಿವರ್ತಿಸಿದ್ದು.



ಇದರ ಸರಿಯಾದ ಪರಿಚಯವಿಲ್ಲದ ಗಾಂಧಿ ಹಿಂದೂಗಳು ಅಸ್ಪೃಶ್ಯತೆಯನ್ನು ಒಂದು ಪಾಪವನ್ನಾಗಿ, ಹಿಂದೂ ಧರ್ಮದ ಕಳಂಕವನ್ನಾಗಿ ನೋಡಿ ಪ್ರಾಯಶ್ಚಿತ್ತ ರೂಪವಾಗಿ ಅದನ್ನು ಹೋಗಲಾಡಿಸುವುದಕ್ಕೆ ಬದ್ಧರಾಗಿರಬೇಕು, ಹಾಗೆ ಆಗುವುದಕ್ಕಾಗಿ ದಲಿತರು ಹಿಂದೂ ಸಮಾಜದ ಭಾಗವಾಗಿರಬೇಕು. ಪ್ರತ್ಯೇಕವಾದ ಮೀಸಲು ಚುನಾವಣಾ ಕ್ಷೇತ್ರ ಅಥವಾ ಮತಾಂತರವು ಪರಿಹಾರವಾಗಲಾರದು. ಹಿಂದೂಗಳು ಜಾತಿವ್ಯವಸ್ಥೆಯನ್ನಲ್ಲದಿದ್ದರೂ ಅಸ್ಪೃಶ್ಯತೆಯನ್ನು ತ್ಯಜಿಸಬೇಕು ಎಂದು ನಂಬಿದ್ದರು. ಈ ಬಗ್ಗೆ ಗಾಂಧಿಯವರ ಬದ್ಧತೆಯನ್ನು ಪ್ರಶ್ನಿಸಲಾಗದು. ಜಾತಿವ್ಯವಸ್ಥೆಯು ಶ್ರಮ ವಿಭಜನೆ ಹಾಗೂ ಸಾಮಾಜಿಕ ಸಾಮರಸ್ಯದ ತಳಹದಿ ಎನ್ನುವ ಗ್ರಹಿಕೆಯನ್ನು ಅವರು ಕ್ರಮೇಣವಾಗಿ ಬಿಟ್ಟುಕೊಟ್ಟರು.

ಗಾಂಧಿ ಪ್ರಜ್ಞೆಯ ವಿಸ್ತಾರ, ಪ್ರಾಯಶ್ಚಿತ್ತ ಮುಂತಾದ ಧಾರ್ಮಿಕ-ನೈತಿಕ ಚೌಕಟ್ಟುಗಳಲ್ಲಿಯೇ ಪರಿಹಾರ ಹುಡುಕಿದರು. ಇದರಿಂದ ನೈಜವಾದ ರಾಚನಿಕ ಬದಲಾವಣೆಗಳು ಅಸಾಧ್ಯವೆನ್ನುವುದನ್ನು ಅವರು ಗಮನಿಸಲಿಲ್ಲ. ಇನ್ನು ಈ ಕಡೆಗೆ ಅಂಬೇಡ್ಕರ್ ಅವರಿಗೆ ಹಿಂದೂ ಸಮಾಜವು ಒಂದು closed societyಯಾಗಿ ಕಂಡಿತು. ದಲಿತರ ನ್ಯಾಯಬದ್ಧ, ಅಹಿಂಸಾತ್ಮಕ ಹೋರಾಟಗಳು ಹಿಂದೂ ಪ್ರಜ್ಞೆಯ ಮೇಲೆ ಏನೂ ಪ್ರಭಾವ ಬೀರಲಿಲ್ಲ. ಬದಲಾಗಿ ಹಿಂದೂಗಳನ್ನು ಇನ್ನೂ ಹೆಚ್ಚಾಗಿ ಕಠೋರಗೊಳಿಸಿದವು ಎಂದು ಅನ್ನಿಸಿತು. ಬ್ರಿಟಿಷ್ ಸರಕಾರವು ತರಲು ಪ್ರಯತ್ನಿಸಿದ ಸಣ್ಣ ಸುಧಾರಣೆಗಳನ್ನೂ ಸನಾತನವಾದಿಗಳು ಹಿಂಸೆಯ ಮೂಲಕ ವಿರೋಧಿಸಿದರು. ಉದಾರಣೆಗೆ ೬ ವರ್ಷಗಳ ಕಾಲ ಅಹಿಂಸಾತ್ಮಕ ಹೋರಾಟದ ಮೂಲಕ ಕಾಳಾರಾಮ ದೇಗುಲ ಪ್ರವೇಶಕ್ಕಾಗಿ ಪ್ರಯತ್ನಿಸಿದರೆ ಸವರ್ಣೀಯ ಹಿಂದೂಗಳು ಕಾನೂನಿನ ದುರ್ಬಳಕೆ ಮತ್ತು ದೈಹಿಕ ಹಿಂಸೆಯ ಮೂಲಕ ಹೋರಾಟವನ್ನು ವಿಫಲಗೊಳಿಸಿದರು. ಹೀಗಾಗಿ ಅಂಬೇಡ್ಕರ್ ಅವರ ಚಿಂತನೆಯು ಕಠೋರವಾಗುತ್ತ ಬಂದದ್ದು ಹಿಂದೂ ಸಮಾಜದ ಅಸುರಕ್ಷತೆ ಹಾಗೂ ಕಾಂಗ್ರೆಸ್‌ನ ಅಪ್ರಾಣಿಕತೆಗೆ ಪ್ರತಿಕ್ರಿಯೆಯಾಗಿಯೇ ಹೊರತು ಗಾಂಧಿಯವರ ಬಗೆಗಿನ ಅಸೂಯೆ ಅಥವಾ ಅವರ ಸ್ವಂತ ವ್ಯಕ್ತಿತ್ವದ ದೌರ್ಬಲ್ಯಗಳಿಂದ ಅಲ್ಲ. ಹೀಗಾಗಿ ಅಂಬೇಡ್ಕರ್ ಒಂದು ಕಡೆಗೆ ೧೯೩೬ರಲ್ಲಿ ಬರೆದ 'ಜಾತಿ ವಿನಾಶ' ಕೃತಿಯ uncompromising ನಿಲುವಿಗೆ ಮರಳಿದರು. ಇನ್ನೊಂದೆಡೆಗೆ ಕಾನೂನು ಹಾಗೂ ಆಡಳಿತಗಳ ಮೂಲಕವೇ ದಲಿತರ ರಕ್ಷಣೆಯ ಕೆಲಸವನ್ನು ಮುಂದುವರೆಸಿದರು. ಪೂನಾ ಒಪ್ಪಂದದಿಂದಾಗಿ ಅಂಬೇಡ್ಕರ್ ಅವರು ಸರಿಯಾಗಿ ನಿರೀಕ್ಷಿಸಿದಂತೆ ದಲಿತರ ನೈಜ ರಾಜಕೀಯ ಪ್ರತಿನಿಧಿಗಳು ಇಲ್ಲದಂತಾಯಿತು. ಹಿಂದೂ ಬಹುಮತ ರಾಜಕೀಯದ ಭಾಗವಾದ ಕಾಂಗ್ರೆಸ್‌ಗೆ ವಿಧೇಯರಾದ ಚುನಾಯಿತ ದಲಿತ ಪ್ರತಿನಿಧಿಗಳ ಆಯ್ಕೆ ಸಂಖ್ಯೆಯಲ್ಲಿ ಮಾತ್ರ ಹೆಚ್ಚಾಯಿತು.

ಇದೇ ಹೊತ್ತಿಗೆ ರಾಜಕೀಯ ಅಧಿಕಾರದ ಸಾಧ್ಯತೆಯು ಹತ್ತಿರವಾದಂತೆ ಕಾಂಗ್ರೆಸ್ ಗಾಂಧಿಯವರನ್ನು ಅಂಚಿಗೆ ತಳ್ಳಲಾರಂಭಿಸಿತು. ಗಾಂಧಿಯವರನ್ನು ಕೇವಲ ಬ್ರಿಟಿಷ್‌ರ ವಿರುದ್ಧ ಹೋರಾಟದಲ್ಲಿ ಜನಸಾಮಾನ್ಯರನ್ನು ಚಳುವಳಿಗೆ ತರುವ ಸಾಂಕೇತಿಕ ಧುರೀಣರನ್ನಾಗಿ ಪರಿವರ್ತಿಸಿತು. ಗಾಂಧಿ ಅವರಿಗೆ ಅತ್ಯಂತ ಮುಖ್ಯವಾದ ಪುನರ್ ನಿರ್ಮಾಣ, ಗ್ರಾಮೀಣ ಅರ್ಥವ್ಯವಸ್ಥೆ ಇವುಗಳನ್ನು ಹೊರಗಿಡಲಾಯಿತು. ವಿಶೇಷವೆಂದರೆ ಇಬ್ಬರು ಮಹಾನ್ ನಾಯಕರು ತಮ್ಮ ಕೊನೆಯ ದಿನಗಳಲ್ಲಿ ದುರಂತ ನಾಟಕಗಳ ನಾಯಕರಂತೆ ಒಬ್ಬಂಟಿಯಾಗುತ್ತಾರೆ. ಗಾಂಧಿ ವಿಭಜನೆಯ ಭಯಾನಕ ಸಂದರ್ಭದಲ್ಲಿಯೂ

ಹಿಂದು ಮುಸ್ಲಿಮ್ ಏಕತೆಗಾಗಿ ದುಡಿದ ಕಾರಣಕ್ಕಾಗಿ ಕೊಲೆಗೀಡಾಗುತ್ತಾರೆ. ತಮ್ಮ ಜೀವಮಾನದ ಆಶಯಗಳನ್ನು ಸಂವಿಧಾನದಲ್ಲಿ ಏರಕ ಹೊಯ್ದ ಅಂಬೇಡ್ಕರ್ ಆರ್ಥಿಕ ಸಾಮಾಜಿಕ ಸಮಾನತೆ ಇಲ್ಲದ ಸಂವಿಧಾನಾತ್ಮಕವಾಗಿ ಕೊಡಲ್ಪಟ್ಟ ರಾಜಕೀಯ ಸಮಾನತೆಯ ದೌರ್ಬಲ್ಯದ ಬಗ್ಗೆ ಗಾಢ ಸಂಶಯಗಳನ್ನು ಇಟ್ಟುಕೊಳ್ಳುತ್ತಾರೆ. ಪ್ರಜಾಪ್ರಭುತ್ವದ ಸಂಸ್ಥೆಗಳಿಗಿಂತ ಪ್ರಜಾಪ್ರಭುತ್ವವಾದಿ ಸಂಸ್ಕೃತಿ ಮುಖ್ಯವೆಂದು ಹೇಳುತ್ತಾರೆ. ಹಿಂದು ಕೋಡ್ ಬಿಲ್‌ನ ಮೂಲಕ ಹಿಂದೂ ಮಹಿಳೆಯರ ಹಕ್ಕುಗಳಿಗೆ ಹೋರಾಡಿ ಮತ್ತೆ ಸನಾತನ ಮನಸ್ಸುಗಳಿಂದಾಗಿ ಸೋಲನ್ನು ಅನುಭವಿಸುತ್ತಾರೆ. ಯವೋಲಾ ಸಮಾವೇಷದಲ್ಲಿ (೧೯೩೫) ಮಾಡಿದ ಘೋಷಣೆಯನ್ನು ೧೯೫೬ರಲ್ಲಿ ಅನುಷ್ಠಾನಕ್ಕೆ ತಂದು ಬೌದ್ಧ ಧರ್ಮಕ್ಕೆ ಮತಾಂತರ ಹೊಂದುತ್ತಾರೆ. ಇಬ್ಬರಲ್ಲಿ ಯಾರೂ ಗೆಲ್ಲುವುದಿಲ್ಲ ಯಾರೂ ಸೋಲುವುದಿಲ್ಲ. ಚರಿತ್ರೆಯು ಇಂಥ ನುಡಿಗಟ್ಟನ್ನೇ ಒಪ್ಪುವುದಿಲ್ಲ.

ಸ್ವಾತಂತ್ರ್ಯ ನಂತರದ ಭಾರತವು ಅಂಬೇಡ್ಕರ್ ಭಾರತವೇ ಹೊರತು ಗಾಂಧಿ ಭಾರತವಲ್ಲ. ನೆಹರು ಅವರು ಮಾಡಿದ ಆಯ್ಕೆಗಳು ಆಧುನೀಕರಣ, ಔದ್ಯೋಗೀಕರಣ ಹಾಗೂ ಬಲಿಷ್ಠ ಕೇಂದ್ರೀಕೃತ ಸರಕಾರದ ಮೂಲಕ ದುರ್ಬಲ ಜಾತಿ ಹಾಗೂ ವರ್ಗಗಳಿಗೆ ಸಮಾಜ ಕಲ್ಯಾಣ ಇತ್ಯಾದಿಗಳು ಅಂಬೇಡ್ಕರ್ ಅವರ ಒಟ್ಟು ಚಿಂತನೆಗೆ ಹತ್ತಿರವಾಗಿವೆ. ಅವರು ನಂಬಿದ್ದ state socialismನ ಮಾದರಿಗೂ ಇವು ಹತ್ತಿರವಾಗಿವೆ. ಗಾಂಧಿ ನಂಬಿದ್ದ ಹಿಂದೂಗಳ ಮನಪರಿವರ್ತನೆಯ ಕಾರ್ಯಸೂಚಿಯು ಸಂಪೂರ್ಣವಾಗಿ ವಿಫಲವಾಗಿದೆ. ಈಗಿನ ಹಿಂದೂ ರಾಷ್ಟ್ರದ ಪರಿಕಲ್ಪನೆ, ಹಿಂದೂ ಬಹುಮತದ ಪ್ರಾಬಲ್ಯ, ಅಲ್ಪಸಂಖ್ಯಾತರ ಮೇಲಿನ ಹಿಂಸಾಪರವಾದ ದ್ವೇಷ, ದಲಿತರ ಮೇಲಿನ ಮೇಲ್ಜಾತಿಗಳ ವಿನಾಕಾರಣ ದ್ವೇಷವನ್ನು ದಲಿತ ಮಹಿಳೆಯರ ದೇಹಗಳ ಮೇಲೆ ತೀರಿಸಿಕೊಳ್ಳುವುದು ಇವೇ ಮುಂತಾದ ಮಾನವ ದ್ವೇಷಿ ರಾಜಕೀಯ ಕ್ರಿಯೆಗಳಲ್ಲಿ ಪ್ರಭುತ್ವದ ನೇರವಾದ ಮತ್ತು ಪರೋಕ್ಷವಾದ ಒಪ್ಪಿಗೆ ಇದೆ. ಇದಕ್ಕಿಂತಲೂ ಭೀಕರವಾದ ವಾಸ್ತವವೆಂದರೆ ನಮ್ಮ ಶಿಕ್ಷಿತ, ಅಶಿಕ್ಷಿತ ಹಿಂದೂ ಮೇಲ್ಜಾತಿಗಳ ಹಾಗೂ ಶೂದ್ರ ಸಮುದಾಯಗಳು ಈ ರಾಜಕೀಯದ ಪರವಾಗಿವೆ. ದಲಿತ ಸಮುದಾಯಗಳನ್ನು ಸಮಾನವಾದ ವಾತಳಿಯ ಮೇಲೆ (level field) ತರುವುದಕ್ಕಾಗಿ ರಚಿಸಿದ ಅವಧಿ ಬದ್ಧ ಮೀಸಲಾತಿಯ ನೀತಿಯನ್ನು ವಿರೂಪಗೊಳಿಸಲಾಗಿದೆ. ಕರ್ನಾಟಕದಲ್ಲಿ ಈಗ ಪ್ರತಿನಿತ್ಯ ನಾವು ನೋಡುತ್ತಿರುವಂತೆ ಪ್ರಬಲ ಶೂದ್ರ ವರ್ಗಗಳು ಮೀಸಲಾತಿಯ ಹೆಸರಿನಲ್ಲಿ ಆಯಾ ಜಾತಿಗಳನ್ನು ಒಗ್ಗೂಡಿಸುತ್ತಿವೆ. ಈ 'ಚಳುವಳಿ'ಗಳಿಗೆ ಅಸಂಖ್ಯ ಸಂಖ್ಯೆಯ ಸ್ವಾಮಿಗಳು ನೇತಾರರಾಗುತ್ತಿದ್ದಾರೆ. ಇವುಗಳ ಪರಿಣಾಮವೆಂದರೆ ಅಂಬೇಡ್ಕರ್ ಪರಿಕಲ್ಪನೆಯ ಮೀಸಲಾತಿಯಿಂದ ದಲಿತ ಸಮುದಾಯಗಳು ವಂಚಿತವಾಗುತ್ತವೆ. ಏಕೆಂದರೆ ಅವರು ಜಾತಿ ಕೇಂದ್ರಿತ ಹಿಂಸಾಪರವಾದ ಚಾರಿತ್ರಿಕ ಅನುಭವಗಳಿಗೆ ಒಳಗಾಗಿದ್ದ ದಲಿತರನ್ನು ಮೀಸಲಾತಿಯ ಮೂಲಕ ರಾಜಕೀಯ ಪ್ರಜೆಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದರು. ಈಗ ಮೀಸಲಾತಿಯುನ್ನು ಹಿಂದುಳಿಯುವಿಕೆಯ ಸಡಿಲವಾದ ಪರಿಕಲ್ಪನೆಯ ಚೌಕಟ್ಟಿಗೆ ಒತ್ತಾಯಪೂರ್ವಕವಾಗಿ ತುರುಕಲಾಗುತ್ತಿದೆ. ಸರಳವಾಗಿ ಹೇಳುವುದಾದರೆ ಕರ್ನಾಟಕವು ರಾಜಕೀಯವಾಗಿ ಅಪ್ರಬುದ್ಧವಾದ ಜಾತಿ ಸಮಾಜವಾಗಿ (caste society) ಸಂಪೂರ್ಣವಾಗಿ ಪರಿವರ್ತನೆಗೊಂಡಿದೆ. ಮತ್ತು ಗಾಂಧಿಯವರ ಮೂಲ ನಂಬಿಕೆಗಳಾದ ಗ್ರಾಮೀಣ ಆರ್ಥಿಕತೆ, ಕರಕುಶಲ ಕಸುಬುಗಳು, ವಿಕೇಂದ್ರೀಕರಣ, ಸರಳ ಬದುಕು ಇವೆಲ್ಲವುಗಳ ಕಡುವಿರೋಧಿಯಾದ ಜಾಗತೀಕರಣದ ಅತ್ಯಂತ ಯಶಸ್ವಿ ವೇದಿಕೆಯಾಗಿದೆ. ಹೀಗಾಗಿ ಬಲಪಂಥೀಯ ರಾಜಕೀಯ ಮತ್ತು ಜಾಗತೀಕರಣದ ವಾಹನವಾಗಿರುವ 'ಅಭಿವೃದ್ಧಿ' ಇವುಗಳು ಇಲ್ಲಿಯ ರಾಜಕೀಯದ ಲಕ್ಷಣಗಳಾಗಿವೆ. ಪ್ರಗತಿಪರ ಸಂಘಟನೆಗಳು ನಿರಂತರವಾದ ಹೋರಾಟಗಳನ್ನು ನಡೆಸಿದ್ದರೂ ಅವು ಒಂದುಗೂಡಲು ಸಿದ್ಧವಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಪ್ರತಿದ್ವಂದಿಗಳಾಗಿ ನೋಡಿ ವಾದಕ್ಕಿಳಿಯುವುದು ಆತ್ಮಘಾತುಕವಾದುದು.

ನಿಷ್ಠುರವಾಗಿ ಹೇಳುವುದಾದರೆ ಅಂಬೇಡ್ಕರ್ ಮತ್ತು ಗಾಂಧಿಯವರು ವ್ಯಾಖ್ಯಾನಿಸಿ, ಹೋರಾಟಗಳನ್ನು ರೂಪಿಸಿದ ಜಗತ್ತು ಈಗ ಇಲ್ಲ. ಆದ್ದರಿಂದ ಅವರ ಚಿಂತನೆಗಳನ್ನು ಇಂದಿನ ಸಂಕೀರ್ಣ ಸಮಸ್ಯೆಗಳ ಪರಿಹಾರಕ್ಕಾಗಿ ವಿವೇಕಪೂರ್ಣವಾಗಿ appropriate ಮಾಡಿಕೊಳ್ಳುವುದು (ಅಂದರೆ ಇತ್ಯಾತ್ಮಕವಾದ ಅರ್ಥದಲ್ಲಿ) ನಮ್ಮ ರಾಜಕೀಯ ಚಿಂತನೆ ಹಾಗೂ ನಡೆಗಳ ಆಧಾರವಾಗಿರಬೇಕು. ಗಾಂಧಿಯವರು ಗಾಂಧಿವಾದವೆನ್ನುವುದು ಇಲ್ಲವೇ ಇಲ್ಲವೆಂದು ಘೋಷಿಸಿದ್ದರು. ಅಂಬೇಡ್ಕರ್ ಕೂಡ ಅಂಬೇಡ್ಕರ್‌ವಾದವೆನ್ನುವುದು ಇದೆಯೆಂದು ನಂಬಿರಲಿಲ್ಲ. ಇಬ್ಬರೂ ನಿರಂತರ ಪ್ರಯೋಗಶೀಲರು. ಅತ್ಯಂತ ಸಂದರ್ಭ-ಸಂವೇದಿಯಾದ (context sensitive) ರೀತಿಯಲ್ಲಿ ತಮ್ಮ ಚಿಂತನೆಯನ್ನು ಬದಲಾಯಿಸುತ್ತ ನಡೆದರು. ನಮಗೆ ಅವಶ್ಯಕವಾದುದು ಮೊದಲಿಗೆ ನಮ್ಮ ಸಂದರ್ಭದ ವಸ್ತುನಿಷ್ಠವಾದ, ಸಮಗ್ರವಾದ ವಿಮರ್ಶೆ. ಎರಡನೇಯದಾಗಿ ಈ ವಿಮರ್ಶೆಯ ಆಧಾರದ ಮೇಲೆ ರಚಿಸಿಕೊಳ್ಳಬೇಕಾದ ರಾಜಕೀಯ ಕ್ರಿಯೆಗಳು. ನಾವೀಗ ಫ್ಯಾಸಿಜಮ್‌ನ ಎರಡನೇ ಹಂತದಲ್ಲಿ ಕಾಲಿಟ್ಟಿದ್ದೇವೆ. ಚಿಂತನೆ, ಅಭಿಪ್ರಾಯದ ಅಭಿವ್ಯಕ್ತಿಗಳಿಗೆ ಇನ್ನೂ ಕಠೋರವಾದ ಶಿಕ್ಷೆಗಳು, ಹಿಂಸೆಗಳು ಸನ್ನದ್ಧವಾಗಿವೆ. ಈ ಸಂದರ್ಭದಲ್ಲಿ ಗಾಂಧಿಯವರು ಮಾಡಿದ ಪ್ರಭುತ್ವವಿರೋಧ, ಹಿಂದೂ ಮುಸ್ಲಿಮ್ ಐಕ್ಯತೆ, ಅಭಿವೃದ್ಧಿ ಹೆಸರಿನಲ್ಲಿ ಬಂಡವಾಳಶಾಹಿ ತರುತ್ತಿರುವ ಆಪತ್ತುಗಳ ವಿರೋಧ, ಪರ್ಯಾಯ ಆರ್ಥಿಕ ಚಿಂತನೆ ಇವೆಲ್ಲವೂ ನಮಗೆ ಬೇಕು. ಮುಖ್ಯವಾಗಿ ಕಟ್ಟಕಡೆಯ ಮನುಷ್ಯನನ್ನು ಒಳಗೊಳ್ಳುವ ಚಳುವಳಿಗಳನ್ನು ರೂಪಿಸುವ ಅವರ ಚಾಕಚಕ್ಯತೆ ಬೇಕು. ಅಂಬೇಡ್ಕರ್ ಅವರು ರೂಪುಗೊಟ್ಟ ಸಂವಿಧಾನವನ್ನು ರಕ್ಷಿಸುವ ಬದ್ಧತೆ ಇಂದು ಬೇಕು. ಸಾಮಾಜಿಕ ನ್ಯಾಯದ ಕಲ್ಪನೆ, ಅದನ್ನು ಅನುಷ್ಠಾನಕ್ಕೆ ತರಲು ಬೇಕಾದ ಪಾಂಡಿತ್ಯ, ವಾದಮಂಡನೆ ಇವನ್ನು ಅವರಿಂದ ಕಲಿಯಬೇಕಾಗಿದೆ. ಪ್ರಜಾಪ್ರಭುತ್ವದ ಅವರ ವ್ಯಾಖ್ಯಾನವು ಇಂದು ಅತ್ಯಂತ ಪ್ರಸ್ತುತವಾಗಿದೆ. ಮುಖ್ಯವಾಗಿ ಅಂಬೇಡ್ಕರ್ ಅವರ ಚಿಂತನೆಯ ಬೆಂಬಲವಿಲ್ಲದೆ ದಲಿತ ಸಮುದಾಯಗಳ ಒಗ್ಗೂಡುವಿಕೆ ಸಾಧ್ಯವೇ ಇಲ್ಲ. ಅಂಬೇಡ್ಕರ್, ಗಾಂಧಿ ಇವರುಗಳು ಪಡೆದಂಥ ರಾಜಕೀಯ, ಸಾಮಾಜಿಕ ಅನುಭವವುಳ್ಳ ಮೇಧಾವಿ ಚಿಂತಕರು ವಿಶ್ವದಲ್ಲಿ ಇಲ್ಲ. ಅವರನ್ನು ಕುಬ್ಜರಾಗಿಸುವ ಬದಲು ಅವರಿಬ್ಬರನ್ನೂ ನಮ್ಮ ಸಹಯಾತ್ರಿಕರನ್ನಾಗಿ ಮಾಡಿಕೊಳ್ಳುವ ತುರ್ತು ಅವಶ್ಯಕತೆಯಿದೆ. ಅವರ ಲೋಕಗ್ರಹಿಕೆಗಳನ್ನು, ತಾತ್ವಿಕ ಚಿಂತನೆಗಳನ್ನು ಅಂತಿಮವಾಗಿ ಅವು ಒಂದೇ ಎಂದು ಸಾಧಿಸುವ ಪ್ರಯತ್ನವು ತಾತ್ವಿಕವಾಗಿ ಅಸಾಧ್ಯ ಮತ್ತು ಅಸಂಗತ. ಅದು ಅವಶ್ಯಕವೂ ಅಲ್ಲ. ಆದರೆ ಅವರ ಅನುಭವ ಮತ್ತು ಕ್ರಿಯೆಗಳನ್ನು ನಾವು ನಮ್ಮ ಹೋರಾಟಗಳಿಗಾಗಿ ಒಗ್ಗಿಸಿಕೊಳ್ಳುವುದು ಅತ್ಯಂತ ನೈತಿಕವಾದ ಕೆಲಸವಾಗಿದೆ. ನೆನಪಿರಲಿ. ಗಾಂಧಿ ಸೃಷ್ಟಿಸಿದ 'ಹರಿಜನ ಸಂಘ'ದ ಮೂಲ ಹೆಸರು ಅಸ್ಪೃಶ್ಯತಾ ನಿವಾರಣ ಸಮಿತಿಯೆಂದಿತ್ತು. ಆಗ ಅಂಬೇಡ್ಕರ್ ಅದರ ಸದಸ್ಯರಾಗಿದ್ದರು. ಆ ಸಂದರ್ಭದಲ್ಲಿ ಅದರಿಂದ ಹೊರಬರುವ ಮೊದಲು ಬರೆದ ಪತ್ರದಲ್ಲಿ ಅಂಬೇಡ್ಕರ್ ಹೇಳುತ್ತಾರೆ, "ಕೇವಲ ಕಾನೂನುಗಳಿಂದ ಹಿಂದೂಗಳು ಮತ್ತು ದಲಿತರ ಮಧ್ಯ ಇರುವ ಅಸಮಾನತೆಯನ್ನು ನಿವಾರಿಸಲಾಗದು. ಅದು ಪ್ರೀತಿಯಿಂದ ಮಾತ್ರ ಸಾಧ್ಯ". ಇದೂ ನೆನಪಿರಲಿ, ಪ್ರೀತಿ, ಕರುಣೆಯಿಂದಲೇ ಪರಿವರ್ತನೆ ಸಾಧ್ಯವೆಂದು ನಂಬಿದ್ದ ಗಾಂಧಿ ಅದನ್ನು ಕಾನೂನುಗಳ ಮೂಲಕ ಸಾಧಿದಲು ಅನುವಾಗುವ ಸಂವಿಧಾನವನ್ನು ಅಂಬೇಡ್ಕರ್ ಬರೆಯುವಂತಾಗಲಿ ಎಂದು ಬಯಸಿದ್ದರು. ಹಾಗೆ ಆಯಿತು ಕೂಡ.

ಕೊನೆಗೂ ಪರಿಹಾರವಿಲ್ಲದೆ ಉಳಿಯುವ ಪ್ರಶ್ನೆಯೆಂದರೆ ಜಾತಿವ್ಯವಸ್ಥೆಯೆ. ನೈತಿಕತೆ ಹಾಗೂ ಮನಸ್ಸುಗಳ ಪರಿವರ್ತನೆಯಿಂದ ಹಿಂದೂ ಸಮಾಜವನ್ನು ಶುದ್ಧೀಕರಿಸುವ ಗಾಂಧಿಯವರ ಪ್ರಯತ್ನ ಕಾನೂನು, ಸಂವಿಧಾನ ಹಾಗೂ ಪ್ರಭುತ್ವದ ಕ್ರಿಯೆಗಳಿಂದ ಜಾತಿವ್ಯವಸ್ಥೆಯನ್ನು (ಕೊನೇ ಪಕ್ಷ ಅಸ್ಪೃಶ್ಯತೆಯನ್ನು ನಿವಾರಿಸುವ ಅಂಬೇಡ್ಕರ್‌ರ ಪ್ರಯತ್ನ ಇವೆರಡೂ ವಿಫಲವಾಗಿವೆ. ಇವೆರಡೂ ಒಟ್ಟಿಗೆ ಆಗುವುದು ಅವಶ್ಯಕವೆಂದು ಇಬ್ಬರೂ ನಂಬಿದ್ದರು. ಆದರೆ ನೀವು ಯಾವ ದಾರಿಯಲ್ಲಿ ಹೆಜ್ಜೆ ಇಟ್ಟರೂ ಎದುರಾಗುವುದು ಜಾತಿಯೆನ್ನುವ 'ರಾಕ್ಷಸ' ಎಂದು ಅಂಬೇಡ್ಕರ್ ಹೇಳಿದ್ದು ಸತ್ಯವಾಗಿಯೇ ಉಳಿದಿದೆ. ಮಾಹಿತಿ ತಂತ್ರಜ್ಞಾನವನ್ನು ಆಧರಿಸಿದ ಜಾಗತೀಕರಣವು ಜಾತಿಯನ್ನು ಹೋಗಲಾಡಿಸುವ ಬದಲು ಗಟ್ಟಿಗೊಳಿಸಿವೆ ಎನ್ನುವುದನ್ನು ಇತ್ತೀಚಿನ ಎರಡು ಬಹು ಚರ್ಚಿತ ಕೃತಿಗಳಾದ ಅಜಂತಾ ಸುಬ್ರಮಣಿಯನ್ ಅವರ The Caste of Merit ಮತ್ತು ಇಸಾಬೆಲ್ ವಿಲ್ಕೆರ್‌ಸನ್ ಅವರ Caste:The Origin of Our Discontents ಸಾಬೀತು ಮಾಡಿವೆ. ಜಾತಿವಿನಾಶವೆನ್ನುವ ಪರಿಕಲ್ಪನೆ ಮತ್ತು ಪದಗಳೆರಡೂ ರಾಜಕೀಯದ ನುಡಿಗಟ್ಟಿನಿಂದಲೇ ಗಡಿಪಾರಾಗಿವೆ. ಅಲ್ಲದೆ ಇಂದಿನ ಶಿಕ್ಷಿತ ಮಧ್ಯಮ ವರ್ಗವು ಜಾತಿಯೆನ್ನುವುದನ್ನು ಪ್ರಸ್ತಾಪ ಮಾಡುವುದೇ ಅನಾಧುನಿಕ, ಇಂಥ ಪ್ರಾಚೀನವಾದ ಗುರುತುಗಳು ನಮಗೆ ಬೇಡ ಎಂದು ಹೇಳುತ್ತಿವೆ. ಅಂದರೆ ಈ ವರ್ಗವು ಬಯಸುತ್ತಿರುವುದು ಒಂದು ಸಾಮೂಹಿಕ ವಿಸ್ಮೃತಿಯನ್ನು ಅಥವಾ ಉದ್ದೇಶಪೂರ್ವಕವಾದ ಅವಗಣನೆಯನ್ನು, ಇಂಥ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಜಾತಿ ಕೇಂದ್ರಿತ ವಿಶ್ಲೇಷಣೆಯನ್ನು ಸಮಕಾಲೀನ ಸೂಕ್ಷ್ಮಗಳೊಂದಿಗೆ ಮಂಡಿಸುವುದು ಅನಿವಾರ್ಯವಾಗುತ್ತದೆ. ತನ್ನ ಹೊಸ ಅವತಾರದಲ್ಲಿ ಯಂತ್ರ ನಾಗರೀಕತೆಯು ತಂದಿರುವ ಭೀಕರವಾದ ಅಸಮಾನತೆಗಳ ಎದುರಲ್ಲಿ ಅತಿ ಆದರ್ಶಮಯವೆನಿಸಿದರೂ ಗಾಂಧಿ ಚಿಂತನೆ ಅನಿವಾರ್ಯವಾಗುತ್ತದೆ. ದೇಶದ್ರೋಹದ ಕಾನೂನನ್ನು ಭಾರತದ ಪ್ರಜೆಗಳ ಮೇಲೆ ವಸಾಹತುಶಾಹಿ ಪ್ರಭುತ್ವವು ಹೇರಿದಾಗ ಗಾಂಧಿ ನೀಡಿದ ಉತ್ತರ ಈಗಂತೂ ಜೀವದುಸಿರಾಗಬಲ್ಲದು.

ಗಾಂಧಿ ಮತ್ತು ಅಂಬೇಡ್ಕರ್ ಕುರಿತ ಲೇಖನವೊಂದರಲ್ಲಿ ರಾಮಚಂದ್ರಗುಹಾ ಶಾಹೀನ್‌ಬಾಗ್‌ನ CAA ವಿರೋಧಿ ಯುವಜನತೆ ಗಾಂಧಿ ಮತ್ತು ಅಂಬೇಡ್ಕರ್ ಇವರಿಬ್ಬರ ಭಾವಚಿತ್ರಗಳನ್ನು ಇಟ್ಟುಕೊಂಡು ತಮ್ಮ ಪ್ರತಿಭಟನೆ ನಡೆಸುತ್ತಿದ್ದುದನ್ನು ತುಂಬಾ ಖುಷಿಯಿಂದ ವರ್ಣಿಸುತ್ತಾರೆ. ಕೆಲವು ದಶಕಗಳಲ್ಲಿ ಗಾಂಧಿವಾದಿಗಳು ಅಂಬೇಡ್ಕರ್ ವಿಚಾರಗಳನ್ನು ಲಕ್ಷಿಸುತ್ತಾ ಬಂದದ್ದು,, ನಂತರ ಇತ್ತೀಚೆಗೆ ದಲಿತ ಪರ ಬರಹಗಾರರು ಹಾಗೂ ಸಂಘಟನೆಗಳು ಗಾಂಧಿಯವರನ್ನು ಕಟುವಾಗಿ ಟೀಕಿಸಿದ್ದನ್ನು ನೆನಪು ಮಾಡಿಕೊಂಡು ಈ ತಲೆಮಾರಿನವರಾದರೂ ಗಾಂಧಿ, ಅಂಬೇಡ್ಕರ್‌ರನ್ನು ಪ್ರತಿದ್ವಂದಿಗಳಂತೆ ನೋಡುವ ಬದಲಾಗಿ ಸಹಯಾತ್ರಿಕರನ್ನಾಗಿ ನೋಡಬಹುದೇನೋ ಎಂದು ಆಶಿಸುತ್ತಾರೆ. ಇಂಥ ಚಿಂತನೆಗೆ ಗುಹಾ ಅವರಿಗೆ ಪ್ರಭಾವಿಯಾದ ಮಾದರಿಯು ಕಾಣುವುದು ದೇವನೂರ ಮಹಾದೇವ ಮತ್ತು ಡಿ.ಆರ್. ನಾಗರಾಜ್‌ರ ಬರಹಗಳಲ್ಲಿ ಇಬ್ಬರು ವಿಭಿನ್ನ ಯಾತ್ರೆಗಳ

(೧೧ನೇ ಪುಟಕ್ಕೆ

ಪ್ರಚಲಿತ

# ಖೈರ್ಲಾಂಜಿಯಿಂದ ಹಾಥ್‌ರಸ್‌ವರೆಗೆ

## (ದಲಿತ ಮಹಿಳೆಯರ ಮೇಲಿನ ಅತ್ಯಾಚಾರದ ಅಂತ್ಯವಿಲ್ಲದ ಕಥೆ)

–ಸ್ಮೃತಿ ಕೊಪ್ಪೀಕರ್

**ನಿರ್ಭಯಾ ಪ್ರಕರಣದ ನಂತರ ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ರಾಷ್ಟ್ರದ ಮನಸ್ಸಾಕ್ಷಿ ಒಂದಿಷ್ಟು ಜಾಗೃತವಾಗಿದ್ದಂತೆ ಕಂಡು ಬಂದರೂ ಇತ್ತೀಚೆಗೆ ಉತ್ತರ ಪ್ರದೇಶದಲ್ಲಿನ ಉನ್ನಾಂವ್, ಹಾಥ್‌ರಸ್ ಮತ್ತು ಬಲರಾಂಪುರ ಪ್ರಕರಣಗಳು ಆ ಜಾಗೃತಿ ಅಷ್ಟೇನೂ ಆಳವಾದ್ದಾಗಿರಲಿಲ್ಲ ಎಂಬುದನ್ನು ಸಾಬೀತುಪಡಿಸುತ್ತಾ ಈ ಸಮಾಜದ ಮುಖದ ಮೇಲಿನ ಖೈರ್ಲಾಂಜಿಯ ಬೀಭತ್ಸ ಕ್ರೌರ್ಯ ನಮ್ಮ ಸಮಾಜದ ಮುಖದ ಮೇಲೆ ಮಾಯದ ಗಾಯವಾಗಿ ತಿಲಕದಂತೆ ನೆಲೆಸಿಬಿಟ್ಟಿರುವಂತೆ ತೋರುತ್ತದೆ. ಈಗ ಹೆಚ್ಚು ಸಂಭವಿಸುತ್ತಿರುವುದು ದಲಿತ ಮಹಿಳೆಯರ ಮೇಲಿನ, ಅದೂ ಹೆಚ್ಚು ನಿರ್ಭೀತ ಮತ್ತು ಬರ್ಬರವಾದ ದೌರ್ಜನ್ಯಗಳು ಎಂಬ ಸಂಗತಿ ಈ ಸಮಸ್ಯೆಯನ್ನು ನಮ್ಮ ಜಾತಿ ವ್ಯವಸ್ಥೆ ಮತ್ತು ಅದು ನಮ್ಮ ರಾಜಕಾರಣದೊಡನೆ ಹೊಂದಿರುವ ಸಂಬಂಧಗಳ ಬಗ್ಗೆ ಆಳವಾಗಿ ಚಿಂತಿಸುವಂತೆ ಒತ್ತಾಯಿಸುತ್ತಿದೆ. ಇಂತಹ ಚಿಂತನೆಯ ಒಂದು ಫಲ ಈ ಲೇಖನ.-ಸಂ**



ಉತ್ತರ ಪ್ರದೇಶದ ಹಾಥ್‌ರಸ್‌ನ ಬೂಲ್‌ಗಡಿ ಹಳ್ಳಿಯಲ್ಲಿ ೧೯ ವರ್ಷದ ಹೆಣ್ಣು ಮಗಳ ಮೇಲೆ ಅತ್ಯಾಚಾರ ನಡೆಯಿತು. ೧೪ ವರ್ಷದ ಹಿಂದೆ ಮಹಾರಾಷ್ಟ್ರದ ಖೈರ್ಲಾಂಜಿ ಗ್ರಾಮದಲ್ಲಿ ೧೭ವರ್ಷದ ಪ್ರಿಯಾಂಕ ಭೋತ್ಮಾಂಗೆ ಮತ್ತು ಅವಳ ತಾಯಿ ಸುರೇಖ ಮೇಲೂ ಅತ್ಯಾಚಾರವಾಯಿತು. ಇವರಿಬ್ಬರ ನೋವು ಹಾಗೂ ಭಯದಿಂದ ಹೊಮ್ಮಿದ ಒಡಳಾಳದ ಆಕ್ರಂದನ, ಏನೂ ಮಾಡಲಾಗದ ಅಸಹಾಯಕತೆಯ ಭಾವನೆ, ಭೀತಿ ನಿಜವಾಗಿಬಿಡುವ ಆತಂಕ, ಕೆಟ್ಟ ಕ್ರೌರ್ಯ ಎಲ್ಲಾ ಒಂದೇ ಬಗೆಯದೆನಿಸುತ್ತದೆ.

ದಲಿತ ಮಹಿಳೆಯರ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆಯ ಈ ಎರಡು ಪ್ರಕರಣಗಳ ನಡುವೆ ೧೪ ವರ್ಷಗಳ ದೀರ್ಘ ಅಂತರವಿದೆ. ನಿರ್ಭಯಾ ಪ್ರಕರಣದಿಂದ ಅಂತಹ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಭಾರತದ ಸಾಮೂಹಿಕ ಪ್ರಜ್ಞೆ ಮತ್ತು ಸೂಕ್ಷ್ಮತೆ ಹೆಚ್ಚು ತೀಕ್ಷ್ಣಗೊಂಡಿದೆ ಎಂದು ಭಾವಿಸಲಾಗಿತ್ತು. ಆದರೆ ೨೦೦೬ಕ್ಕೆ ಹೋಲಿಸಿದರೆ ಮಹಿಳೆಯರ ವಿಷಯದಲ್ಲಿ ಅದರಲ್ಲೂ ವಿಶೇಷವಾಗಿ ದಲಿತ ಮಹಿಳೆಯರ ವಿಷಯದಲ್ಲಿ ಅಂತಹ ಬದಲಾವಣೆಯೇನಾಗಿಲ್ಲ. ಅವರಿಗೇನೂ ಹೆಚ್ಚಿನ ರಕ್ಷಣೆ ಸಿಕ್ಕಿಲ್ಲ. ಬದಲಾಗಿ ದಲಿತ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಅತ್ಯಾಚಾರ ಹಲವು ಪಟ್ಟು ಹೆಚ್ಚಿದೆ.

ಸೆಪ್ಟೆಂಬರ್ ೨೯, ೨೦೦೬ರಲ್ಲಿ ಭೋತ್ಮಾಂಗೆಯಲ್ಲಿ ಪ್ರಿಯಾಂಕ, ಅವಳ ತಾಯಿ ಮತ್ತು ಪ್ರಿಯಾಂಕಳ ಇಬ್ಬರು ಹರೆಯದ ಸೋದರರ ಛಿದ್ರವಾದ ದೇಹವನ್ನು ಮಹಾರಾಷ್ಟ್ರದ ಭಂಡಾರ ಜಿಲ್ಲೆಯ ಖೈರ್ಲಾಂಜಿಯ ಕಾಲುವೆಯಿಂದ ಹೊರತೆಗೆಯಲಾಯಿತು. ಆದರೂ ಸಾರ್ವಜನಿಕವಾಗಿ, ಅದರಲ್ಲೂ ವಿಶೇಷವಾಗಿ ದಲಿತ ಸಂಘಟನೆಗಳಿಂದ ತೀವ್ರವಾದ ವಿರೋಧ ಬರುವ ತನಕ ಮಹಾರಾಷ್ಟ್ರ ಸರ್ಕಾರ ಕ್ರಮತೆಗೆದುಕೊಳ್ಳಲೇ ಇಲ್ಲ. ಈ ಪ್ರತಿಭಟನೆಗಳಿಂದ ಸ್ಫೂರ್ತಿ ಪಡೆದ ಮುಂಬೈ ಹಾಗೂ ದಿಲ್ಲಿಯ ಮಾಧ್ಯಮಗಳು ಅಂದಿನ ಸಂಜೆ ನಡೆದ ಭಯಾನಕ ಘಟನೆಗಳನ್ನು ಪ್ರಕಟಿಸಿದವು. ಈ ವಿಷಯದಲ್ಲೂ ಕೂಡ ಕಳೆದ ೧೪ ವರ್ಷಗಳಲ್ಲಿ ಅಂತಹ ಬದಲಾವಣೆಗಳೇನೂ ಆಗಿಲ್ಲ.

ಅತ್ಯಾಚಾರಕ್ಕೊಳಗಾದವರು ಮಾವೋವಾದಿಗಳಿರಬೇಕೆಂಬ ಅನುಮಾನವನ್ನು ಮಹಾರಾಷ್ಟ್ರದ ಆಗಿನ ಗೃಹಮಂತ್ರಿಗಳು ವ್ಯಕ್ತಪಡಿಸಿದರು. ಹಾಥ್‌ರಸ್ ಪ್ರಕರಣದಲ್ಲಿ ಉ. ಪ್ರದ ಅಧಿಕಾರಿಗಳು ಇನ್ನೂ ಕೆಟ್ಟದಾಗಿ ನಡೆದುಕೊಂಡರು. ಮೊದಲು ಅಂತಹ ಘಟನೆ ನಡೆದೇ ಇಲ್ಲ ಅಂದರು. ಅವಳ ಮನೆಯವರ ಹೇಳಿಕೆಯ ಪ್ರಕಾರ ಅಂತಹ ಪಾಶವೀಯತೆಗೆ ಒಳಗಾಗಿದ್ದ ಹತ್ತೊಂಬತ್ತು ವರ್ಷದ ಹುಡುಗಿಯನ್ನು ಉರಿಬಿಸಿಲಿನಲ್ಲಿ ಹೊರಗೆ ಬೆಂಚಿನ ಮೇಲೆ ಮಲಗಿಸಿದರು. ಗಂಭೀರವಾಗಿ ಗಾಯಗೊಂಡಿದ್ದರೂ ಸ್ಥಳೀಯ ಆಸ್ಪತ್ರೆಗೆ ಕಳುಹಿಸಿದರು. ಪರಿಸ್ಥಿತಿ ತುಂಬಾ ತೀವ್ರವಾದ ಮೇಲಷ್ಟೆ ದೆಹಲಿಗೆ ಕಳುಹಿಸಿದರು. ಕೊನೆಗೆ ಮನೆಯವರನ್ನು ಮನೆಯಲ್ಲಿ ಕೂಡಿ ಹಾಕಿ, ನಡುರಾತ್ರಿ ದೇಹವನ್ನು ಸುಟ್ಟರು. ಜೊತೆಗೆ ಮನೆಯವರಿಗೆ "ನಿಮ್ಮಿಂದಲೂ ಒಂದಿಷ್ಟು ತಪ್ಪುಗಳಾಗಿವೆ ಎಂಬುದು ಗೊತ್ತಿರಲಿ" ಎಂದು ಧಮಕಿ ಬೇರೆ ಹಾಕಿದರು. ಉ:ಪ್ರ:ದ ಸರ್ಕಾರ ತಾನು ಯಾವುದಕ್ಕೂ ಸೊಪ್ಪು ಹಾಕುವುದಿಲ್ಲ ಅಂತ ತನ್ನ ಮೌನದ ಮೂಲಕ ತೋರಿಸಿಬಿಟ್ಟಿತು.

ದಲಿತ ಹೆಣ್ಣುಮಕ್ಕಳಿಗೆ ಬದುಕಿನಲ್ಲೂ ಘನತೆಯಿಲ್ಲ. ಸಾವಿನಲ್ಲಿಯೂ ಘನತೆಯಿಲ್ಲ. ಖೈರ್ಲಾಂಜಿಯಿಂದ ಹಾಥ್‌ರಸ್‌ವರೆಗೆ ಇಂತಹ ಸಾವಿರಾರು ಘಟನೆಗಳು ನಡೆದು ಹೋಗಿವೆ. ಹೆಚ್ಚಿನ ಸಂದರ್ಭಗಳಲ್ಲಿ ಶವಗಳಾಗಿರುವುದು ಹೆಣ್ಣುಮಕ್ಕಳು; ಅದರಲ್ಲೂ ವಿಶೇಷವಾಗಿ ದಲಿತ ಹಾಗೂ ಬುಡಕಟ್ಟು ಜನಾಂಗದ ಹೆಣ್ಣುಮಕ್ಕಳು. ಅವರ ಶವಗಳ ಮೇಲೆ ಗಂಡಸುತನದ ನಂಜು, ಪುರುಷಾಧಿಕಾರ ಅಥವಾ ಜಾತಿಯ ಪಾರಮ್ಯ ಢಾಳಾಗಿ ಕಾಣುತ್ತವೆ.

೨೦೦೬ರಿಂದ ೨೦೧೯ರವರೆಗೆ ೪ ಲಕ್ಷಕ್ಕಿಂತ ಹೆಚ್ಚು ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ ಬಹುಪಾಲು ಅತ್ಯಾಚಾರಗಳು ನಡೆದಿರುವುದು ದಲಿತ ಮಹಿಳೆಯರ ಮೇಲೆ. ಒಂದು ಅಂದಾಜಿನ ಪ್ರಕಾರ ನಡೆಯುವ ನಾಲ್ಕು ಅತ್ಯಾಚಾರಗಳಲ್ಲಿ ಒಂದು ದಲಿತ ಹೆಣ್ಣು ಮಗಳ ಮೇಲೆ ಆಗಿರುತ್ತದೆ. ಇನ್ನು ಎಷ್ಟೋ ಅತ್ಯಾಚಾರಗಳು ವರದಿಯಾಗುವುದೇ ಇಲ್ಲ. ಇನ್ನು ಗಂಡನಿಂದಾಗುವ ಅತ್ಯಾಚಾರ ಇದರಲ್ಲಿ ಸೇರುವುದಿಲ್ಲ.

### ಅಂಕಿಗಳು

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಅಂಕಿ–ಅಂಶಗಳ ಪ್ರಕಾರ ೨೦೦೫ರಲ್ಲಿ ಸುಮಾರು ೨೦,೦೦೦ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ೧೦ವರ್ಷದ ನಂತರ ಅದು ೪೦,೦೦೦ ಆಯಿತು. ತೀರಾ ಕ್ರೂರ, ಭೀಕರವೆನಿಸುವ ಪ್ರಕರಣಗಳು ಅಗೊಮ್ಮೆ ಈಗೊಮ್ಮೆ ಅಪರೂಪಕ್ಕೆ ಸುದ್ದಿಯಾಗಬಹುದು. ಜನರ ಗಮನವನ್ನು ಸೆಳೆಯಬಹುದು. ಡಿಸೆಂಬರ್ ೨೦೧೨ರಲ್ಲಿ ನಿರ್ಭಯಾಳ ಭಯಾನಕ ಪಾಡು ದೇಶವನ್ನು ತಲ್ಲಣಗೊಳಿಸಿತ್ತು. ಜನರ ತೀವ್ರ ಪ್ರತಿರೋಧ ವ್ಯಕ್ತವಾಯಿತು. ರಾಜ್ಯ ಹಾಗೂ ಕೇಂದ್ರದಲ್ಲಿ ಸಾರ್ವಜನಿಕರು ಕಾಂಗ್ರೆಸ್ ಸರ್ಕಾರಕ್ಕೆ ವಿರೋಧ ವ್ಯಕ್ತಪಡಿಸಿದರು. ಅತ್ಯಾಚಾರಕ್ಕೆ ಸಂಬಂಧಿಸಿಂತೆ ಅಪರಾಧದ ಕಾನೂನಿನಲ್ಲೂ ಬದಲಾವಣೆ ಆಯಿತು. "ಇನ್ನು ನಿರ್ಭಯಾಗಳು ಬೇಡ" ಅನ್ನುವ ಘೋಷಣೆಗಳು ಎಲ್ಲೆಡೆ ಕಾಣಿಸಿಕೊಂಡವು. ಒಂದು ನಿಧಿಯನ್ನು ಸ್ಥಾಪಿಸಲಾಯಿತು. ಪ್ರಕರಣವನ್ನು ಭಾರತೀಯ ಜನತಾ ಪಕ್ಷ ೨೦೧೪ರ ಚುನಾವಣೆಯಲ್ಲಿ ಬಳಸಿಕೊಂಡಿತು.

ಅತ್ಯಾಚಾರ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿವೆ. ಯಾಕೆಂದರೆ **ಮಹಿಳೆಯರ ಮೇಲಿನ** ಅಪರಾಧಗಳನ್ನು **ಹೆಚ್ಚೆಚ್ಚು** ವರದಿ ಮಾಡುತ್ತಿದ್ದಾರೆ ಅಂತ ಹೇಳಲಾಗುತ್ತಿದೆ. ಇದು ಸ್ವಲ್ಪಮಟ್ಟಿಗೆ ನಿಜ ಇರಬಹುದು. ನಿರ್ಭಯಾ ಪ್ರಕರಣದಲ್ಲಿ ಮಾಧ್ಯಮಗಳು ನಿರಂತರವಾಗಿ ಹಾಗೂ ವ್ಯಾಪಕವಾಗಿ ವರದಿ ಮಾಡುತ್ತಾ ಬಂದಿದ್ದರಿಂದ ಅತ್ಯಾಚಾರದ ವರದಿಗೆ ಸಂಬಂಧಿಸಿದಂತೆ ಇದ್ದ ಕಳಂಕ ಒಂದಿಷ್ಟು ಕಡಿಮೆಯಾಗಿರಬಹುದು. ಆದರೆ ಅಷ್ಟು ಸಂಖ್ಯೆಯ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಅನ್ನುವುದಂತೂ ಸಾಬೀತಾಯಿತಲ್ಲವೆ? ಪ್ರತಿವರ್ಷ ೩೨, ಸಾವಿರದಿಂದ ೩೩ ಸಾವಿರ ಮಂದಿ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ೨೦೧೬ರ ಸಮೀಕ್ಷೆಯೊಂದರ ಪ್ರಕಾರ ಹಿಂದಿನ ೭ ವರ್ಷಗಳಲ್ಲೇ ಅತಿ ಹೆಚ್ಚು ಅತ್ಯಾಚಾರ ಪ್ರಕರಣಗಳು ನಡೆದಿವೆ. ಅಂದರೆ ದಿನಕ್ಕೆ ೯೦ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿದ್ದಾರೆ.

ಬಹಳಷ್ಟು ಪ್ರಕರಣಗಳು ಕೇವಲ ಸಂಖ್ಯೆಗಳಾಗಿ ಉಳಿದುಕೊಂಡು ಬಿಡುತ್ತವೆ. ಎಲ್ಲೋ ಕೆಲವು ಪ್ರಕರಣಗಳು ಮಾತ್ರ ನೆನಪಿನಲ್ಲಿ ಉಳಿದುಕೊಳ್ಳುತ್ತವೆ. ಜಮ್ಮುವಿನ ಕಥುವಾದ ದೇವಸ್ಥಾನದಲ್ಲಿ ಬಾಲಕಿಯ ಮೇಲೆ ನಡೆದ ಅತ್ಯಾಚಾರ, ಚೆನ್ನೈನಲ್ಲಿ ೧೨ ವರ್ಷದ ಬಾಲಕಿಯ ಮೇಲೆ ಏಳು ತಿಂಗಳ ಕಾಲ ಅತ್ಯಾಚಾರ ನಡೆದದ್ದು, ಕೇರಳದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ಅತ್ಯಾಚಾರ ಉ.ಪ್ರದ ಉನ್ನಾಂವ್‌ನಲ್ಲಿ ನ್ಯಾಯಾಲಯದ ಬಳಿಯಲ್ಲೇ ಅತ್ಯಾಚಾರಕ್ಕೆ ಒಳಗಾದವಳಿಗೆ ಬೆಂಕಿ ಹಚ್ಚಿದ್ದು,ಾ ರಾಜ್ಯದ್ಲ ಬಿಜೆಪಿ ಎಂಎಲ್‌ಎ ಕುಲ್‌ದೀಪ್ ಸೆಂಗಾರ್ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ ಇಡೀ ಕುಟುಂಬವನ್ನೇ ನಿರ್ನಾಮ ಮಾಡಿದ ಪ್ರಕರಣ, ಹೈದರಾಬಾದಿನಲ್ಲಿ ಯುವಪಶುವೈದ್ಯಳ ಮೇಲೆ ನಡೆದ ಅತ್ಯಾಚಾರ, ಹೀಗೆ ಎಲ್ಲೋ ಕೆಲವು ಘಟನೆಗಳು ಮಾತ್ರ ನೆನಪಿನಲ್ಲಿ ಉಳಿದುಕೊಳ್ಳುತ್ತವೆ.

ಅತ್ಯಾಚಾರ ಪ್ರಕರಣವನ್ನು ಕೇವಲ ಸಂಖ್ಯೆಗಳಾಗಿ ನೋಡುವುದು ಮಹಿಳೆಯರ ಮೇಲೆ ದಿನಾ ನಡೆಯುತ್ತಿರುವ ಕ್ರೌರ್ಯವನ್ನು ಬರೀ ಮೇಲೆ ಮೇಲೆ ನೋಡಿಕೊಂಡು ಹೋದ ಹಾಗೆ ಆಗುತ್ತದೆ. ಮಹಿಳೆಯರ ಮೇಲಿನ ಅತ್ಯಾಚಾರವಾಗಲಿ ಅಥವಾ ಇನ್ಯಾವುದೇ ಘಟನೆಗೂ ಜಾತಿಗೂ ಇರುವ ಸಂಬಂಧವನ್ನು ಕಡೆಗಣಿಸುವುದಕ್ಕೆ ಸಾಧ್ಯವಿಲ್ಲ. ರಾಜ್ಯಕ್ಕೆ ಸಂಬಂಧಿಸಿದ ಅಂಕಿ ಅಂಶವನ್ನು ಗಮನಿಸಿದರೆ ಗಂಡಸುತನದ ವಿಷಕಾರಕತೆ ಹಾಗೂ ಜಾತಿಯ ಅಂಧಾಭಿಮಾನ ತೆಕ್ಕೆ ಹಾಕಿಕೊಂಡಿರುವ ರಾಜ್ಯಗಳಾದ ಉತ್ತರ ಪ್ರದೇಶ,

ರಾಜಾಸ್ಥಾನ, ಮತ್ತು ಮಧ್ಯಪ್ರದೇಶಗಳಲ್ಲಿ ದಲಿತ ಮಹಿಳೆಯರ ಮೇಲೆ ಅತಿ ಹೆಚ್ಚು ಲೈಂಗಿಕ ದೌರ್ಜನ್ಯ ನಡೆದಿವೆ. ಇದನ್ನು ನಿರಂತರವಾಗಿ ಗಮನಿಸಬಹುದು. ಅತ್ಯಾಚಾರಿಗಳು ಯಾವಾಗಲೂ ಮೇಲ್ಜಾತಿಯ ಗಂಡಸರೇ ಆಗಿರುತ್ತಾರೆ.

೨೦೦೯ ಹಾಗೂ ೨೦೧೮ರ ನಡುವೆ ದಲಿತರ ಮೇಲೆ ದೌರ್ಜನ್ಯ ಶೇಕಡ ೬ರಷ್ಟು ಹೆಚ್ಚಿದೆ. ಇದನ್ನು **ನ್ಯಾಯಕ್ಕಾಗಿ** ರಾಷ್ಟ್ರೀಯ ಚಳುವಳಿ ಈ ವರ್ಷ ವರದಿ ಮಾಡಿದೆ. ವರದಿಯ ಪ್ರಕಾರ "ಪ್ರಬಲ ಜಾತಿಯವರು ನಡೆಸುವ ಹಿಂಸೆಯಲ್ಲಿ ಸಾಮಾನ್ಯವಾಗಿ ದೌರ್ಜನ್ಯಕ್ಕೆ ಒಳಗಾಗುವವರು ದಲಿತ ಮಹಿಳೆಯರು. ಕೋವಿಡ್-೧೯ರ ಪಿಡುಗಿನ ಸಮಯದಲ್ಲೂ ದಲಿತ ಮಹಿಳೆಯರು ವಿವಿಧ ರೀತಿಯ ದೌರ್ಜನ್ಯಕ್ಕೆ ತುತ್ತಾಗಿದ್ದಾರೆ."

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಕೂಡ ದಲಿತರ ಮೇಲಿನ ಅತ್ಯಾಚಾರ ಹೆಚ್ಚುತ್ತಿರುವುದನ್ನು ದಾಖಲಿಸಿದೆ. ೨೦೧೩ರಿಂದ ೨೦೧೮ರವರೆಗೆ ಪ್ರತಿ ವರ್ಷ ಅಂತಹ ದೌರ್ಜನ್ಯ ನಿರಂತರವಾಗಿ ಏರುತ್ತಿರುವುದನ್ನು ಅದು ದಾಖಲಿಸಿದೆ. ಉತ್ತರ ಪ್ರದೇಶದಲ್ಲಿ ದಲಿತರ ಮೇಲೆ ಅತಿ ಹೆಚ್ಚು ದೌರ್ಜನ್ಯ ನಡೆದಿದೆ. ಆಗಿರುವ ಒಟ್ಟು ಪ್ರಕರಣದಲ್ಲಿ ಶೇಕಡ ೨೫.೬ರಷ್ಟು ಪ್ರಕರಣಗಳು ಅಲ್ಲೇ ನಡೆದಿವೆ. ೨೦೧೭ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡುಕಟ್ಟುಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ೧೯೮೯ರ ಅಡಿಯಲ್ಲಿ ನಿರ್ದಿಷ್ಟವಾಗಿ ಹಾಗೂ ಪ್ರತ್ಯೇಕವಾಗಿ ದಾಖಲಾಗಿರುವ ಪ್ರಕರಣಗಳನ್ನು ೨೦೧೭ರಲ್ಲಿ ಪ್ರಕಟಿಸಿದೆ. ಒಟ್ಟಾರೆಯಾಗಿ ೫೭೭೫ ಪ್ರಕರಣಗಳು ನಡೆದಿವೆ. ಅದರಲ್ಲಿ ಶೇಕಡ ೫೫ರಷ್ಟು "ಉದ್ದೇಶಪೂರ್ವಕವಾಗಿ ದಲಿತರನ್ನು ಅವಮಾನಿಸುವ ಉದ್ದೇಶದಿಂದಲೇ ನಡೆದ ದೌರ್ಜನ್ಯಗಳು. ಉಳಿದದ್ದು ದಲಿತರ ಭೂಮಿಯ ಒಡೆತನ, ಸಾರ್ವಜನಿಕ ಸ್ಥಳಗಳ ಬಳಕೆ ಹಾಗೂ ಸಾಮಾಜಿಕ ಬಹಿಷ್ಕಾರಕ್ಕೆ ಸಂಬಂಧಿಸಿದ ಪ್ರಕರಣಗಳು."

## ಸಂಖ್ಯೆಗಳ ಆಚೆ ನೋಡಿದರೆ ಜಾತಿ ಕಾಣಿಸುತ್ತದೆ

ಬೂಲ್‌ಗಡಿ- ಹಾಥ್ರಸ್‌ನಲ್ಲಿ ಅತ್ಯಾಚಾರಕ್ಕೆ ಒಳಗಾದವರು ಹಳ್ಳಿಯಲ್ಲಿದ್ದ ಕೆಲವೇ ದಲಿತ ಕುಟಂಬಕ್ಕೆ ಸೇರಿದವರು. ಮಾಧ್ಯಮಗಳೊಂದಿಗೆ ಮಾತನಾಡಿದ ಆಕೆಯ ಸೋದರನ ಪ್ರಕಾರ ಅವರ ನೆರೆಯ ಮೇಲ್ಜಾತಿಯ ಠಾಕೂರ್ ಕುಟುಂಬದ ಜೊತೆಗೆ ಭೂಮಿಗೆ ಸಂಬಂಧಿಸಿದಂತೆ ವಿವಾದ ಇತ್ತು. ಕೆಲವು ವರ್ಷಗಳ ಹಿಂದೆ ಅವರ ತಾತ ಇವರ ದಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಹೋಗಿ ತನ್ನ ಬೆರಳುಗಳನ್ನು ಕಳೆದುಕೊಂಡಿದ್ದ. ಅಲ್ಲಿ ಅಂಗಡಿಯವರು ಇವರು ಕೊಡುವ ದುಡ್ಡಿನ ಮೇಲೆ ನೀರು ಸಿಂಪಡಿಸುತ್ತಾರಂತೆ. ಅಂಗಡಿಗಳಲ್ಲಿ ಇವರು ಸಾಮಾನುಗಳನ್ನು ಮುಟ್ಟುವ ಹಾಗಿಲ್ಲ. ಇವೆಲ್ಲವನ್ನು ಅವನು ವಿವರವಾಗಿ ಹೇಳಿದ್ದ.

ಲೈಂಗಿಕ ದೌರ್ಜನ್ಯವನ್ನು ಜಾತಿಯ ಹಿನ್ನೆಲೆಯಲ್ಲೇ ನೋಡಬೇಕು. ಅದರಿಂದ ಪ್ರತ್ಯೇಕಿಸಿ ನೋಡುವುದರಲ್ಲಿ ಅರ್ಥವಿಲ್ಲ. ಠಾಕೂರ್ ಪುರುಷರು ಹುಡುಗಿಯರನ್ನು ಹಿಂಸಿಸಿ, ಅವರ ಮೇಲೆ ಅತ್ಯಾಚಾರ ಮಾಡುವುದೇ "ನಿಮ್ಮ ಅಂತಸ್ತಿಗೆ ತಕ್ಕಂತೆ ಬದುಕಿ, ನಮ್ಮ ಸರಿಸಮವಾಗಿ ನಿಲ್ಲಲು ಪ್ರಯತ್ನಿಸಬೇಡಿ" ಅಂತ ಸೂಚಿಸುವುದಕ್ಕಾಗಿ.

ಖೈರ್ಲಾಂಜಿಯಲ್ಲಿ ಆಗಿದ್ದು ಇದೇ. ಕುನ್ಬಿ ಜಾತಿಯವರೇ ಪ್ರಧಾನವಾಗಿರುವ ಹಳ್ಳಿಯಲ್ಲಿ ಇರುವ ಕೆಲವೇ ದಲಿತ ಕುಟುಂಬಕ್ಕೆ ಸೇರಿದವರು ಈ ಭೋತ್ಮಾಂಗೆಗಳು. ಅವರಿಗೆ ಐದು ಎಕರೆ ಭೂಮಿ ಇತ್ತು. ಸುರೇಖ ತಾನೇ ಸ್ವತಃ ಭೂಮಿಯ ವ್ಯವಹಾರ ನೋಡಿಕೊಳ್ಳುತ್ತಿದ್ದಳು. ತನ್ನ ಮಕ್ಕಳು ಚೆನ್ನಾಗಿ ಓದಬೇಕು ಅಂತ ತುಂಬಾ ಆಸ್ಥೆ ವಹಿಸಿದ್ದಳು. ಖೈರ್ಲಾಂಜಿಯ ಪೋಲಿಸ್ ಒಬ್ಬ ಗ್ರಾಮದ ಕೆಲವರೊಂದಿಗೆ ಜಗಳಮಾಡಿಕೊಂಡಿದ್ದಾಗ ಇವಳು ಸಾಕ್ಷಿಯಾಗಿ ನಿಂತಿದ್ದಳು. ಒಟ್ಟಾರೆಯಾಗಿ ಅದೆಲ್ಲವನ್ನೂ ಮೇಲ್ಜಾತಿಯ ಗಂಡಸರ ವಿರುದ್ಧ ಸೆಡ್ಡು ಹೊಡೆಯುತ್ತಿದ್ದಾಳೆ ಅಂತ ಭಾವಿಸಲಾಯಿತು. ಹಾಗಾಗಿಯೇ ಆಕೆಯ ಕುಟುಂಬದ ವಿರುದ್ಧ ಅಷ್ಟೊಂದು ಕ್ರೂರವಾಗಿ ದೌರ್ಜನ್ಯ ನಡೆಸಲಾಗಿದೆ ಅಂತ ಸ್ಥಳೀಯರು ಮಾತಾನಾಡಿಕೊಳ್ಳುತ್ತಿದ್ದರು. ಹಾಗಾಇಯೇ ಆ ಕುಟುಂಬದವರಿಗೆ ಒಂದು ಪಕ್ಕಾ ಮನೆಯನ್ನು ಕಟ್ಟಿಕೊಳ್ಳಲು ಬಿಟ್ಟಿರಲಿಲ್ಲ. ಒಂದು ಯಃಕಶ್ಚಿತ್ ಹೆಣ್ಣುಮಗಳು ನಮ್ಮ ಕಡೆ ಬೆರಳು ತೋರುತ್ತಿದ್ದಾಳೆ ಅಂತ ಪ್ರಕರಣದಲ್ಲಿ ದೋಷಿಯಾದ ಹಳ್ಳಿಗನೊಬ್ಬ ನನ್ನ ಬಳಿ ಹೇಳಿದ್ದ.

ಸುರೇಖಳ ಮೇಲೆ ಅತ್ಯಾಚಾರ ಮಾಡಿದ್ದು ಮಾತ್ರವಲ್ಲ, ಆಕೆಯನ್ನು ಬೆತ್ತಲು ಮಾಡಿ ಹಳ್ಳಿಯ ಸುತ್ತ ಮೆರವಣಿಗೆ ಮಾಡಲಾಯಿತು. ನಂತರ ಒಂದು ದೊಡ್ಡ ಗುಂಪು ಅವಳ ಮೇಲೆ ಲೈಂಗಿಕವಾಗಿ ದೌರ್ಜನ್ಯ ನಡೆಸಿತು. ಆಕೆಯ ತಲೆ ಬುರುಡೆ ಮುರಿಯಿತು. ಆಕೆಯ ಕಣ್ಣು ತೆಗೆದರು. ಅಷ್ಟಕ್ಕೂ ತೃಪ್ತರಾಗದೆ ಆಕೆಯ ಮಗಳನ್ನೂ ಬೆತ್ತಲು ಮಾಡಿ ಮೆರವಣಿಗೆ ಮಾಡಿದರು. ಅವಳ ಮೇಲೂ ಅತ್ಯಾಚಾರ ನಡೆಸಲಾಯಿತು. ಅವಳ ಮರ್ಮಾಂಗವನ್ನು ಘಾಸಿಗೊಳಿಸಲಾಯಿತು. ಅವರ ಸೋದರನು ಇಂತದೇ ದೈಹಿಕ ಯಾತನೆಯನ್ನು ಅನುಭವಿಸಿದ. ಇವೆಲ್ಲಾ ಜಾತಿಯ ದೌರ್ಜನ್ಯಗಳು ಅನ್ನುವುದರಲ್ಲಿ ಅನುಮಾನವೇ ಇಲ್ಲ. "ಇದರಲ್ಲಿ ಇಡೀ ಗ್ರಾಮವೇ ಶಾಮೀಲಾಗಿತ್ತು. ಆ ಘಟನೆ ನಡೆಯುವಾಗ ನಾನು ನನ್ನ ಭೂಮಿಯಲ್ಲಿದ್ದೆ. ಪೊದೆಯೊಂದರ ಹಿಂದೆ ಅವಿತುಕೊಂಡಿದ್ದೆ" ಅಂತ ಸುರೇಖಳ ಗಂಡ ಭೈಯ್ಯಾಲಾಲ್ ಭೋತ್ಮಾಂಗೆ ಹೇಳಿದ.

ಸ್ಥಳೀಯ ಪೇದೆಗಳನ್ನು ಅಮಾನತ್ತುಗೊಳಿಸಲಾಯಿತು. ನಂತರ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಲಾಯಿತು. ಶೀಘ್ರ ಗತಿಯ(ಫಾಸ್ಟ್ ಟ್ರಾಕ್) ವಿಚಾರಣಾ ನ್ಯಾಯಾಲಯದಲ್ಲಿ ಎಂಟು ಜನರನ್ನು ಕೊಲೆಯ ಅಪರಾಧಿಗಳು ಎಂದು ನಿರ್ಧರಿಸಲಾಯಿತು. ಅವರಲ್ಲಿ ೬ ಜನರಿಗೆ ಮರಣದಂಡನೆ ವಿಧಿಸಲಾಯಿತು. ೨೦೧೦ರಲ್ಲಿ ಬಾಂಬೆ ಉನ್ನತ ನ್ಯಾಯಾಲಯದ ನಾಗಪುರ ಪೀಠವು ಮರಣದಂಡನೆಯನ್ನು ೨೫ ವರ್ಷಗಳ ಜೈಲು ಶಿಕ್ಷೆಗೆ ಇಳಿಸಿತು. ಅದು ಕೊಲೆಯನ್ನು "ಸೇಡಿನ ಕೊಲೆ" ಅಂತ ಕರೆಯಿತು. ಆದರೆ ಕೊಲೆಗಾರರು ಜಾತಿಯ ಪೂರ್ವಗ್ರಹದಿಂದ ಅದನ್ನು ಮಾಡಿರಲಿಲ್ಲ ಎಂದು ಹೇಳಿತು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಬುಡಕಟ್ಟು ಕಾಯ್ದೆಯನ್ನು ನಿರ್ಲಕ್ಷಿಸಲಾಯಿತು. ಅದಕ್ಕೆ ಒಂದು ಸಮರ್ಥನೆಯನ್ನು ಕಂಡುಕೊಳ್ಳಲಾಯಿತು.

ಅಷ್ಟೇ ದುರಾದೃಷ್ಟದ ಸಂಗತಿ ಅಂದರೆ ಆರೋಪಿಗಳನ್ನು ಅತ್ಯಾಚಾರದ ಅರೋಪಗಳಿಂದ ಮುಕ್ತಗೊಳಿಸಲಾಯಿತು. ಮೊಕದ್ದಮೆಯನ್ನು ಹೂಡುವುದರಲ್ಲಿ ಮತ್ತು ವೈದ್ಯಕೀಯ ತಪಾಸಣೆಯಲ್ಲಿ ವಿಳಂಬ, ಸಾಕ್ಷ್ಯವನ್ನು ನಾಶಮಾಡದಂತೆ ನೋಡಿಕೊಳ್ಳುವಲ್ಲಿ ಪೋಲಿಸರು ತೋರಿದ ನಿರ್ಲಕ್ಷ್ಯ, ಕಾನೂನು ಜರುಗಿಸುವುದರಲ್ಲಿ ತೋರಿದ ಉದಾಸೀನತೆ ಇವೆಲ್ಲಾ ಇದಕ್ಕೆ ಕಾರಣ. ತೀರ್ಪಿನಲ್ಲಿ ಪ್ರಿಯಾಂಕಳ ಇಡೀ ದೇಹದ ಮೇಲೆ ಆಗಿರುವ ಗಾಯಗಳ ಉಲ್ಲೇಖ ಬರುತ್ತದೆ. ಮತ್ತು ತಮ್ಮ ಲೈಂಗಿಕ ದೃಷ್ಟಿಯ ತೃಪ್ತಿಗಾಗಿ ಅವಳನ್ನು ವಿವಸ್ತ್ರಗೊಳಸಿದ್ದನ್ನೂ ಅದರಲ್ಲಿ ಉಲ್ಲೇಖಿಸಲಾಗಿದೆ. ಆದರೆ ಆಕೆಯ ಮೇಲೆ ಅತ್ಯಾಚಾರ ನಡೆದಿಲ್ಲ ಅಂತ ನ್ಯಾಯಾಲಯ ಹೇಳುತ್ತದೆ. ಬೈಯ್ಯಾಲಾಲ್ ಭೋತ್ಮಾಂಗೆಗೆ ಒಂದಿಷ್ಟು ಪರಿಹಾರ ಸಿಕ್ಕಿತು. ಅವನು ಬೇರೆ ಕಡೆ ವಾಸಿಸುತ್ತಿದ್ದ. ಪ್ರತಿ ಸೆಪ್ಟೆಂಬರ್ ೨೯ರಂದು ತನ್ನ ಮನೆಗೆ ಹೋಗಿ ದೀಪ ಹಚ್ಚಿ ಬರುತ್ತಿದ್ದ. ಮೂರು ವರ್ಷಗಳ ಹಿಂದೆ ಅವನು ತೀರಿಕೊಂಡ. ಮನವಿಗಳು ಸುಪ್ರೀಂ ಕೋರ್ಟಿನಲ್ಲಿ ಇನ್ನೂ ಇತ್ಯರ್ಥವಾಗಬೇಕಾಗಿದೆ.

ಹಾಥ್‌ರಸ್ ಪ್ರಕರಣದಲ್ಲೂ ಮನೆಯವರಿಗೆ ತಮ್ಮ ಮಗಳನ್ನು ಕೊನೆಯ ಬಾರಿಗೆ ನೋಡುವುದಕ್ಕೂ ಪೋಲಿಸರು ಬಿಡಲಿಲ್ಲ. ಇಡೀ ಹಳ್ಳಿಗರನ್ನೂ ದೂರ ಇಟ್ಟರು. ನಿರ್ದಾಕ್ಷಿಣ್ಯವಾಗಿ ನಡುರಾತ್ರಿ ಆಕೆಯ ದೇಹವನ್ನು ಸುಟ್ಟುಬಿಟ್ಟರು. ದೇಶಾದ್ಯಂತ ಪ್ರತಿಭಟನೆ ನಡೆದಿದ್ದರಿಂದ ದೋಷಿಗಳನ್ನು ಬಂಧಿಸಿದರು. ಆದರೆ ಒತ್ತಡದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸ್ಥಾಪಿಸಿರುವ ಶೀಘ್ರಗತಿ ನ್ಯಾಯಾಲಯದಲ್ಲಿ ಸಂಗ್ರಹಿಸಿರುವ ವೈದ್ಯಕಿಯ ಪುರಾವೆ ಅತ್ಯಾಚಾರವನ್ನು ಸಾಬೀತು ಮಾಡಬಲ್ಲದೆ ಎಂಬುದರ ಬಗ್ಗೆ ಯಾರಿಗೂ ಖಾತ್ರಿ ಇಲ್ಲ.

ಸವರ್ಣೀಯರ ಗುಂಪೊಂದು ಈಗಾಗಲೇ ಅಪರಾಧಿಗಳ ಬೆಂಬಲಕ್ಕೆ ಸಂಘಟಿತವಾಗುತ್ತಿದೆ. ಪ್ರಕರಣದ ತನಿಖೆ ನಡೆಸುವುದಕ್ಕೆ ವಿಶೇಷ ತನಿಖಾ ದಳವನ್ನು ರಚಿಸುವುದಕ್ಕೂ ಮುಖ್ಯಮಂತ್ರಿಯವರು ಎರಡು ವಾರ ತೆಗೆದುಕೊಂಡರು. ಇದನ್ನು ಘೋಷಿಸುತ್ತಿರುವಾಗಲೇ ಅಷ್ಟೇ ಕ್ರೂರವಾದ ಬಲರಾಂಪುರದ ಪ್ರಕರಣ ಬೆಳಕಿಗೆ ಬಂದಿತು. ಮತ್ತೆ ಅಲ್ಲೂ ಅತ್ಯಾಚಾರಕ್ಕೆ ಒಳಗಾಗಿದ್ದು ದಲಿತ ಹೆಣ್ಣು ಮಗಳೆ. ಶಿಕ್ಷಣ ಪಡೆಯಲು ಸಾಹಸ ಮಾಡಿದ್ದಕ್ಕೆ ಮುಸ್ಲಿಮ್ ಪುರುಷರು ಆಕೆಯ ಮೇಲೆ ಅತ್ಯಾಚಾರ ಮಾಡಿ ಅವಳನ್ನು ಕೊಲೆ ಮಾಡಿದ್ದಾರೆ ಎಂದು ಹೇಳಲಾಗಿದೆ.

## ಅತ್ಯಾಚಾರ ದಲಿತರಿಗೆ ಒಂದು "ಸಂದೇಶ"

ದಲಿತರ ಮತ್ತು ಬುಡಕಟ್ಟು ಜನರ ಮೇಲೆ ನಡೆಯುತ್ತಿರುವ ಅತ್ಯಾಚಾರವಾಗಲಿ ಅಥವಾ ಇನ್ನ್ಯಾವುದೇ ರೀತಿಯ ದೌರ್ಜನ್ಯವಾಗಲಿ ಸುಮ್ಮನೆ ನಡೆಯುವ ಘಟನೆಗಳಲ್ಲ. ಅದರ ಮೂಲವನ್ನು ಲಾಗಾಯ್ತಿನಿಂದ ನಡೆದುಕೊಂಡು ಬಂದಿರುವ ತಾರತಮ್ಯದಲ್ಲಿ ನೋಡಬಹುದು. ಭೂಮಿಗಾಗಿ ಅಥವಾ ನೀರು ಅಥವಾ ಸಾರ್ವಜನಿಕ ಪ್ರದೇಶಗಳಲ್ಲಿ ಅವಕಾಶಗಳಿಗಾಗಿ ದಲಿತರು ಒತ್ತಾಯಿಸಿದಾಗ ಅವರಿಗಾಗಿರುವ ಪ್ರತಿಯೊಂದು ಅವಮಾನ ಹಾಗು ಅವರ ಮೇಲೆ ಆಗಿರುವ ಪ್ರತಿಯೊಂದು ದೌರ್ಜನ್ಯವೂ, ದಲಿತರ ಮೇಲೆ ನಿರ್ಭೀತಿಯಿಂದ ದೌರ್ಜನ್ಯ ಎಸಗಬಹುದು ಎನ್ನುವ ವಾತಾವರಣವನ್ನು ಸೃಷ್ಟಿಸುತ್ತದೆ. ಅಂತಹ ವಾತಾವರಣದಲ್ಲಿ ತುಂಬಾ ಸಣ್ಣ ಘಟನೆಗಳಂತೆ ತೋರುವ ಈ ದೌರ್ಜನ್ಯಗಳು ದಾಖಲಾಗುವುದಿಲ್ಲ. ದಾಖಲಾದರೂ ಅಪರಾಧ ಎಸಗಿದ ಮೇಲ್ಜಾತಿಯವರಿಗೆ ಯಾವುದೇ ಶಿಕ್ಷೆಯೂ ಆಗದೆ ಮರೆಯಾಗಿಬಿಡುತ್ತದೆ. ಒಟ್ಟಾರೆಯಾಗಿ ಇಡೀ ಆಡಳಿತ "ನಮ್ಮ ಕಡೆ ಇದೆ" ಎನ್ನುವ ಮನೋಭಾವ ಮೇಲ್ಜಾತಿಯವರಲ್ಲಿ ಇರುತ್ತದೆ. ಕಳೆದ ಕೆಲವು ತಿಂಗಳಿನಲ್ಲೇ ಹಲವು ಪ್ರಕರಣಗಳು ನಡೆದಿವೆ. ರಾಷ್ಟ್ರೀಯ ಅಥವಾ ಸ್ಥಳೀಯ ಕೆಲ ಪತ್ರಕರ್ತರು ಅಂತಹ ಕೆಲವು ಆಕ್ರಮಗಳನ್ನು ದಾಖಲಿಸಿದ್ದಾರೆ. ಹಾಥ್‌ರ್‌ಸ್ ಘಟನೆ ನಡೆದ ಎರಡೇ ದಿನದಲ್ಲಿ ಸುಮಾರು ೧೮ ಅತ್ಯಾಚಾರಗಳು ನಡೆದಿವೆ ಎಂದು ಒಬ್ಬ ಪತ್ರಕರ್ತ ದಾಖಲಿಸಿದ್ದಾನೆ.

ದಲಿತ ವಿದ್ವಾಂಸ ಹಾಗೂ ಪ್ರೊಫೆಸರ್ ಆನಂದ್ ತೇಲ್ತುಂಬ್ಡೆಯವರ ಪ್ರಕಾರ ನಿರಂತರವಾಗಿ ನಡೆಯುತ್ತಿರುವ ಈ ಅಮಾನವೀಯ ದೌರ್ಜನ್ಯಗಳು ದಲಿತರಿಗೆ ಒಂದು ಸಂದೇಶ. ಈಗ ತೇಲ್ತುಂಬ್ಡೆಯವರನ್ನು ಮಾವೋವಾದಿ ಸಂಪರ್ಕ ಇದೆ ಎಂದು ಆರೋಪಿಸಿ ಜೈಲಿನಲ್ಲಿಡಲಾಗಿದೆ. ದಲಿತರ ಮೇಲೆ ದೌರ್ಜನ್ಯ "ಹಿಂಸಿಸಿ ಆನಂದಿಸುವ ಮನೋಭಾವ ಮತ್ತು ಮೃಗೀಯತೆ ಇವೆರಡರ ಒಂದು ವಿಶಿಷ್ಟ ಮಿಶ್ರಣ" "ಖೈರ್ಲಾಂಜಿಯಂತಹ ದೌರ್ಜನ್ಯಗಳು ಇಡೀ ದಲಿತ ಸಮುದಾಯಕ್ಕೆ ಒಂದು ಪಾಠ ಕಲಿಸುವ ಕ್ರಮ" ಅಂತ ತೇಲ್ತುಂಬ್ಡೆ ಮತ್ತು ನವಯಾನ'ದ ಎಸ್ ಆನಂದ್ ಅವರು ಬರೆದರು. ಅವರು ಹೇಳುವಂತೆ ಖೈರ್ಲಾಂಜಿ ಪ್ರಕರಣ ಹಲವು ಮಿಥ್ಯೆಗಳನ್ನು ಅಲ್ಲಗೆಳೆಯುತ್ತದೆ.. ಆರ್ಥಿಕ ಅಭಿವೃದ್ಧಿ ಜಾತೀಯತೆಯನ್ನು ದೂರ ಮಾಡಿಬಿಡುತ್ತದೆ, ರಾಜಕೀಯ ಅಥವಾ ಆಡಳಿತ ಅಧಿಕಾರವನ್ನು

**(೧೧ನೇ ಪುಟಕ್ಕೆ**

**ಕಥೆ**

# ಕಾರೆಂಬೋ ಕತ್ತಲಲಿ ಘೋರೆಂಬೊ ಮಳೆ ಸುರಿದು.....

–ವಿನಯಾ



ಚಿತ್ರ : ಗುಜ್ಜಾರ್

"ಏ ಹುಲಿಯಮ್ಮಾ . . . ನಾಣಗಿ ಒಲಿ ಬಿಂಕಿ ಮುಂದ ಹಾಕ್ತೆ ಇರೆ. ದೋರದಿಂದ ಮಕ್ಕಳೆಲ್ಲ ಬತ್ತರ. ಮೀಯೋರ ಮೀಯ್ಲಿ.. . . ಏಗನ ದಿನದಲ್ಲೆ ಎಲ್ಲಾದ್ಕೂ ದರಕಾರ ಬಂತಲ್ಲೆ . . . ." ಗೇಟಿಗೆ ಬರುತ್ತಿದ್ದಂತೆ ದೊಡ್ಮಾವನ ದನಿ ಕೇಳಿಸಿತ್ತು. ಅದೇ ಸ್ವಾಗತ □ 'ಅಪಾ, ಏಗ ಬಂದ್ರೀ. ಬರ್ರಿ ಬರ್ರಿ, ಹಾಂಗೆ ನಾಣಗಿಗೇ ಹೋಗ್ರಿ.. .' ಎಂದು ದೊಡ್ಮಾವ ನಿರ್ದೇಶಿಸುತ್ತಿದ್ದಂತೆ, ಗಿಡ ಕತ್ತರಿಸಿ ನಿಂತ ಟೊಂಗೆಗೆ ಮಣ್ಣಿನ ತೇವ ಬಿಗಿದಂಥ ಆಪ್ತತೆ. 'ಮಾವ ಹ್ಯಾಂಗಿವೆ? ಕಣ್ಣ ಬಗೀಲ ಮಬ್ಬಾಗೀದ್?' ಅಂತ ಕೇಳಿದರೆ, 'ಮಳ್ಳಿ, ನಾಕಿಪ್ಪತ್ತ ದಾಟ್ತ ನಂಗೆ. ಏನ ಹೋತವ ಹೋಗ್ಲೆ. ಉಳೀತವ ಉಳೀಲೆ' ಎಂದು ತತ್ವವಾಡಿದ. ಊರಲ್ಲಿಯೇ ರೈತಾಪಿ ಮಾಡಿಕೊಂಡು ಗಂಜಿ ತಿಳಿ, ಬಂಗಡಿ ಮೀನಿನ ಆಸಿ ಉಂಡು, ಊರಾಡಿಕೊಂಡು ಹರಿಯುತ್ತಿರುವ ಹೊಳೆಯಷ್ಟೇ ಲವಲವಿಕೆಯ ದೊಡ್ಮಾವ, ಯಾವ ಊರಿಗೆ ಆಳಿಕೆ ಮಾಡದೆಯೂ 'ಒಡಿದೀರೆ' ಎಂದು ಪ್ರೀತಿಯಿಂದ ಕರೆಯಿಸಿಕೊಂಡು ಬಾಳಿದವ. ಗಾಂಧೀ ಕಂಡ ಬಾಲ್ಯದ ಹೆಮ್ಮೆಯನ್ನು ತನ್ನದೇ ಗಾಂಧೀಗಿರಿಯಿಂದ ನಡೆಸಿದವ. ಈಗೆರಡು ತಿಂಗಳ ಹಿಂದೆ ಅಂಬಿಗರ ಕೇರಿ, ಆಗೇರ ಕೇರಿ ಅಂಚಿಗೆ ಹೋಗಿ ನಿಂತು ಕರೋನಾ ತಡೆಯಲು ಏನು ಮಾಡಬೇಕು, ಏನಿಲ್ಲ ಅಂತ ತಿಳಿಸಿ ತಿರುಗಿ; ಮನೇಲಿ ಮಗನಿಂದ ಬಯ್ಯಿಸಿಕೊಂಡವ. ಬೆನ್ನು ಬಾಗಿದ ಅತ್ತೆ, ಈ ಮಾವನ ಆಸೆ ಪೂರೈಸಲು ಕಷಾಯ ಕುದಿಸಿದ್ದೂ ಕುದಿಸಿದ್ದೇ. ಇಂವ ಹಂಚಿದ್ದು, ಕರೆಯಿಸಿ ಕೊಟ್ಟಿದ್ದು, ನೋಡುವಂತಿತ್ತಂತೆ ದೊಡ್ಮಾವನ ಕರೋನಾ ಓಡಿಸೋ ಧರಣಿ. ಏ, ತಾಟ ಬಡದ್ರೆ, ಚಪ್ಪಾಳೆ ಹಾಕದ್ರೆ ಕರೋನಾ ಓಡ್ತಿದೇನ್ರೋ ಮಳ್ರಾ □ ಎಂಬ ಕಮೆಂಟು ಬೇರೆ. ಗೇಟಿನ ಕಟ್ಟೆ ಮೇಲೆ ಕುಳಿತೇ ಅಡಿಗೆಯ ನಾರಣಣ್ಣನಿಗೆ □ ಕಾಳಿನಾಸಿಗೆ ಉಪ್ಪ ಕಮ್ಮಿಯಾದಾಂಗೀದಲೋ, ಪಾಯಸಕೆ ಕಾಯ್ ಸಾಕ್, ೧೦–೧೧ ಸಾಕ್ □ ಅಂತ ನಿರ್ದೇಶನ ಕೊಡುವಷ್ಟು ಚುರುಕಾದ ರಸನೆಗಳ ದೊಡ್ಮಾವನನ್ನು ಮನಸ್ಸು ತುಂಬಿ ನೋಡುತ್ತಲೇ ಇರಬೇಕೆನ್ನಿಸುತ್ತಿತ್ತು.

ಒಳ ವರಾಂಡದಲ್ಲಿ ಆಳೆತ್ತರದ ಪುರಂದರ ಮಾವನ ಫೋಟೊ. ಗಂಧದ, ಹೂವಿನ ಮಾಲೆಗಳಿಂದ ಜಗ್ಗಿಸಿಕೊಂಡು ಲೋಬಾನದ ಅಲೆಯಲ್ಲಿತ್ತು. ಗೋಡೆಯಂಚಿಗೆ ಬೆನ್ನು ಒತ್ತರಿಸಿ ಕೂತ ಬಳಗದ ತಾಯಂದಿರು. ರಾಧತ್ತೆ ಒಳಕೋಣೆಯಲ್ಲಿ. ಕಣ್ಣೀರು ಆರಿತ್ತಾದರೂ ಅವಳನ್ನು ಅಮಚಿ ಹಿಡಿದ ಖಾಲಿತನವನ್ನು ಆರಿಸಿಕೊಳ್ಳಲಾರದವಳಂತೆ ಸೋತು ಕೂತಿದ್ದಳು. ಹೊರಗೆ ಕಾಲು ನೀಡಿ ಕೂತಿದ್ದ ದೊಡ್ಡತ್ತೆಗೆ ಏನನ್ನಿಸಿತೋ? ಒಮ್ಮೆಲೆ – "ಇದೆಂಥ ಶೀಕ ಬಂತೇ? ನಮ್ಮ ಪುರಂದರನ ಕಳೀಕುಡೂಕೆ ಎಟ್ಟೆಲ್ಲ ಜನ ಬತ್ತದ್ರಲೆ. ಈ ಅರಮನಿ ಹಿಡ್ಸೂದಲಾಗತ. ಈ ಚಪ್ಪರ ಹಿಡ್ಸೂದಲಾಗತ. ಬರೋವರಿದ್ರ. ಬರದೇ ಇರ್ತದ್ರೆ? ಅಂವ್ನ ಉಪಕಾರ ಉಂಡೋರ ಲೆಕ್ಕ ಹಾಕೂಕಾಗೂದೇ? ಕಷ್ಟ ಹೇಳಕಂಡ ಬಂದವ್ರಿಗೆ ಇಲ್ಲಾ ಅಂದವ್ನಲ್ಲ ನಮ್ಮ ಪುರಂದರ. ನಾ ಈ ಗಾಂವಕರ ಮನಿ ಸೊಸಿಯಾಗ ಬಂದಾಗೆ ಅಂವ ಟೆರನಿಂಗ್‌ಗ ಹೋದ್ದ. ನಮ್ಮ ಬಾಬು ಹುಟ್ಟಿದ ಉರ್ಸ ಅಂವಗೆ ದಿಲ್ಲೀಲೆ ಮೆಡಲ್ ಕುಟ್ಟದ್ದ. ಎಲ್ಲಾ ಇಚ್ಚರಕಿಯಾತೀದ. ಈ ಊರ ಮಾರಿ ಶೀಕ್ ದಾಟಕಂಡ ಹೋಗೂವಂಕ್ರಿಗಾರೂ ಇರ್ಬೇಕಾಗ್ತ" ಅಂತ ಅಳುತ್ತ ರಾಗತೆಗೆಯುತ್ತ ತನ್ನ ಮೈದುನ ಪುರಂದರನನ್ನ ಮತ್ತೆ ಮತ್ತೆ ಇದಿರು ತಂದುಕೊಳ್ಳುತ್ತಿದ್ದಳು. ಆ ರಾಗಕ್ಕೆ ಎಷ್ಟೆಲ್ಲ ಜೀವಗಳೊಳಗಿನ ಯಾವ್ಯಾವುದೋ ನೆನಪಿನ ಚುಂಗು ತಗುಲಿ ಜಗ್ಗಿ ಕಣ್ಣೀರಾಗುತ್ತಿತ್ತು. ದಣೇ ಹದಿನಾಲ್ಕು ದಿನದ ಹಿಂದೆ ಅಂಗಳದ ತುಳಸಿಯೆದುರು ಉದ್ದಂಡ ಮಲಗಿಸಿದ್ದ ಪುರಂದರ ಮಾವನಿಗೆ ಕಡೇ ಸುತ್ತು ಸುತ್ತಿ ಕಾಲ್ಮುಟ್ಟಿ ಕಣ್ಣೀರು ಹನಿಸಿ, ಕಳಿಸಿಕೊಟ್ಟಾಗಿತ್ತಾದರೂ; ದೊಡ್ಡತ್ತೆ ಮಾತ್ರ ಜಗುಲಿಯಲ್ಲಿ ಸುತ್ತಿ ಸುಳಿದು ಮೇಲಕ್ಕೆ ನೆಗೆಯುತ್ತಿರುವ ಲೋಬಾನದ ಸುಳಿಯಲ್ಲೇ ಪುರಂದರಮಾವನನ್ನು ಕಳಿಸಿಕೊಡುವುದು ಎಂಬ ಭಾವವನ್ನು ಮೂಡಿಸಿದ್ದಳು.

**ಎಲ್ಲ ಗಿರಗಿರನೆ ಸುತ್ತುತ್ತಿತ್ತು. 'ಬಿಡನ್ನಕ್ಕ. ಮುಗ್ದ ಕಥಿ' ಅಂದೆ. ಇನ್ನೇನು ಅನ್ನಲಿ? ಅನ್ನಕ್ಕ ಬಿಸಿಬೂದಿಯಲ್ಲಿ ಬೆರಳಾಡಿಸುತ್ತ ಅಂದಳು □ "ಅದಲ್ವೇ. ಆಗೆ ಮೂರುರ್ಸದ ಹಿಂದಿರುಥ. ಇಂವ್ನ ನೋಡೂಕ ಬರೂದಾಯ್ತುಲ್ಲ. ಬಂದ್ನೇ ಮಾರಾಯ್ತಿ. ಪೋರಾ ನೆನಪ ಹೋಗಿದ ಅಂದದ್ರ. ಆದ್ರೆ ನನ್ನ ನೋಡ್ದ ಕೂಡ್ಲೆ ಅಂವ್ನ ಮೀಸಿ ಉಂದ್ ಬದೀಗ್ ಏರಿ, ಅವನ ಕಣ್ಣ ಫಳಕ್ಕನೇ ಹೊಳ್ದ ಇನ್ನೇನ್ ಎದ್ದ ಬಂದ್ ಮತ್ತೆ . . . . . . ಅನ್ನೂಹಾಂಗಾಯ್ತೇ. ಮರುಗಳಗೀಲೆ ಎಚ್ಚರ ಆರಿ ನಂದ್ಹೋದ ದೀಪದಾಂಗೇ ಮಲಗ್ದ. ಆದ್ರೆ ನಂಗೆ ಎದೀಲ್ ಕೂತ ಹಿದ್ರಕಿ. . . ಇನ್ನೂ ಹೋಗಲ. ಅಂವ ಸತ್ತ ಅಂದ್ರೂ ಹೋಗಲ. ರಾತ್ರಿ ನಿದ್ರಿ ಬರೂದಲ. ಹ್ಯಾಂಗ್ಯಾಂಗೋ ಆತೀದ. ಹೇಳೂಕೂ ಆಗದ್ವಾಂಗೆ . . . ." ಅನ್ನಕ್ಕನ ಕಣ್ಣಿಂದ ಗಾಯದಿಂದ ನೆತ್ತರಿಳಿದಂತೆ ನೀರು.**

ಓಯ್, ಬಂದ್ಯೇನೆ ಮಗಾ? ನಿನ್ನ ಗಂಡನೂ ಬಂದ್ನೇ? ಬ್ಯಾಗ ಬ್ಯಾಗ ಲೋಬಾನ ಹಾಕಿ ಕೈಮುಗ್ದು ನಾಕ ತುತ್ತ ಉಂಡ್ ಊರ ಹಾದಿ ಹಿಡೀರಿ ಮಗಾ. ಕೆಟ್ಟ ದಿನಗಳ ಕಾಲ ಬಂದಿದಲೇ? ನಮ್ಮದೇನ ಬಿಡ್ರಪಾ. ನಮ್ಗೂ ಲೋಬಾನ ಹಾಕೂಕ್ ಬರೂದೇ. ಯಾರ ಪಾಳಿ ಮುಂಚೋ, ಯಾರ್ದ ಹಿಂಚೋ . . . . ಸುಮಿತ್ರತ್ತೆ ಹಿಡಿದ ಕೈ ಸಣ್ಣಗೆ ನಡುಗಿತ್ತು. ಗಂಟಲುಬ್ಬಿತ್ತು. ಅಷ್ಟು ಹೊತ್ತೂ ಬಿಮ್ಮಗಿದ್ದ ಮನಸ್ಸಿನ ಒಡ್ಡು ಕಿತ್ತು ಕಣ್ಣೀರು ಉಮ್ಮಳಿಸಿತ್ತು. ಎಂಥದೋ ಅವ್ಯಕ್ತ ಯಾತನೆ. ಈ ಅತ್ತೆಯಂದಿರು, ಈ ಮಾವಂದಿರು ಎಲ್ಲ ಎಲ್ಲರೂ ಮೊದಲಿನಂತಾಗಿಬಿಡಲಿ ಗುಡಿಯಮ್ಮ. ಅವರು ಒಬ್ಬರಿಗೊಬ್ಬರು ಜಗಳ ಮಾಡಿಕೊಂಡಿರಲಿ ಬೇಕಾದರೆ, ನಾವು ಮಕ್ಕಳು ನಮ್ಮ ನಮ್ಮ ಮನೆಯ ಹಿರೀಕರ ಕಣ್ತಪ್ಪಿಸಿ ಒಬ್ಬ ಅತ್ತೆಯ ಕೈಯ ಹಾಲಡಗಿ ರೊಟ್ಟಿ, ಇನ್ನೊಬ್ಬ ಅತ್ತೆಯ ಬಸಲೆಸೊಪ್ಪಿನ ಹುಳಗ ಉಂಡು ಇದ್ದುಬಿಡುತ್ತೇವೆ. ಹಠಮಾರಿ ಮಗುವಿನಂತೆ ಮನಸ್ಸು ಚೀರುತ್ತಿತ್ತು. ಮಾರಮ್ಮನ ಪೆಟ್ಟಿಗೆಯವ ಅಟ್ಟುದ್ದ ಬಾರುಕೋಲಿನಿಂದ ಚಟಾರನೆ ಬಾರಿಸಿಕೊಂಡು ಎಡಗೈಲಿ ಮೊಳಗಾತ್ರದ ಗಂಟೆ ಗಿಣಿಗಿಣಿಸುತ್ತ ಉರಿವ ಕರ್ಪೂರ ನುಂಗಿ ಕುಣಿಯುತ್ತಿದ್ದನಲ್ಲ. ಹಾಗೆ, ಮನಸ್ಸಿಗೆ ಬಾರುಕೋಲಿನ ಗೀರು ಬಿದ್ದ ಹಾಗೆ. ಉರಿ ಕರ್ಪೂರ ಗಂಟಲಲಿ ಗರಗರ ತಿರುಗಿದ ಹಾಗೆ ಅಸಾಧ್ಯ ಬೇನೆ.

ಸತ್ತು ಹೋಗಿರುವ ಪುರಂದರ ಮಾವನಿಗಾಗಿ ನನಗೆ ದುಃಖವಿರಲಿಲ್ಲ. ಅಷ್ಟಕ್ಕೂ ಕಳೆದ ೩–೪ ವರ್ಷಗಳಿಂದ ಬಳಗದವರು ಸೇರಿದಾಗಲೆಲ್ಲ ಅಂದುಕೊಂಡಿದ್ದು 'ಪುರಂದರ ಮಾವನ ದಾರಿ ಬೇಗ ತೆರೆಯಲಿ' ಎಂದೇ. ಪುರಂದರ ಮಾವ ಯಾವ ನಮೂನೆಯ ಔಷಧಿಯೂ ನಾಟದೆ, ಹಾಸಿಗೆ ಹಿಡಿದು, ನೆನಪೆಂಬೋ ನೆನಪೇ ಸಾಪಳಿಸಿ ಹೋದದ್ದನ್ನು ಒಪ್ಪಿಕೊಳ್ಳಲು ನಮ್ಮ ಮನಸ್ಸು ನಿರಾಕರಿಸಿತ್ತು. ಅದೋ ಆಗ, ನಾನು ಮಣಿಸರಳಿನ ಪಾಟಿಯಿಂದ ಕಲ್ಲುಪಾಟಿಗೆ ಪ್ರೊಮೋಷನ್ ಪಡೆದ ಮೂರ್‍ನಾಲ್ಕನೇತ್ತೆಯ ಸಂಭ್ರಮ. ಈ ಪುರಂದರ ಮಾವ ಕಪ್ಪು–ಹಸಿರು ಜೀಪಿನಿಂದ ಕೆಂಪು ಬೂಟಿನ ನಿಶಾನೆಯೊಂದಿಗೆ ಟಕ್‌ಟಕ್ ಇಳಿದು ಬರುತ್ತಿದ್ದ. ಗೋಕರ್ಣದ ಕಲ್ಪನಾ ಟಾಕೀಸಿನಲ್ಲಿ ಸಿನಿಮಾ ನಿಂತಿದ್ದಕ್ಕೋ, ಪುರಂದರ ಮಾವನ ಶಂಕರ್‌ನಾಗ್ ಸ್ಟೈಲಿಗೋ ಹೊನ್ನಿಬೈಲಿನ ಜನರೆಲ್ಲ ಆ ಜೀಪಿನ ಧೂಳಿನೊಂದಿಗೇ ಅಜ್ಜನ ಮನೆ ಕಟ್ಟೆಗೆ ಹಾಜರಾಗುತ್ತಿದ್ದರು. ಗಾಂಧೀಜಿ ಬಂದು ಕೂತು, ಪಾನಕ ಕುಡಿದು ಎದ್ದ ಮನೆ ಜಗುಲಿಯ ಜಾಗೆಯಲ್ಲೊಂದು ಕಟ್ಟೆ ಕಟ್ಟಿ ಗಾಂಧೀ ಪುಸ್ತಕ ಇಟ್ಟು ದಿನಾ ಹೂ ಏರಿಸಿ ಕೈಮುಗಿಯುತ್ತಿದ್ದ ಅಜ್ಜನಿಗೆ, ತನ್ನ ಮಕ್ಕಳಲ್ಲೊಬ್ಬ ಪೋಲಿಸ್ ಆಫೀಸರ್ ಆಗಿದ್ದು ಖುಷಿಯ ವಿಷಯವಾದಂತಿರಲಿಲ್ಲ. ಇಲ್ಲವೆನ್ನುವಂತೂ ಇರಲಿಲ್ಲ. ಆಯಸ್ಸಿನ ಅರ್ಧಭಾಗ ಜೈಲಿನಲ್ಲಿ ಕಳೆದ ಅಜ್ಜನಿಗೆ, ವೃದ್ಧಾಪ್ಯದೊಂದಿಗೇ ತನ್ನ ಗಾಂಧಿಗಿರಿಯ ದೌಲತ್ತು ಇಳಿಯುತ್ತಿದೆ ಅನ್ನಿಸಿತ್ತೇನೋ. ಆದರೆ ಮಾವ, ಕೈಯ ಲಾಠಿಯನ್ನು ಗಾಂಧಿ ಕಟ್ಟೆಯ ಮೇಲಿಟ್ಟರೆ ಅಜ್ಜ ಕಸಿವಿಸಿಪಡುತ್ತಿದ್ದ. ಬಾಯಲ್ಲಿ ಬೊಟ್ಟು ಚೀಪುವ ನನ್ನ ಬಾಲ್ಯದೊಂದಿಗೆ ಪುರಂದರ ಮಾವನ ಬೂಟು, ಸ್ಟೀಲಿನ ಲೊಕೆಟ್ಟಿನ ಕ್ಯಾಪು, ಹುಲಿಯುಗುರು ಕೋದ ಆ ಹಳದಿ ಸರಪಳಿ ಚೈನು, ಕೋರೆಮೀಸೆಯ ಕುಣಿಸ್ಯಾಟಗಳು ಬೆರೆತುಹೋಗಿದ್ದವು. ಇಷ್ಟೆಲ್ಲ ಇದೇ ಈಗ ಕಾಣುತ್ತಿರುವುದೆಂಬಂತೆ ಮನಸ್ಸಿನಾಳದಲ್ಲಿ ಬುಗಿಲೇಳುತ್ತಿದ್ದರೆ, ನಾನ್ಯಾವಾಗ ಐವತ್ತರ ಹೆಂಗಸಾದೆ? ಗಂಡ–ಮಕ್ಕಳು ಮರಿಗಳೊಂದಿಗಳಾಗಿರುವ ನಾನು ನಾನೇ ಹೌದೇ? ಎಂದು ಅನುಮಾನಿಸುವಂತಾಗಿತ್ತು.

ಸುಮಿತ್ರತ್ತೆಯ ಮುದಿ ಬೆರಳು ನನ್ನ ಭುಜ ಸವರುತ್ತಲೇ ಇತ್ತು. ಯಾರಿಲ್ಲದವಳು □ ಎಂಬ ಒಂದು ಹಿಡಿ ಹೆಚ್ಚಿನ ಮಮತೆ ಈ ಅತ್ತೆಗೆ. ಹೊರಗೆಲ್ಲೋ ಹೋಗಿದ್ದ ಸುಮಿತ್ರತ್ತೆಯ ಮಗ ವರುಣ ಒಳ ಬಂದವ, ಅಕಸ್ಮಾತ್ ಕಂಡವನಂತೆ 'ಅರೆ, ಅರೂ... ಹೆ ಹೆ" ಅಂದ. ತಲೆಗೂದಲು ಇನ್ನಷ್ಟು ಸಾಫಾದ ಹಾಗೆ ಕಂಡ. ಅತ್ತೆ, ನನ್ನ ಅಪ್ಪಿ ಕಣ್ಣೊರೆಸಿಕೊಂಡಳು. ಅತ್ತೆ ಬೇಯುತ್ತಿದ್ದಳು. ನನ್ನ ಹಾಗೆ. ಯಾವುದೋ ಚಿತ್ರಸಂತೆಯ ನಟ್ಟನಡುವಲ್ಲಿ ದಿಕ್ಕೆಟ್ಟು ನಿಂತವರಂತಿದ್ದೆವು. ನಮ್ಮ ನಮ್ಮ ಭಾವನೆಗಳನ್ನು ಮುಚ್ಚಿಡಲು ಯಾವ ಹೆಸರಿನ ಕಪಾಟೂ ಇಲ್ಲವೆನಿಸಿತು. ನಾವೆಂದೂ ಗಂಡ–ಹೆಂಡಿರ ಕನಸು ಕಂಡಿರಲಿಲ್ಲ. ಒಬ್ಬರಿಗೊಬ್ಬರು ಅಪರಿಚಿತರಾಗಿ ಪೂರ್ತಿ ಬಿಟ್ಟುಕೊಡಲು ಸಿದ್ಧರಿದ್ದೇವೇ? ಕೇಳಿಕೊಂಡಿರಲಿಲ್ಲ ನಮ್ಮನ್ನು ನಾವು. ಈಗ ಅಪರ ವಯಸ್ಸಿನ ಈ ತುದಿ ಮೆಟ್ಟಿಲಲ್ಲಿ ಪ್ರಶ್ನೆ ಸುಕಾಸುಮ್ಮನೆ ಸತಾಯಿಸುತ್ತಿತ್ತು...

ಎಲ್ಲರೂ ಹೀಗೆ, ಅವರವರ ಮನಸ್ಸಿನಲ್ಲಿ ಅಡಗಿಕೊಂಡಿದ್ದರೇನೋ. 'ಏ, ಬಂದ್

ಇಟ್ಟುತ್ತಾಯ್ತೇ? ಒಳಗ್ ಬರೂಕಾಗಲ್ವೇನೆ. ನೀ ಉದ್ಧಾರಾಗೂದಲ' ಅನ್ನಿಯ ಧ್ವನಿಗೆ ಸಂಭಾಳಿಸಿಕೊಂಡೆ. 'ಏ ಹಾಳಾದವಳೇ, ನೀ ಉದ್ಧಾರಾಗೂದಲ್ವೇ' ಎಂದು ಅನ್ನಕ್ಕ ನನ್ನನ್ನು ಪ್ರೀತಿಯಿಂದ ಗದರಿಕೊಳ್ಳದ ದಿನ ನಾನು ಬದುಕಿದ್ದೇನೆಂದೂ ಭರವಸೆಯಿರುವುದಿಲ್ಲ. ಸಂಬಂಧದಿಂದ ಅಕ್ಕನಾಗಬೇಕಿದ್ದ ಅನ್ನಿ ನನಗೆ ಎಲ್ಲವೂ ಆಗಿದ್ದಳು. ನಾವು ಲೋಕ ಕಂಡಿದ್ದೇ ಎರಡು ಜೊತೆ ಕಣ್ಣುಗಳಿಂದ. ನಮ್ಮ ಬಾಲ್ಯದ ಎಲ್ಲ ನೆಗೆಟಿವ್‌ಗಳಲ್ಲೂ ನಾವಿಬ್ಬರೂ. ಅಲ್ಲಿ ಒಂಟಿ ಚಿತ್ರವೇ ಇಲ್ಲ ಎನ್ನುವಷ್ಟು ದಟ್ಟವಾಗಿ. ತಿಂಗಳು ತಿಂಗಳುಗಟ್ಟಲೆ ಒಂದು ಮಾತನ್ನೂ ಫೋನಿನಲ್ಲಿ ಹಂಚಿಕೊಳ್ಳದೆಯೂ ಪರಸ್ಪರ ಎಲ್ಲ ತಿಳಿದವರಂತಿರುವ; ಮೂರ್‍ನಾಲ್ಕು ವರ್ಷಕ್ಕೊಮ್ಮೆ ಭೇಟಿಯಾದರೆ ರಾತ್ರಿಡೀ ಸಣ್ಣಗೆ ಹರಟುತ್ತ ಮರುದಿನದಿಂದ ಮತ್ತೆ ಮತ್ತೆ ತಂತಮ್ಮ ಬಾಳಿನಲ್ಲಿ ಹುಲಿ ಬಾಯಲ್ಲಿ ಕೈಯಿಟ್ಟು ನಗುವವರ ಹಾಗೆ ಸಂದುಹೋಗುತ್ತಿದ್ದುದು ಮಕ್ಕಳಿಗಂತೂ ವಿಭ್ರಮವೇ ಆಗಿತ್ತು. ಅನ್ನಿ ಮೊನ್ನೆ ತರಾತುರಿಯಲ್ಲಿ, 'ಪುರಂದರ ಮಾವನ ದಿನಕ ಬತ್ತೀಯಲ್ಲ' ಅಂತ ಫೋನಿಟ್ಟಿದ್ದಳು. ಬಾ ಅಂದ ಹಾಗೆ, ಬರಬೇಕು ಅಂದ ಹಾಗೆ. ಬಂದವಳು ಅವಳತ್ತ ಹೋಗದೆ ಇಲ್ಲೇ ಕುಳಿತರೆ . . . . ಗೊತ್ತಿತ್ತು ನಂಗೆ. ಅನ್ನಿ ಸಾಯಬ್ತಿ ವಡಾ ಕರೀತಿರ್ತಾಳೆ ಅಂತ. ಅಡಿಗೆ ಮನಿ ಚಾಜ ಬಿಡೂ ಪೈಕಿಯಲ್ಲ ಅವಳು.

ಆಗಲೇ ಗಂಡಸರ ಪಂಕ್ತಿ ಊಟ ಮುಗಿದಿತ್ತು. ನನ್ನ ಗಂಡ, 'ಏ ನಾವೆಲ್ಲ ನಾಕ್ಹೆಜ್ಜಿ ತಾರಿ ಬಾಗಿಲ ಕಡೆ ಹೋಗಿ ಬರ್ತೀವಿ' ಅಂದ. ಅನ್ನಿಯ ಗಂಡ ಭಾಸ್ಕರಣ್ಣ – ನನ್ನ ಹೆಂಡ್ತಿ ವಡೀ ಮಾಡಿದ. ತಿಂದ್ ನೋಡೇ ಮುಗ್ವೇ – ಎಂದು ನಗೆ ಮಾಡಿದ. ಅನ್ನಿ, 'ಬ್ಯಾಗ ಉಣ್ಣೇ. ಹಾಂಗೇ ಕಲ್ಮನಿ ಕಡಿ ಹೋಗಿ ಬರ್‍ವಾ' ಅಂದಳು. ನನಗೆ ಪಾಯಸ ಗಂಟಲಿಗೆ ಸಿಕ್ಕಂತಾಯಿತು. ಇವಳಿಗೇನು ದೆಯ್ಯ ಬಡೀತೆ? ಈ ರಣಬಿಸಿಲಲ್ಲಿ ಕಾಲುಗಿವ ಹೊಯಿಗೆಯಲ್ಲಿ ಬಲಗಾಲು ಮೀಟುವ ಹೆಜ್ಜೆ ಹಾಕುತ್ತ ನಾನು, ಸಂಜೆ ಹೊರಳಿ ೪–೫ ತಾಸು ಪ್ರಯಾಣ ಮಾಡಿ ಊರು ಸೇರಿ ತುಂಬಿದ ಮನೆ ನಿಭಾಯಿಸಬೇಕಾದ ಇವಳು ಈ ತುರಂತದಲ್ಲಿ ಕಲ್ಮನಿಗೆ ಹೋಗುವುದುಂಟೇ? ಅದೂ ೨೫–೩೦ ವರ್ಷಗಳ ಮೇಲೆ. ಹೊಳೆ ತಾಡಿನ ಆ ಕಲ್ಲಮರಿಗೆಗಳಲ್ಲಿ ಈಗಲೂ ನೆಲದ ಬಿಸಿ ಉಕ್ಕಿ, ಉಗಿಹಂಡೆಯಲ್ಲಿ ಹುದುಗಿಕೊಂಡ ಕಚಗುಳಿ ಇದ್ದಿರಬಹುದೇ? ಹೊಳೆಯಂಚಿನಿಂದ ಕಲ್ಲೇರುವ ಆ ಪುಟ್ಟ ಪುಟ್ಟ ಏಡಿಮರಿಗಳು ಅವುಗಳ ನಡಿಗೆಯ ರಂಗೋಲಿ, ಹೊಯಿಗೆಯುದ್ದದ ಆ ಉಗಿ ವಿಮಾನದಂಥ ಸಾಲುಗಳು, ಹೊಳೆನೀರಿನ ಗುಂಟ ಕಾಲು ಹತ್ತುವ ಮರಿಮೀನುಗಳು ದೋಣಿ ತಾಡಿದ ಮೀನಿನ ಗಮಲು, ಸೂರ್ಯ ಕಂತುವ ಬಣ್ಣದ ಉಗ್ಗು ಎಲ್ಲ ಎಲ್ಲ ಹಾಗೇ ಇರಬಹುದೇ? ನಮ್ಮನ್ನು ಎದುರುನೋಡುತ್ತ . . . ಆ ಕಲ್ಲಮನೆಯಲ್ಲಿ ನಮ್ಮ ಅದೆಷ್ಟು ನಗು–ಅಳು, ಬಿಕ್ಕಳಿಕೆ, ಪ್ರಶ್ನೆ, ಸಲ್ಲಾಪಗಳು ಉಳಿದುಹೋಗಿವೆ. ಪೈಥಾಗೋರಸ್‌ನ ಪ್ರಮೇಯದ ಸೂತ್ರ ಬಾಯಿಪಾಠದಿಂದ ಹಿಡಿದು, ಅನ್ನಿಯನ್ನು ಬ್ಯಾಡ ಅಂದಿದ್ದ ಹನೇಹಳ್ಳಿಯ ಪ್ರಕಾಶನಿಗೆ ನಾಗರ ಕಡೀಲಿ ಎಂದು ಶಪಿಸುವವರೆಗೆ ಅದೆಷ್ಟೊಂದು ಗುಟ್ಟುಗಳಿದ್ದವು ಆ ಕಲ್ಲಬಂಡೆಯಲ್ಲಿ. ಏನಾದರೂ ನನ್ನ ಅನ್ನಿಯ ಮಾತು ಮೀರಲಾರದಿದ್ದೆ ನಾನು. ಉಂಡು ಕೈತೊಳೆದು ಅಂಗಳಕ್ಕಿಳಿಯುದೇ ತಡ, ದೊಡ್ಮಾವ □ "ಅಲ್ಲೀಗೆ ನಿಮ್ಮ ಕಲ್ಮನಿ ಬದೀಗೆಲ್ಲ ಹೋಗೂಕಾಗ ಹಾಂ. ಮೊನ್ನಗೇ ಅಲ್ಲೊಬ್ಬ ಅಂಬೇರ ಮುಗೂನ ರೇಪ್ ಆಗಿ ಪಂಚನಾಮಿ ಎಲ್ಲಾ ಆಗೀದ!" ಅಂದರೆ ಹೇಗಾಗಬೇಡ ನಮಗೆ. ರಾತ್ರಿ ಅಪರೂಪಕ್ಕಾದ್ರೂ ಒಂದ್ ಗುಟುಕು ಹಾಕೊಂಡೂ ಗಾಂಧೀತತ್ವ ಬಿಟ್ಟಿಲ್ಲ ನಾ ಎಂದು ವಾದಿಸುವ ದೊಡ್ಮಾವ, ಒಮ್ಮೇಲೇ ಕಾಲಜ್ಞಾನಿಯ ಹಾಗೆ ಮಾತನಾಡಿದ್ದು ನಮ್ಮನ್ನು ಬೆರಗಾಗಿಸಿತ್ತು. ಅನ್ನಕ್ಕ ಯಾಕೋ ಅಸ್ವಸ್ಥಳಿದ್ದಳು. ಅವಳ ಕೈಹಿಡಿದು ನಾಣಿಗೆ ಒಲೆ ಕಡೆಗೇ ಹೋದೆ. ಬೆಳಿಗ್ಗೆಯಿಂದ ನಿಗಿನಿಗಿ ಉರಿವ ಕೆಂಡ ಬೂದಿಯಾಗಿ ರೂಪಾಂತರಗೊಳ್ಳುತ್ತಿತ್ತು. ಇಡೀ ನಾಣಿಗೆ ಮನೆ ತಾಯಹೊಟ್ಟೆಯಂತೆ ಬೆಚ್ಚಗಿತ್ತು. ಅನ್ನಕ್ಕ ಮನಸ್ಸಿನ ಭಾರ ತಾಳದವಳಂತೆ ಅಲ್ಲೇ ಒಲೆ ಮುಂದೆ ಕೂತಳು. ಹೆಣ್ಣಾಳುಗಳೆಲ್ಲ ಹಿತ್ತಲ ಆ ಕಡೆ ಪಾತ್ರೆ ತೊಳೆಯುವುದರಲ್ಲಿ, ಬಳಗದವರೆಲ್ಲ ಹೊತ್ತು ತಿರುಗುವುದರಲ್ಲಿ ಊರು ಕಾಣೋ ಧಾವಂತದಲ್ಲಿ. 'ಏನ್ ಅನ್ನಕ್ಕ?' ಅಂದರೆ. 'ನಂಗೆ ರಾತ್ರಿಡೀ ನಿದ್ರಿಯೇ ಬರೂದಲ ಮಾರಾಯ್ತಿ. ಕನಸ್ಸಲ್ಲೂ ಪುರಂದರ ಮಾವನ ಕಂಡಾಗಾತೀದ' ಅಂದಳು. ಈ ಮನೆಯ ಹಿತ್ತಿಲು, ನಾಣಿಗಿ, ಗೋಡೆ, ಗಿಡ ಗಂಟಿಗಳನ್ನು ಬಿಟ್ಟರೆ ನಮ್ಮಿಬ್ಬರಿಗೆ ಮಾತ್ರ ಗೊತ್ತಿರುವ ಸಂಗತಿಯದು. ಅನ್ನಕ್ಕನ ಅಪ್ಪನ ಬಡತನ ಅವಳನ್ನು ಅಜ್ಜಿಯ ದೇಕರೇಖಿಯ ಜೊತೆ ಮಾಡಿತ್ತು. ಈ ದರಿದ್ರ ಪುರಂದರ ಮಾವ, ಆಗಿನ್ನೂ ದಣೇ ಹೈಸ್ಕೂಲು ಮೆಟ್ಟಿಲು ಹತ್ತಿದ್ದ ಹುಡುಗಿಯನ್ನು ತನ್ನ ಭೋಗ್ಯಕ್ಕೆ ಹಾಕಿಕೊಂಡವನಂತೆ ಬಳಸಿಬಿಟ್ಟದ್ದ. ಅರ್ಧ ಫರ್ಲಾಂಗಿನ ಈ ಮನೆಯಲ್ಲಿ ಮುದುಕರ ಕಣ್ತಪ್ಪಿಸಿ, ಹೆಣ್ಣಾಳುಗಳ ಕಣ್ತಪ್ಪಿಸಿ ಈ ಹುಡುಗಿಯನ್ನು ಹೆದರಿಸಿದ್ದನಂತೆ. ನಾಕು ನಾಕೇ ದಿನಕೆ ಊರಿಗೆ ಬರುತ್ತಿದ್ದನಂತೆ. ಹೆತ್ತವರ ಹಿತಕಾಯುವವನ ಫೋಜಿನಲ್ಲಿ. ಅವನ ಕಾಮದಾಟಕ್ಕೆ ಅನ್ನಕ್ಕ ಬಸಳೆ ಸೊಪ್ಪಿನಂತೆ ಕಂದಿಹೋದಳು. ಯಾರ ಮುಂದೂ ಬಾಯಿಬಿಡುವಂತಿರಲಿಲ್ಲ. ಒಮ್ಮೆಯಂತೂ ಮೂರು ತಿಂಗಳು ಮುಟ್ಟು ನಿಂತು ದಕ್ಕುಗೆಟ್ಟು, ಅವನು ದಯಪಾಲಿಸಿದ ಗುಳಿಗೆ ನುಂಗಿ ಮೈಯಿಂದ ನೆತ್ತರೊಡೆಯುವ ಆ ಸೆಣಸಾಟವನ್ನು ಹಲ್ಲುಮುಡಿ ಕಚ್ಚಿ ಸಹಿಸಿದಳು. ಅನ್ನಕ್ಕ ಹೈಸ್ಕೂಲು ಅಂತೂ ಪಾಸಾಗಿ ಟಿಸಿಎಚ್ ಮುಗಿಸಿ ಮಾಸ್ತರಣಿಯಾಗಿ ಬದುಕಿದೆಯಾ ಬಡಜೀವವೇ ಎಂದು ಉಸಿರಿಟ್ಟು ಕಣ್ಣೀರು ಹಾಕುವಾಗ, ಈ ಗಿರಸ್ತ ಪುರಂದರ ಮಾವನಿಗೆ ಮದ್ವೆ ಆಗಿ ಹೆಣ್ಣೊಂದರ ಅಪ್ಪನಾಗಿ ಅಪ್ಪಂತನಾಗಿದ್ದ. ಅನ್ನಕ್ಕನ ಮದ್ವೆಯ ವರದಕ್ಷಿಣೆ ರೊಕ್ಕ ಅವಳ ಅಪ್ಪನಿಗೆ ಕೊಟ್ಟು ಪಾಪ ತೊಳಕೊಂಡ ಪುಣ್ಯಾತ್ಮನೂ ಆಗಿದ್ದ. ಎಲ್ಲ ಗಿರಗಿರನೆ ಸುತ್ತುತ್ತಿತ್ತು. 'ಬಿಡನ್ನಕ್ಕ. ಮುಗ್ದ ಕಥಿ' ಅಂದೆ. ಇನ್ನೇನು ಅನ್ನಲಿ? ಅನ್ನಕ್ಕ ಬಿಸಿಬೂದಿಯಲ್ಲಿ ಬೆರಳಾಡಿಸುತ್ತ ಅಂದಳು □ "ಅದಲ್ವೇ. ಆಗೆ ಮೂರುರ್‍ಸದ ಹಿಂದಿರುಥ. ಇಂವ್ನ ನೋಡೂಕ ಬರೂದಾಯ್ತಲ್ಲ. ಬಂದ್ನೇ ಮಾರಾಯ್ತಿ. ಪೋರಾ ನೆನಪ ಹೋಗಿದ ಅಂದದ್ರ. ಆದ್ರೆ ನನ್ನ ನೋಡ್ದ ಕೂಡ್ಲೆ ಅಂವ್ನ ಮೀಸಿ ಉಂದ್ ಬದೀಗ್ ಏರಿ, ಅವನ ಕಣ್ಣ ಫಳಕ್ಕನೇ ಹೊಳ್ದ ಇನ್ನೇನ್ ಎದ್ದ ಬಂದ್ ಮತ್ತೆ . . . . . . ಅನ್ನೂಹಾಂಗಾಯ್ತೇ. ಮರುಗಳಗೀಲೆ ಎಚ್ಚರ ಆರಿ ನಂದ್ಹೋದ ದೀಪದಾಂಗೇ ಮಲಗ್ದ. ಆದ್ರೆ ನಂಗೆ ಎದೀಲ್ ಕೂತ ಹಿದ್ರಕಿ. . . ಇನ್ನೂ ಹೋಗಲ. ಅಂವ ಸತ್ತ ಅಂದ್ರೂ ಹೋಗಲ. ರಾತ್ರಿ ನಿದ್ರಿ ಬರೂದಲ. ಹ್ಯಾಂಗ್ಯಾಂಗೋ ಆತೀದ. ಹೇಳೂಕೂ ಆಗದ್ದಾಂಗೆ . . . ." ಅನ್ನಕ್ಕನ ಕಣ್ಣಿಂದ ಗಾಯದಿಂದ ನೆತ್ತರಿಳಿದಂತೆ ನೀರು.

ಬೇರೆ ದಾರಿಯಿಲ್ಲ. ನಾನು ಅನ್ನಕ್ಕನನ್ನ ಪಾರು ಮಾಡಬೇಕಿತ್ತು. ನಾಣಿಗಿ ಬಾಗಿಲು ಮುಂದ ಮಾಡ್ದೆ. ಅನ್ನಕ್ಕನ ಕೈ ಗಟ್ಟಿ ಹಿಡ್ದೆ. "ಅನ್ನಕ್ಕ ಪುರಂದರ ಮಾವ ಸತ್ತ ನೆಟ್ಟಗಾಗೋಗ್ಯ. ಅಂವ್ನ ಕರ್ಮ ಅಂವ ತೇದ. ನಾವ್ ಕಂಡ್ವಿ. ನೀ ಹಿಂಗ್ ಮಾಡ್ಕಂಡ್ರಾಗ. ಭಾಸ್ಕರಣ್ಣನ ಗತಿಯೇನ್? ನಿನ್ನ ಮಕ್ಳ ಕಥಿಯೇನ್? ಏಳ್ ಅನ್ನಕ್ಕ. ನಿನ್ನ ಶಾಲೀ ಮಕ್ಳ ಯಾರೂ ನಮ್ಮ ಪುರಂದರ ಮಾವನಂಥ ನೀಚ ಹುಳ ಆಗ್ದಿರ್ಲಿ. ಹಾಂಗ್ ಏನಾರೂ ಮಾಡ್ವ ನಾವ. ಏಳ್ ಅನ್ನಕ್ಕ. . ." ನಾನು ಬಿಕ್ಕುತ್ತಿದ್ದೆ. ಈ ಗಳಿಗೆಯಲ್ಲಿ, ಅನ್ನಕ್ಕ ಈಗ್ಲೂ ಹುಡಗೀರ್‍ನ ಕೆಡ್ಸೋ ಸುದ್ದಿ ನನ್ನ ಸೀಳಿ ಹೋಗೂವಾಗೆಲ್ಲ ನಿಂದೇ ನೆನಪಾತೀದೇ ನಂಗೆ, ನನ್ನ ಅನ್ನಕ್ಕ . . . ಅಂತ ಜೋರಾಗಿ ಕಿರುಚಿ ಅಳಬೇಕನ್ನಿಸಿತು. ತಡೆದೆ, ತಡೆದೆ. "ಅನ್ನಕ್ಕ, ನನ್ನಾಣೆ ನಿಂಗೆ, ನೀ ಈ ರಾಡೀನ್ನ ಕಿತ್ಹಾಕ ಮಾರಾಯ್ತಿ. ಪ್ಲೀಸ್ ಅನ್ನಕ್ಕ. ನಂಗೆ ಯಾರಿಲ್ವೇ ಮಾರಾಯ್ತಿ. . ." ಅನ್ನಕ್ಕ ನನ್ನ ತಬ್ಬಿಕೊಂಡಳು.

ಹೊರಟು ನಿಂತಿದ್ದೆವು. ದೊಡ್ಡತ್ತಿ 'ಪುರಂದರ್‍ನ ಕಳ್ಸಿಯಾಯ್ತ ಮಕ್ಕಳೇ. ಹೋಗ್ಬುಟ್ಟಲಿ ಅಂವಾ' ಅಂದಳು. ನಾನು ಅನ್ನಕ್ಕನ ಮುಖ ನೋಡಿದೆ. ಅವಳು ನನ್ನ ಮುಖವನ್ನು . . . 'ಹೋಗ್ಬತ್ತೀವಿ' ಅಂತ ಹೇಳಬಾರದ ದಿನವಾದ್ದರಿಂದ ಆ ಮನೆಗೆ ಬೆನ್ನು ಹಾಕಿ ಹೊರಬಂದೆವು. ದೊಡ್ಮಾವ ನೆತ್ತಿ ಸವರಿದ.



**(ಕನ್ನಡ ಪ್ರಾಧ್ಯಾಪಕಿಯಾದ ಲೇಖಕಿ ಕನ್ನಡದ ಹಿರಿಯ ಕವಿ, ಕತೆಗಾರ್ತಿ, ಚಿಂತಕಿ ಮತ್ತು ಸಾಮಾಜಿಕ ಹೋರಾಟಗಾರ್ತಿ)**

---

**೭ನೇ ಪುಟದಿಂದ)**

ಮೂಲಕ ಒಂದೇ ಗುರಿಯಡೆಗೆ ಚಲಿಸಿದ್ದರ ರೂಪಕವನ್ನು ಗುಹಾ ಮಹಾದೇವರಿಂದ ಎತ್ತಿಕೊಳ್ಳುತ್ತಾರೆ. ಒಟ್ಟು ಲೇಖನದ ಒತ್ತಾಸೆಯೆಂದರೆ ಹಿಂದುತ್ವದ ಹಿಂಸೆಯ ವಿರುದ್ಧದ ಹೋರಾಟದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು, ಕ್ರಿಯಾಶೀಲತೆ ಮತ್ತು ರಾಜಕೀಯಗಳು ನಮಗೆ ಅವಶ್ಯಕವೆನ್ನುವುದಾಗಿದೆ.



**(ಕುವೆಂಪು ವಿಶ್ವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಪಕರಾದ ಲೇಖಕರು ನಮ್ಮ ಹಿರಿಯ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರು)**

---

**(೯ನೇ ಪುಟದಿಂದ)**

ಬಳಸಿಕೊಂಡು ದಲಿತರು ತಮ್ಮ ಸಮುದಾಯಕ್ಕೆ ನ್ಯಾಯ ಒದಗಿಸಬಹುದು ಇತ್ಯಾದಿ ನಂಬಿಕೆಗಳು ಕೇವಲ ಮಿಥ್ಯೆಗಳು ಅಂತ ಖೈರ್ಲಾಂಜಿ ಪ್ರಕರಣ ತೋರಿಸಿದೆ ಅನ್ನುತ್ತಾರೆ.

ಉತ್ತರ ಪ್ರದೇಶದ ಕೆಲವು ದಲಿತ ಶಾಸಕರು ಇಂತಹ ಅವಮಾನ ಹಾಗೂ ದೌರ್ಜನ್ಯದಿಂದ ಸ್ವಲ್ಪವೂ ವಿಚಲಿತರಾಗಿಲ್ಲ. ಅಸೆಂಬ್ಲಿಯಲ್ಲಿ ಸುಮಾರು ಶೇಕಡ ೪೫ರಷ್ಟು ಮೇಲ್ಜಾತಿಯವರು. ನಿರ್ಭಯಾ ಪ್ರಕರಣವನ್ನು ರಾಜಕೀಯ ಬಂಡವಾಳ ಮಾಡಿಕೊಂಡಿದ್ದ ನರೇಂದ್ರ ಮೋದಿ ಮಂತ್ರಿಮಂಡಲದಲ್ಲಿನ ಮಂತ್ರಿಗಳು, ಅಷ್ಟೇ ಏಕೆ ನರೇಂದ್ರ ಮೋದಿಯವರೂ ಘಟನೆಯನ್ನು ಖಂಡಿಸುವುದಾಗಲಿ, ನೊಂದವರಿಗೆ ಸಮಾಧಾನ ಹೇಳುವ ಕೆಲಸ ಮಾಡಲಿಲ್ಲ. ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿಯ ಕೇಂದ್ರ ಮಂತ್ರಿಯಾಗಿದ್ದ ಮೇನಕಾ ಗಾಂಧಿಯುವರಾಗಲಿ, ಅಥವಾ ಈಗಿನ ಸ್ಮೃತಿ ಇರಾನಿಯವರಾಗಲಿ ಈ ಬಗ್ಗೆ ಏನೂ ಹೇಳಲಿಲ್ಲ. ಇವರೆಲ್ಲಾ ಉಳಿದಂತೆ ತುಂಬಾ ಮಾತನಾಡುವ ವ್ಯಕ್ತಿಗಳು. 'ಸಬ್‌ಕಿ ಸಾತ್' ಉತ್ಯಾದಿಗಳೆಲ್ಲ ಕೇವಲ ಮಾತುಗಳು. ಬಿಜೆಪಿ ಬ್ರಾಹ್ಮಣರು, ಠಾಕೂರರು ಮತ್ತು ಬನಿಯಾಗಳಂತಹ ಮೇಲ್ಜಾತಿಯವರನ್ನು ಬಲವಾಗಿ ಬೆಂಬಲಿಸುತ್ತದೆ ಅನ್ನುವುದರಲ್ಲಿ ಅನುಮಾನವೇ ಇಲ್ಲ.

ತಮ್ಮ ವಿಶ್ಲೇಷಣಾತ್ಮಕ ಪುಸ್ತಕ 'ಖೈರ್ಲಾಂಜಿ: ಒಂದು ವಿಚಿತ್ರವಾದ ಹಾಗು ಕಹಿಯಾದ ಬೆಳೆ" ಅನ್ನುವ ಪುಸ್ತಕದಲ್ಲಿ ಆನಂದ್ ತೇಲ್ತುಂಬ್ಡೆ ಅವರು ಹೇಳುವಂತೆ, ಖೈರ್ಲಾಂಜಿಯಂತಹ ದಲಿತರ ಮೇಲಿನ ಅತ್ಯಂತ ಅಮಾನವೀಯವಾದ ಪ್ರಕರಣಗಳು, ಅದರಲ್ಲೂ ವಿಶೇಷವಾಗಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಲ್ಲೆಗಳು "ಪ್ರತ್ಯೇಕ

**(೧೨ನೇ ಪುಟಕ್ಕೆ**

# ನವಿಲುಗರಿ

## ನವಿಲು

ಸಂಜೆ ಬಾನು ಕೆಂಪಾಗಿ
ಜಿನುಗು ಮೋಡ ಹನಿಹನಿಯಾಗಿ
ಬಣ್ಣಗಳು ಕೂಡಿ ಬಣ್ಣದ ಬಿಲ್ಲಾಗಿ
ಮೋಡಿ ಮಾಡಿತು ಊರಿಗೆ ಬಂದ
ಗಿರಿಯ ನವಿಲು



ದಾರಿತಪ್ಪಿರಲಿಲ್ಲ ಅದಕೆ, ಗಿರಿ
ಕಾನನದಲ್ಲೆ ಗಿರಕಿ ಹೊಡೆದು
ದಣಿದು ಹೊಸ ನೋಟಕ್ಕೆಂದು
ಬಂದಿತ್ತು ಬಯಲಿಗೆ ಊರಿಗೆ
ಮುರುಕು ಮನೆಯ ಮೋಟು
ಗೋಡೆಯ ಮೇಲೆ ಕುಳಿತು
ನೋಡುತ್ತ ನೋಡುತ್ತ, ಎದೆಯ
ಹಾಡಿಗೆ ಮೀಟುತ್ತ ಹೆಜ್ಜೆ
ಹೆಜ್ಜೆ ಹೆಜ್ಜೆ ಕುಣಿದವು
ನೆರೆದವರ ಕಣ್ಣುತುಂಬಿ



ತಂಪು ಮೋಡಗಳ ಮರೆಯಲ್ಲಿ
ದೀಪ ಬೆಳಗುತ್ತಿದ್ದ ಕೆಂಪು ಸೂರ್ಯ
ಹನಿಹನಿಗೆ ಮೈತೆರೆದು, ಮನಬಿಚ್ಚಿ
ಕುಣಿಯುವ ನವಿಲಿಗೆ, ಊರಿಗೆ
ಊರೇ ಸೋಜಿಗದಲ್ಲಿ ಮೈಮರೆತು

ಮಿದುವಾದ ಎದೆಗಳಲಿ ಕರಗಿತು ಲೋಕ
ಎಳೆಗೆ ಎಳೆ ಕೂಡಿ ದನಿಗೆ ದನಿ ಕೂಡಿ
ಹಾಡೆ ಹಬ್ಬವಾಗಿ ಕುಣಿವ ಹುರುಪಾಗಿ



ಕುಣಿತಕ್ಕೆ ಕಣ್ಣು ಮಬ್ಬಾಗಿ ಕತ್ತಲಿಳಿದಂತೆ
ಎಗ್ಗಿಲ್ಲದೆ ನುಗ್ಗಿದನು ನಾಗ
ನಾಯಕರ ಹುಡುಗ, ರೆಪ್ಪೆತೆರೆದು
ಮುಚ್ಚಲಿಲ್ಲ ಜನ, ಕಂಡ ಕನಸು
ಮುಗಿದಿರಲಿಲ್ಲ ಇನ್ನೂ, ಮಾಯವಾದನು
ನಾಗ ಕತ್ತಲೊಳಗೆ ನವಿಲು ಹೊತ್ತು

ಅಲ್ಲಲ್ಲಿ ಬಿದ್ದ ಅದರ ಗರಿಗಳು
ತುಂಡು ಕನಸುಗಳ ಉಳಿಕೆಯಂತೆ
ಎದೆಯ ಇರಿಯುವ ನವಿಲ ಕೂಗು
ಊರು ತುಂಬಿ, ಬಯಲು ತುಂಬಿ
ಮುಗಿಲಿಗೇರಿ ಮತ್ತೆ ನೆಲಕ್ಕೆ ಬಂದು
ಬಡಿದಂತೆ, ಎಲ್ಲರೆದೆಗಳು ಬರಿದಾಗಿ

**=ಜಿ.ಪಿ. ಬಸವರಾಜು**



ಚಿತ್ರಗಳು: ವಿಜಯಶ್ರೀ ಹಲಾಡಿ

## ಕೌದಿ

ಕುಟುಂಬದ ಏಕೈಕ ದೊಡ್ಡ ಆಸ್ತಿ
ನಾಲ್ಕು ಜನಕ್ಕೆ ಒಂದೇ!
ಹೊದ್ದು ಮಲಗಿದರೆ ಸಾಕು
ಈ ನೆಲದ ರಾಜರು ಅನುಭವಿಸಿದ ಸುಖ
ನಮ್ಮೊಳಗೆ ಮಿಣುಕು ಹುಳು...

ಹೊದಿಕೆ ಅಷ್ಟೇ ಆಗಿರದೇ
ಆದರ್ಶದ ಅರಿವೆಯೂ;
ಒಗ್ಗಟ್ಟಿನ ಪ್ರತೀಕವೂ,
ಜಾತ್ಯಾತೀತ ನಿಲುವೂ ಕೂಡ...



ಎಷ್ಟೊಂದು ಹೊಂದಾಣಿಕೆ !
ತುಂಡು ತುಂಡುಗಳೇ ಒಂದು ತಂಡವಾಗಿ



ಮೈ ಕೊರೆವ ಚಳಿಗೆ ಎದೆಗೊಟ್ಟು
ನಿಲ್ಲುವ ಪಡೆ...

ಕುಲದ ನೆಲೆಯೂ ತಿಳಿಯದ
ನಮ್ಮೊಳಗಿನ ಕುಲದ ಕಲ್ಪನೆಗೆ
ಮುದುಡಿ ಮೌನ ತಳೆವ ಪರಿಗೆ
ನನ್ನೊಳಗಿನ ಅಜ್ಞಾನ ನಾಚಿಕೊಳ್ಳುತ್ತದೆ...

ಕಾವ್ಯ ಹುಟ್ಟಿಗೆ ನೀರ ಸೆಲೆ, ಕಥಾ ಹಂದರಕೆ
ಆಸರೆಗೋಲು, ಬರದ ನೆಲಕೆ ಮುಂಗಾರು
ಕೋಳಿ ಕೂಗುವ ಹೊತ್ತಿಗೆ ಸ್ವಾತಂತ್ರ್ಯ...

**–ಶಿ.ಕಾ ಬಡಿಗೇರ**

**(ಇವರ ಇತ್ತೀಚಿನ 'ಬೆಳಕು ನಗುವ ಪರಿ' ಸಂಕಲನದಿಂದ)**

## ಸಾಕ್ಷಿ

ಬಿತ್ತಿದ ಬೆಳೆಗೆ ಸಾಕ್ಷಿ
ಹಾದಿ ಹುಡುಕುವ ಹುಡುಗರ ಗುಂಪು
ಸಿಕ್ಕು ನಕ್ಕಲ್ಲೆಲ್ಲಾ ನಾದದ ಅಲೆ
ತಾವೋನ ಪಥದ ಪರಿಧಿಯಲೆಲ್ಲಾ ನಗು



ಕನ್ಫ್ಯೂಷಿಯಸ್ ಮಾತಿನ ಪುಟ ತೆರೆದಂತೆ
ಸಿಕ್ಕು ಕಂಡಲ್ಲೆಲ್ಲಾ ನಕ್ಕ ತಾವೊ
ಮನೆ ಬೆಂದು ಬೂದಿ ಈಗೀಗ
ಬಾಗಿಲಲಿ ನಿಂತವಗೆ ಮೌನವೇ ಉತ್ತರ

ನೋಡು ಗುರುವೆ
ಹಾದಿ ತಿಳಿಯದೆ ತುಳಿವೆ
ಮಾತು ಅರಿಯದೆ ನುಡಿವೆ
ಮೌನ ಹೊಕ್ಕಾಗ ನಿನ್ನ ಮುಖ ಕಂಡೆ
ಸಾಕ್ಷಿಗೆ ನೋಡು ನನ್ನ ಮುಖ

**–ಆರ್. ದಿಲೀಪ್‌ಕುಮಾರ್**

---

**೧೧ನೇ ಪುಟದಿಂದ)**

ಘಟನೆಗಳಾಗಲಿ" ಅಥವಾ "ಯಾರೋ ಕೆಲವು ಅನಾಗರಿಕ ಕ್ರೂರ ರಕ್ಕಸರ ಕೃತ್ಯಗಳಲ್ಲ". ದಲಿತರ ಮೇಲಿನ ಹಲ್ಲೆ ಅದರಲ್ಲೂ ವಿಶೇಷವಾಗಿ ಅತ್ಯಾಚಾರ ಒಂದು ಸಾಮಾಜಿಕ ವ್ಯವಸ್ಥೆಯನ್ನು ಜಾರಿಗೊಳಿಸುವ ವ್ಯವಸ್ಥಿತ ಕ್ರಿಯಾತ್ಮಕ ಕ್ರಮ. ಹಾಗಾಗಿಯೇ ಅದನ್ನು "ಒಟ್ಟಾಗಿ ಸೇರಿ ಸಾರ್ವಜನಿಕ ಪ್ರದರ್ಶನವಾಗಿ ನಡೆಸಲಾಗುತ್ತದೆ. ಅತ್ಯಾಚಾರ ಒಂದು ಖಾಸಗಿ ವ್ಯವಹಾರವಲ್ಲ. ಅತ್ಯಾಚಾರ ಇಡೀ ದಲಿತ ಸಮುದಾಯಕ್ಕೆ ಒಂದು ಪಾಠವಾಗಬೇಕು. ಆ ರೀತಿಯಲ್ಲಿ ಅತ್ಯಾಚಾರದ ಹಿಂದೆ ಒಂದು ಸಂಕೀರ್ಣವಾದ ಹಾಗೂ ಉದ್ದೇಶಪೂರ್ವಕವಾದ ಯೋಜನೆ ಇರುತ್ತದೆ." ಅಂತ ಅವರು ಬರೆಯುತ್ತಾರೆ.

ಹಾಗಾಗಿಯೇ ಹಾಥ್‌ರಸ್‌ನಲ್ಲಿ ತೀವ್ರವಾದ "ಅತ್ಯಾಚಾರಿಗಳನ್ನು ನೇಣು ಹಾಕಿ" ಅನ್ನುವಂತಹ ತಕ್ಷಣದ ಕೂಗಾಗಲಿ, ನಿರ್ಭಯಾ ಪ್ರಕರಣದಲ್ಲಿ ಅತ್ಯಾಚಾರಿಗಳನ್ನು ಗಲ್ಲಿಗೆ ಏರಿಸಿದ್ದಾಗಲಿ, ಅಥವಾ ಹೈದರಾಬಾದಿನಲ್ಲಿ ಆರೋಪಿಗಳನ್ನು ಪೋಲೀಸ್ ಎನ್‌ಕೌಂಟರಿನಲ್ಲಿ ಕೊಂದದ್ದಾಗಲಿ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಹಿಂದಿನ ಮುಖ್ಯ ಸಮಸ್ಯೆಗೆ ಉತ್ತರವಲ್ಲ. ಈ ಕ್ರಿಯೆಗಳು ಕೇವಲ ಕೆರಳಿದ ಸಾರ್ವಜನಿಕರ ಪ್ರತೀಕಾರದ ಉದ್ದೇಶವನ್ನು ತೃಪ್ತಿಪಡಿಸಬಹುದು. ಅದರ ಹಿಂದಿರುವ ಜಾತಿಯ ಸಮಸ್ಯೆಯನ್ನು ಯಾವ ರೀತಿಯಲ್ಲೂ ಪರಿಹರಿಸುವುದಿಲ್ಲ. ಅದರಿಂದಾಗಿಯೇ ತೇಲ್ತುಂಬ್ಡೆ ತಮ್ಮ ಪುಸ್ತಕದಲ್ಲಿ "ಭಾರತದ ಪ್ರತಿಯೊಂದು ಹಳ್ಳಿಯೂ ಖೈರ್ಲಾಂಜಿ ಆಗಬಲ್ಲದು" ಎಂದು ಎಚ್ಚರಿಸಿದ್ದಾರೆ.



**(ಲೇಖಕಿ ಮುಂಬೈನಲ್ಲಿ ನೆಲೆಸಿದ್ದು ರಾಜಕಾರಣ, ಲಿಂಗ ರಾಜಕಾರಣ ಮತ್ತು ಮಾಧ್ಯಮಗಳನ್ನು ಕುರಿತು ಬರೆಯುವ ಪತ್ರಕರ್ತೆ ಮತ್ತು ಅಂಕಣಕಾರ್ತಿ)**

(ಕೃಪೆ:ಜನತಾ, ೧೮ ಅಕ್ಟೋ. ೨೦೨೦
ಕನ್ನಡಕ್ಕೆ ಟಿ.ಎಸ್. ವೇಣುಗೋಪಾಲ್)

# ಯೇಸುದಿನ ಬದುಕು ಮತ್ತು ಸಂದೇಶ

ಧರ್ಮವಿಚಾರ ಪುಟ

–ಅಪೂರ್ವ ಡಿ'ಸಿಲ್ವ



ನೈರುತ್ಯ ಏಷ್ಯಾ, ಪಶ್ಚಿಮ ಏಷ್ಯಾ ಮತ್ತು ಈಶಾನ್ಯ ಆಫ್ರಿಕಾದ ಪ್ರದೇಶವನ್ನು ಮಧ್ಯ ಪ್ರಾಚ್ಯವೆಂದು ಗುರುತಿಸಲಾಗಿದೆ. ಈ ಮಧ್ಯಪ್ರಾಚ್ಯದಲ್ಲಿರುವ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್‌ಗಳನ್ನು ಬೈಬಲ್‌ನ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಪ್ರದೇಶವೆಂದು ಗುರುತಿಸಲಾಗುತ್ತದೆ. ಮೋಸೆಸ್ ಎಂಬ ವ್ಯಕ್ತಿ ದೇವವಾಣಿಯ ಅನುಸಾರವಾಗಿ ಬರೆದ ಧರ್ಮಶಾಸ್ತ್ರ ಹಳೆ ಒಡಂಬಡಿಕೆಯಾಗಿದೆ. ಇದನ್ನು ಹೀಬ್ರ್ಯೂ ಭಾಷೆಯ ಶಾಸ್ತ್ರ ಗ್ರಂಥವೆಂದು ಹೇಳುತ್ತಾರೆ. ಇದರ ಅನುಯಾಯಿಗಳನ್ನು ಈ ಯಹೂದಿಗಳು.

ಈ ಭೂಮಿಯ ಮೇಲೆ ಬದುಕಲು ಅನುಸರಿಸಬೇಕಾದ ನೀತಿ ನಿಯಮಗಳನ್ನು ಕುರಿತು ದೇವರು ಮತ್ತು ಮನುಷ್ಯರ ನಡುವಣ ಹೊಸ ಒಡಂಬಡಿಕೆಯು ದೇವ ಪುತ್ರನೆಂದು ಗುರುತಿಸಲಾಗುವ ಯೇಸುವಿನ ಮೂಲಕ ದಾಖಲಾಯಿತು, ಇದನ್ನು ನಂಬಿ ಪಾಲಿಸುವರನ್ನು ಕ್ರಿಶ್ಚಿಯನ್ನರೆಂದು ಕರೆಯಲಾಗುವುದು. ಇವರು ಯೇಸುವನ್ನು ಪ್ರವಾದಿ ಎಂದು ನಂಬುವವರಾದ್ದರಿಂದ ಗ್ರೀಕ್ ಪದ ಕ್ರಿಸ್ಟೋಸ್ (ಪ್ರವಾದಿ)ಎಂಬ ಪದವೇ ಕ್ರೈಸ್ಟ್ ಆಗಿ ಕನ್ನಡದ ಕ್ರಿಸ್ತ ಆಗಿದೆ. ಕ್ರಿಸ್ತ ಹುಟ್ಟಿದ್ದು ಬೆತ್ಲೆಹೇಮಿನಲ್ಲಿ, ಬೆಳೆದದ್ದು ನಜರೇತಿನಲ್ಲಿ ಎಂದು ಬೈಬಲಿನಲ್ಲಿ ಉಲ್ಲೇಖವಿದೆ. ಈ ಎರಡೂ ಪ್ರದೇಶಗಳು ಈಗಿನ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್‌ನಲ್ಲಿ ಹಂಚಿಹೋಗಿದೆ. ಕ್ರಿಸ್ತ ಹುಟ್ಟಿದಾಗ ಅದು ರೋಮ್ ಚಕ್ರಾಧಿಪತ್ಯದ ಪ್ರದೇಶವಾಗಿತ್ತು. ಹೆರೋದರಸನು ಜುದೇಯ ನಾಡೆಂದು ಕರೆಯುವ ಈ ಪ್ರದೇಶವನ್ನು ಆಳುತ್ತಿದ್ದನು.

ಯೇಸುಸ್ವಾಮಿಯನ್ನು ನೆನಪಿಸಿಕೊಂಡಾಗಲೆಲ್ಲಾ ಶಿಲುಬೇರಿದ ಮುಖವೇ ನಮ್ಮ ಕಣ್ಣೆದುರಿಗೆ ಬರುವುದು. ಈ ಶಿಲುಬೇರಿದ ಏಸುವಿನ ಚಿತ್ರದಿಂದ ಆಚೆ ಬಂದು ಬಾಲ ಯೇಸುವನ್ನು ನೆನೆದು ಸಂಭ್ರಮಿಸಲು ಕ್ರಿಶ್ಚಿಯನ್ನರಿಗೆ ಕ್ರಿಸ್ಮಸ್ ಒಂದು ಅವಕಾಶ.

ಭವಿಷ್ಯವಾಣಿ ಕೇಳಿ ಕೃಷ್ಣನನ್ನು ಮಗುವಿದ್ದಾಗಲೇ ಕಂಸ ಸಾಯಿಸಲು ಹೊರಟನೊ ಹಾಗೆ ಯೇಸುವನ್ನು ಹೆರೋದರಸನು, 'ಅರಸನೊಬ್ಬನು ಜನಿಸಲಿದ್ದಾನೆ' ಎನ್ನುವ ಮಾತಿನಿಂದ ಭೀತಿಗೊಳಗಾಗಿ ಆಗ ತಾನೆ ಹುಟ್ಟಿದ ಮಕ್ಕಳನ್ನು ಸಾಯಿಸಲು ಹೊರಡುತ್ತಾನೆ. ಹಾಗಾಗಿ ಯೇಸುವಿನ ತಂದೆ ಜೋಸೆಫನು ಬೆತ್ಲೆಹೇಮಿನಿಂದ ನಜರೇತಿಗೆ ಕುಟುಂಬವನ್ನು ಕರೆದುಕೊಂಡು ಹೋಗುತ್ತಾನೆ. ಇತಿಹಾಸಕಾರರು ಜೋಸೆಫರಿಗೆ ಯೇಸು ಅಲ್ಲದೆ ಇತರೆ ಗಂಡು ಮತ್ತು ಹೆಣ್ಣುಮಕ್ಕಳಿದ್ದರು ಎಂದು ಉಲ್ಲೇಖಿಸುತ್ತಾರೆ. ಗರ್ಭಧರಿಸಿದ ಮೇರಿಯಮ್ಮನನ್ನು ಆಡಳಿತ ಕ್ರಮದ ಭಾಗವಾಗಿ ಕುಟುಂಬದ ಜನಗಣತಿಗಾಗಿ ಕರೆತರುವಾಗ ಕುರಿ, ದನದ ಕೊಟ್ಟಿಗೆಯಲ್ಲಿ ಯೇಸುವಿನ ಜನ್ಮವಾಯಿತು ಎಂದು ವಿವರಗಳು ಸಿಗುತ್ತವೆ. ಯೇಸುವಿನ ತಂದೆ ಬಡಗಿಯಾಗಿದ್ದು ಬಡತನದ ಕುಟುಂಬದಲ್ಲೆ ಯೇಸು ಬೆಳೆಯುತ್ತಾರೆ. ಹಿಬ್ರೂ ಭಾಷೆಯಲ್ಲಿ ಯೇಸುವನ್ನು 'ಏಶುವ' ಎನ್ನುತ್ತಾರೆ. ಏಶುವ ಎಂದರೆ ರಕ್ಷಕನು ಎಂದರ್ಥ.

ಇದಾದ ನಂತರ ಹೊಸ ಒಡಂಬಡಿಕೆಯಲ್ಲಿ ಸಿಗುವ ಮುಖ್ಯವಾದ ವಿಚಾರವೆಂದರೆ ಯೇಸುವಿನ ಧಾರ್ಮಿಕ ಸಂಸ್ಕಾರದ ವಿಧಿಯಾದ ದೀಕ್ಷಾ ಸ್ನಾನ ಕುರಿತಾಗಿ, ಯೇಸು ಈ ಸಂಸ್ಕಾರ ಪಡೆಯುವುದು ಯೊವಾನ್ನನೆನ್ನುವ ಬೆಂಗಾಡಿನಲ್ಲಿ ಮಿಡತೆ, ಜೇನನ್ನು ತಿಂದು ಜೀವಿಸುತ್ತಾ, ತೊಗಲಿನ ಬಟ್ಟೆ ಧರಿಸಿದ್ದ ಅನುಭಾವಿಯೊಬ್ಬನಿಂದ. ಈ ಸಂದರ್ಭದಲ್ಲಿ ಯೊವಾನ್ನಾ ಬರಲಿರುವ ದೇವ ಪುತ್ರನು ಇವನೇ ಎಂದು ಮನಗಾಣುತ್ತಾನೆ ಎಂದು ಬೈಬಲ್ಲಿನ ವಿವರಗಳಲ್ಲಿ ನಮೂದಾಗಿದೆ. ಯೊವಾನ್ನನು ಮನಪರಿವರ್ತನೆ ಹೊಂದಿ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಿ ದೇವರಿಗೆ ಅಭಿಮುಖರಾಗಿರಿ ಎಂದು ಹೇಳುತ್ತಾ ದೀಕ್ಷೆ ನೀಡಿ ಹೃದಯ ಪರಿವರ್ತನೆ ಮಾಡುತ್ತಿದ್ದ.

ಗುರುವಿನ ದೀಕ್ಷಾ ಉಪದೇಶಗಳಂತೆ ಯೇಸು ಹಳೆ ಒಡಂಬಡಿಕೆಯಲ್ಲಿನ ಕೆಲ ಧಾರ್ಮಿಕ ಆಚರಣೆಗಳಲ್ಲಿನ ಬಲಿ ಇತ್ಯಾದಿ ಹಿಂಸೆ ಮತ್ತು ಮೌಢ್ಯಗಳನ್ನು ನೇರವಾಗಿ ಟೀಕಿಸದಿದ್ದರೂ ಗುರುದೀಕ್ಷೆಯ ನಂತರ ಮನೆಬಿಟ್ಟು ಹೋದವರು ಹಲವಾರು ಅನುಭಾವಿ ಪಂಥಗಳ ಸಂಸರ್ಗಕ್ಕೆ ಬಂದು ಅವರದೆ ಆದ ಕರುಣೆ–ಪ್ರೇಮ–ಅಹಿಂಸೆಯ ತತ್ವಗಳನ್ನು ರೂಪಿಸಿಕೊಳ್ಳುತ್ತಾರೆ. ಯೇಸುವಿನ ಕಾಣೆಯಾದ ಅವಧಿ ಅಂದರೆ ಹನ್ನೆರಡರಿಂದ ಇಪ್ಪತ್ತೊಂಬತ್ತು ವರ್ಷಗಳೇ ಅವರ ಆಧ್ಯಾತ್ಮ ಬದುಕಿನ ಬಹುಮುಖ್ಯ ಘಟನೆಯಾಗಿದ್ದು ಅದರ ವಿವರಗಳು ಬೈಬಲ್‌ನಲ್ಲಿ ಸಿಗುವುದಿಲ್ಲ. ಬದಲಾಗಿ ವಿವಿಧ ಬಗೆಯ ಆಧ್ಯಾತ್ಮಿಕ ಪಂಥಗಳ ಒಡನಾಟದಲ್ಲಿ ಅವರು ಕಾಶ್ಮೀರ ಮತ್ತು ಟಿಬೇಟ್‌ಗಳಿಗೆ ಹೋಗಿ ವೇದ ಮತ್ತು ಬುದ್ದನ ತತ್ವಗಳನ್ನು ಅರಿತರು ಎಂಬ ಕೆಲವು ಉಲ್ಲೇಖಗಳು ದೊರೆಯುತ್ತವೆ. ಹಿಮಾಲಯದ ಬಾಬಾಜಿ ಪಂಥದವರಿಂದ ಯೇಸು ಕ್ರಿಯಾಯೋಗ ಕಲಿತಿದ್ದರು ಎಂಬುದಾಗಿ 'ಯೋಗಿಯ ಆತ್ಮಕಥೆ'ಯಲ್ಲಿ ಪರಮಹಂಸ ಯೋಗಾನಂದರು ಹೇಳುತ್ತಾರೆ. ಇನ್ನು ಟಿಬೆಟ್‌ನಲ್ಲಿ ಅವರು ಬುದ್ದನ ತತ್ವಗಳನ್ನು ಅರಿತರು. ನಂತರ ಮತ್ತೆ ಮಾತೃಭೂಮಿಗೆ ಬಂದವರು ಶಿಲುಬೆ ಶಿಕ್ಷೆಗೆ ಒಳಗಾಗುವ ಮುನ್ನ ಅವರು ಮತ್ತೆ ಇದೆ ಕಾಶ್ಮೀರದ ಕಡೆ ಹೋಗುತ್ತಾರೆ ಎನ್ನುವುದರ ಬಗ್ಗೆ ಓಶೋ ವಿವರಿಸುತ್ತಾರೆ. ಹೀಗೆ ಯೇಸು ವಿವಿಧ ಆಧ್ಯಾತ್ಮಿಕ ಪಂಥಗಳ ನಡುವೆ ವಿಶಿಷ್ಟವಾಗಿ ಸ್ಮರಿಸಲ್ಪಡುತ್ತಾರೆ.

ಯೇಸು ತಮ್ಮ ಅನುಭಾವಿಕ ಪಯಣಗಳನ್ನು ಮುಗಿಸಿ ತಾಯ್ನೆಲಕ್ಕೆ ಬಂದವರು ತಾವು ಕಲಿತದ್ದನ್ನು ಬೋಧಿಸಲು ಶಿಷ್ಯರನ್ನು ಆಯ್ದುಕೊಳ್ಳುತ್ತಾರೆ. ಅವರ ಶಿಷ್ಯರಲ್ಲಿ ಮುಖ್ಯರಾದವರೆಂದರೆ ಮಾರ್ಕ್,ಲೂಕ,ಯೊವಾನ್ನ,ಪೌಲ, ಯೂದ. ಇವರ ಪತ್ರಗಳು, ಉಪದೇಶಗಳು ಮುಖ್ಯವಾಗಿ ಯೇಸುವಿನ ಶುಭ ಸಂದೇಶವಾಗಿ ಹೊಸ ಒಡಂಬಡಿಕೆಯಲ್ಲಿ ಸೇರ್ಪಡೆಯಾದವು. ಕ ಯೇಸುವಿನ ಶಿಷ್ಯರಲ್ಲಿ ಮೀನುಗಾರರು, ಅಬಲೆಯರು,ತೆರಿಗೆ ವಸೂಲಿ ಮಾಡುವವರು, ಅರಾಜಕತಾವಾದಿಗಳು ಇದ್ದರು. ಇವರಲ್ಲಿ ಸೇರಿದ್ದ ಮಗ್ದಲೀನ ಎಂಬ ಮಹಿಳೆಯನ್ನು ವೇಶ್ಯೆಯೆಂದು ನಜರೇತಿನ ಕೆಲವರು ಅಟ್ಟಿಸಿಕೊಂಡು ಕಲ್ಲು ತೂರುವಾಗ ಯೇಸು 'ಈವರೆಗೆ ಒಂದೂ ಪಾಪ ಮಾಡದವರು ಅವಳತ್ತ ಕಲ್ಲೆಸೆಯಲಿ' ಎಂದು ಅವರ ಹೃದಯವನ್ನು ತಟ್ಟಿ ಅವರನ್ನು ತಡೆಯುತ್ತಾರೆ. ಆನಂತರ ಈಕೆ ಯೇಸುವಿನ ಮರಣದವರೆಗೆ ಅವರ ಜೊತೆ ಇರುತ್ತಾರೆ. ಕ್ರೈಸ್ತರು ಮಗ್ದಲೀನಳನ್ನು ಸಂತಳ ಮಟ್ಟಕ್ಕೆ ಏರಿಸಿದರೂ ಯೇಸು ಮತ್ತು ಮಗ್ದಲೀನಾಳ ಬಗೆಗಿನ ಹಲವು ವಿಚಾರಗಳು ಮರೆಯಾಗಿವೆ.

ಯೇಸು ಪ್ರಾರಂಭಿಸಿದ ಧರ್ಮ ಬೋಧೆ ಈಗಾಗಲೇ ಯಹೂದಿ ಪುರೋಹಿತರಿಂದ ನಿಂತ ನೀರಾಗಿದ್ದ ಹಳೆ ಒಡಂಬಡಿಕೆಗೆ ಹೊಸ ರೂಪ ಕೊಡುವುದೇ ಆಗಿತ್ತು. ಯೇಸುವಿನ ಧರ್ಮ ಬೋಧನೆ ಜುದಾಯ ನಾಡಿನಾದ್ಯಂತ ವ್ಯಾಪಕ ಪ್ರಚಾರಕ್ಕೆ ಬರುತ್ತದೆ. ಹೀಗೆ ಹೊಸ ಧಾರ್ಮಿಕ ನೀತಿಗಳನ್ನು ಬೇರೆ ಬೇರೆ ಕಡೆ ಪ್ರಚಾರ ಮಾಡುತ್ತಾ ಜನರನ್ನು ಒಟ್ಟುಗೂಡಿಸುತ್ತಾ ಇರುವಾಗ ಯೇಸುವನ್ನು ಹಿಂಬಾಲಿಸುವವರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಈ ಹಿಂಬಾಲಿಸಿಕೊಂಡ ಬಂದ ಜನರನ್ನು ಗಲಿಲೇಯದ ಬೆಟ್ಟಕ್ಕೆ ಕರೆದುಕೊಂಡು ಹೋಗುವ ಯೇಸು ಬಡವರಿಗೆ ಸಂಬಂಧಿಸಿಯೇ ಇಲ್ಲದಿದ್ದ ಧಾರ್ಮಿಕ ನಿಯಮಗಳಿಗೆ ಬದಲಾಗಿ ಬಡವರನ್ನು ಒಳಗೊಳ್ಳುವ ಆಧ್ಯಾತ್ಮಿಕ ಬೋಧನೆಯನ್ನು ಮಾಡುತ್ತಾರೆ. ಯೇಸುವಿನ ಬೆಟ್ಟದ ಮೇಲಿನ ಈ ಬೋಧೆ ಹೀಗಿದೆ:

೧. ಪಾರಮಾರ್ಥಿಕವಾಗಿ ಬಡವರು ಭಾಗ್ಯವಂತರು, ಸ್ವರ್ಗಸಾಮ್ರಾಜ್ಯ ಅವರದು.

೨. ದು:ಖಿಗಳು ಭಾಗ್ಯವಂತರು; ದೇವರು ಅವರನ್ನು ಸಂತೈಸುವರು

೩. ವಿನಯಶೀಲರು ಭಾಗ್ಯವಂತರು; ದೇವರ ನಾಡಿಗೆ ಬಾಧ್ಯಸ್ಥರು ಅವರು.

೪. ನ್ಯಾಯನೀತಿಗಾಗಿ ಹಸಿದು ಹಾತೊರೆಯುವವರು ಬಾಗ್ಯವಂತರು; ದೇವರು ಅವರಿಗೆ ತೃಪ್ತಿಯನ್ನೀಯುವರು

೫. ದಯಾವಂತರು ಭಾಗ್ಯವಂತರು; ದೇವರ ದಯೆ ಅವರಿಗೆ ದೊರಕುವುದು.

೬.ನಿರ್ಮಲ ಹೃದಯಿಗಳು ಭಾಗ್ಯವಂತರು;ಅವರು ದೇವರನ್ನು ಕಾಣುವರು.

೭. ಶಾಂತಿಗಾಗಿ ಶ್ರಮಿಸುವವರು ಭಾಗ್ಯವಂತರು; ಅವರು ದೇವರ ಮಕ್ಕಳೆನಿಸಿಕೊಳ್ಳುವರು

೮. ನ್ಯಾಯ ನೀತಿಯ ಹಿಂಸೆಯನ್ನು ತಾಳುವವರು ಭಾಗ್ಯವಂತರು; ಸ್ವರ್ಗ ಸಾಮ್ರಾಜ್ಯ ಅವರದು.

೯.ನನ್ನ ಶಿಷ್ಯರು ನೀವಾದ್ದರಿಂದ ಜನರು ನಿಮ್ಮನ್ನು ಧಿಕ್ಕರಿಸುವರು, ಹಿಂಸಿಸುವರು, ಅನ್ಯಾಯವಾಗಿ ಇಲ್ಲಸಲ್ಲದ್ದನ್ನು ನಿಮ್ಮ ಮೇಲೆ ಹೊರಿಸುವರು ಅದಕ್ಕಾಗಿ ಹರ್ಷಿಸಿ ಆನಂದಪಡಿರಿ.

೧೦. ಧರೆಗೆ ನೀವೇ ಉಪ್ಪು ;ಉಪ್ಪೆ ಸಪ್ಪೆಯಾಗಿಬಿಟ್ಟರೆ ಅದಕ್ಕೆ ಇನ್ನಾವುದರಿಂದ ಪುನ: ರುಚಿಬಂದೀತು?

ಇದಾದ ಮೇಲೆ ಯೇಸು ಜನಸಾಮಾನ್ಯರ ಗುರುವಾಗುತ್ತಾರೆ ದೇವರ ಪುತ್ರರೆಂದು ಕರೆಸಿಕೊಳ್ಳುತ್ತಾರೆ. ಅವರ ದು:ಖ, ದುಮ್ಮಾನ ರೋಗ,ರುಜಿನಗಳನ್ನು ಸಂತೈಸಲು ಹಾತೊರೆಯುತ್ತಾರೆ. ಇದು ಜನಸಾಮಾನ್ಯರ ನಡುವೆ ಸಂಚಲನವನ್ನುಂಟು ಮಾಡುತ್ತದೆ.ಇದು ಇದು ಅಂದಿನ ಯಹೂದ್ಯ ಪುರೋಹಿತಶಾಹಿಗೆ ತಮ್ಮ ಅಧಿಕಾರವನ್ನೇ ಬುಡಮೇಲು ಮಾಡುತ್ತಿರುವ ಪ್ರಯತ್ನವಾಗಿ ಕಂಡು ರಾಜ್ಯಾಡಳಿತದ ಸಮ್ಮತಿಯೊಂದಿಗೆ ಯೇಸುವನ್ನು ವಿಚಾರಣೆಗೊಳಪಡಿಸಿ ಅಂತಿಮವಾಗಿ ಶಿಲುಬೆಗೆ ಏರಿಸಿದ್ದು ಈಗ ಚರಿತ್ರೆ ಮತ್ತು ಮಾನವಕುಲದ ಒಂದು ಉಜ್ವಲ ಧಾರ್ಮಿಕ ಅಧ್ಯಾಯ ಕೂಡ. ಎರಡು ಸಾವಿರ ವರ್ಷಗಳ ನಂತರವೂ ಜಗತ್ತಿನ ಜನತೆ ಯೇಸುವಿನ 'ಸಂದೇಶಗಳನ್ನು ನೆನೆಯುತ್ತಾ ಅವರ ಹುಟ್ಟು ಹಬ್ಬವನ್ನು ಡಿಸೆಂಬರ್ ೨೫ರಂದು ಸಂತೋಷ–ಸಡಗರಗಳಿಂದ ಆಚರಿಸುತ್ತಾರೆ.



**(ಲೇಖಕರು ಹಲವು ಅಧ್ಯಾತ್ಮಿಕ ಪಂಥಗಳ ಅಭ್ಯಾಸ ಮಾಡಿರುವ ಯುವ ಸಮಾಜವಾದಿ ಚಿಂತಕರು).**

# ಕಲೆ–ಸಾಹಿತ್ಯ–ಸಂತಾಪ–ಸಂಪಾದನೆ ಇತ್ಯಾದಿ: ಕೆಲ ಚಿಡಿ ಟಿಪ್ಪಣಿಗಳು

## ಹಾವೇರಿಯಲ್ಲೊಂದು ಕಲಾ ಗ್ಯಾಲರಿ



ನಾನು, ನನ್ನ ಪತ್ನಿ ಸವಿತಾ ಮತ್ತು ಗೆಳೆಯ ಹೊನ್ನಾಳಿ ಚಂದ್ರು ಇತ್ತೀಚೆಗೆ ಗದಗಕ್ಕೆ ಹೋಗಿ ವಾಪಸಾಗುವಾಗ ಕವಿ ಮಿತ್ರ ಸತೀಶ ಕುಲಕರ್ಣಿಯವರೊಂದಿಗೆ ಒಂದಿಷ್ಟು ಕಾಲ ಕಳೆಯಲು ಹಾವೇರಿಗೆ ಬಂದಾಗ ಸತೀಶರು ನಮಗೆ ಖಾನಾವಳಿಯೊಂರಲ್ಲಿ ಊಟ ಕೊಡಿಸಿ ನಮ್ಮನ್ನು ಆ ಊರಿನ ಪೂರಾ ಹೊರವಲಯದಲ್ಲಿರುವ ತಮ್ಮ ಚಿತ್ರಕಲಾವಿದ ಮಿತ್ರರೊಬ್ಬರ ಮನೆಗೆ ಕರೆದೊಯ್ದಾಗ ರಾತ್ರಿ ಒಂಬತ್ತೂವರೆ ಘಂಟೆ! ಶಿವಮೊಗ್ಗ ಮುಟ್ಟಲು ಇನ್ನೂ ಕನಿಷ್ಠ ನಾಲ್ಕು ತಾಸುಗಳ ಪ್ರಯಾಣವಿದ್ದಾಗ ನಾನು ಒಲ್ಲದ ಮನಸ್ಸಿನಿಂದಲೇ ಕಲಾವಿದರ ಮನೆಗೆ ಕಾಲಿಟ್ಟೆ. ಆದರೆ ಹಾಗೆ ಹೋದ ಮೇಲಷ್ಟೆ ನನಗೆ, ಹೋಗದಿದ್ದರೆ ನಾನೆಂತಹ ಅಮೂಲ್ಯ ಅವಕಾಶವನ್ನು ಕಳೆದುಕೊಳ್ಳುತ್ತಿದ್ದೆ ಎಂಬುದರ ಅರಿವಾದದ್ದು.

ಕರಿಯಪ್ಪ ಹಂಚಿನಮನಿ ಎಂಬ ಈ ಕಲಾವಿದರ ಮನೆ ಒಂದು ಕಲಾ ಗ್ಯಾಲರಿಯೂ ಹೌದು. ಗ್ಯಾಲರಿ ಮನೆಯ ಮೊದಲ ಮಹಡಿಯಲ್ಲಿದ್ದುದರಿಂದ ದಣಿದಿದ್ದ ನಾನು ಇತರರನ್ನು ಅದನ್ನು ನೋಡಿ ಬರಲು ಕಳಿಸಿ ಸುತ್ತ ಗೋಡೆಗಳಿಗೆ ತೂಗು ಹಾಕಿದ್ದ ಚಿತ್ರಗಳನ್ನು ನೋಡುತ್ತಾ ಕೂತೆ. ನೋಡನೋಡುತ್ತಾ ಇತ್ತೀಚಿನ ದಿನಗಳಲ್ಲಿ ಹಲವು ಇತರೆ ಆಸಕ್ತಿಗಳ ನಡುವೆ ಕಳೆದುಕೊಂಡಿದ್ದ ಚಿತ್ರಕಲೆ ಕುರಿತ ನನ್ನ ರಸಗ್ರಹಣ ಸೂಕ್ಷ್ಮಗಳು ಮೆಲ್ಲಗೆ ಮೇಲೆದ್ದು ಬರತೊಡಗಿದವು ಈ ಕಲಾವಿದನ ಕಲ್ಪನಾಶೀಲತೆ, ವರ್ಣ ಸಂಯೋಜನೆ, ಬ್ರಷ್ ಚಲನೆಯ ಏರಿಳಿತಗಳ ಗತಿಯನ್ನು ಗಮನಿಸುತ್ತಿದ್ದಂತೆ ಇವರೊಬ್ಬ ಸಾಕಷ್ಟು ಪ್ರಬುದ್ಧ ಕಲಾವಿದರೇ ಇರಬೇಕೆಂಬ ಅಭಿಪ್ರಾಯ ಮೂಡತೊಡಗಿತು. ಅಷ್ಟರಲ್ಲಿ ಗ್ಯಾಲರಿ ನೋಡಿ ಕೆಳಗಿಳಿದು ಬಂದ ಸವಿತಾ ಒಳ್ಳೆಯ ಕಲೆಯನ್ನು ನೋಡಿ ಬಂದ ಸಂಭ್ರಮದಿಂದ ಗ್ಯಾಲರಿ ನೋಡಲು ನನ್ನನ್ನು ಒತ್ತಾಯಿಸುತ್ತಿದ್ದಂತೆ ಕಲಾವಿದ ಕರಿಯಪ್ಪ ಮತ್ತು ಅವರ ಪತ್ನಿ ಹಾಗೂ ಮಗ ಗ್ಯಾಲರಿಯ ಹಲವು ಆಯ್ದ ಚಿತ್ರಗಳನ್ನು ಕೆಳತಂದು ನನ್ನ ಮುಂದೆ ಪ್ರದರ್ಶನಕ್ಕಿಟ್ಟರು. ಪ್ರಕೃತಿ/ಕೊಲಾಜ್/ಅಮೂರ್ತ ಚಿತ್ರಗಳಿಗಿಂತ ಹೆಚ್ಚಾಗಿ ವ್ಯಕ್ತಿ ಚಿತ್ರಗಳಲ್ಲಿ(Portrait) ಕಲಾವಿದನ ಸೃಜನಶೀಲತೆ ಎದ್ದುಕಾಣುತ್ತಿರುವುದನ್ನು ನಾನು ಗಮನಿಸಿದೆ. ಸಂಬಂಧಿತ ವ್ಯಕ್ತಿಯ ವ್ಯಕ್ತಿತ್ವದ ಒಳ ಸತ್ವವನ್ನೆಲ್ಲ ಹೀರಿ ಹಿಡಿದಿಡಬಲ್ಲ ಮುಖದ ಸ್ನಾಯುಗಳ ಬಿಗಿತ–ನಿರಾಳತೆಗಳನ್ನೂ ಕಣ್ಣುಗಳ ಭಾವಪೂರ್ಣತೆಯನ್ನೂ, ಉಡುಪಿನ ಸಣ್ಣ ವಿವರಗಳನ್ನೂ ರೇಖೆಗಳ ಸೂಕ್ಷ್ಮ ಏರಿಳಿತಗಳ ಮತ್ತು ಬಣ್ಣಗಳ ಔಚಿತ್ಯಪೂರ್ಣ ಹಾಸು–ಬೀಸುಗಳ ಮೂಲಕ ವ್ಯಕ್ತವಾದ ಕುಶಲತೆ ಮೆಚ್ಚುವಂತಿತ್ತು. ಹಳ್ಳಿಗರಾದ ಕರಿಯಪ್ಪ ಹಳ್ಳಿಗಾಡಿನ ಮುಖಗಳನ್ನು ಚಿತ್ರಿಸಿರುವ ರೀತಿ ಅವರಲ್ಲೊಬ್ಬ ಹುಟ್ಟು ಕಲಾವಿದನಿದ್ದಾನೆ ಎಂಬುದನ್ನು ಸಾಬೀತುಪಡಿಸುವಂತಿತ್ತು. ಕಪ್ಪು–ಬಿಳುಪಿನ ಈ ಮುದ್ರಣದಲ್ಲಿ ಈ ಕುಶಲತೆ ಮಸುಕಾಗಿರುವುದು ಸಹಜ.





ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಯ ರೈತ ಹಿನ್ನೆಲೆಯ ಜನಪದ(ಡೊಳ್ಳು ಕುಣಿತ) ಕಲಾವಿದರ ಕುಟುಂಬದ ಮಗನಾದ ಕರಿಯಪ್ಪನ ಕಲಾ ಪ್ರತಿಭೆಯನ್ನು ಬಾಲ್ಯದಲ್ಲೇ ಗುರುತಿಸಿದ ಶಾಲಾ ಮಾಸ್ತರ ಬಡಿಗೇರರು ಆತನನ್ನು ಅದೇ ಊರಿನ ಚಿತ್ರಕಲಾ ಶಾಲೆಗೆ ಸೇರಿಸಿದ್ದೇ ನೆಪವಾಗಿ ಇಂದು ಅವರು ಅಂತಾರಾಷ್ಟ್ರೀಯ ಮಾನ್ಯತೆಯ ಕಲಾವಿದರಾಗಿ ಬೆಳೆದು ನಿಲ್ಲಲು ಸಾಧ್ಯವಾಗಿದೆ. ಕರಿಯಪ್ಪನವರ ಕಲಾಕೃತಿಗಳು ರಾಷ್ಟ್ರಾದ್ಯಂತದ ಕಲಾ ಮೇಳಗಳಲ್ಲದೆ ನ್ಯೂಯಾರ್ಕ್, ಸಿಂಗಪುರಗಳ ಕಲಾ ಪ್ರದರ್ಶನಗಳಲ್ಲೂ ಸ್ಥಾನ ಪಡೆದಿವೆ. ರಾಜ್ಯ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಹಲವು ಗೌರವಗಳು ಅವರಿಗೆ ಸಂದಿವೆ. ಇಷ್ಟಾದರೂ ಕರಿಯಪ್ಪನವರ ಅಸಲೀ ಗ್ರಾಮೀಣ ಮುಗ್ಧತೆ ಮತ್ತು ನಮ್ರತೆಗಳಿಗೆ ಕಿಂಚಿತ್ತೂ ಚ್ಯುತಿಯಾಗಿಲ್ಲ.

ವೃತ್ತಿ ಕಲಾವಿದರೇನೂ ಅಲ್ಲದ ಕರಿಯಪ್ಪನವರ ವೃತ್ತಿಯ ವಿವರ ಕೇಳಿದರೆ ನೀವು ಬೆಚ್ಚಿ ಬೀಳಬಹುದು. ಅವರು ವೃತ್ತಿಯಿಂದ ರಾಜ್ಯ ಮೀಸಲು ಪೋಲೀಸ್ ಪಡೆಯಲ್ಲಿ ಹವಲ್ದಾರ್! ಇದೆಂತ ಆಯ್ಕೆ ಎಂದು ಕೇಳಿದರೆ, ಹೊಟ್ಟೆಪಾಡಿಗಾಗಿ ಒಂದು ಕೆಲಸಬೇಕಿತ್ತು ಅಷ್ಟೆ ಎನ್ನುವ ಕರಿಯಪ್ಪನವರು, ತಮ್ಮ ಈ ಇಲಾಖೆಯೂ ತಮ್ಮ ಕಲಾಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಗೆಳೆಯ ಸತೀಶರೊಂದಿಗೆ ರಾತ್ರಿ ಮಾತು–ಊಟ ಸವಿಯಲು ಹಾವೇರಿಗೆ ಹೋದ ನಾವು ಊಟದ ಸವಿಯನ್ನು ಅನುಭವಿಸಿದ್ದು ಕರಿಯಪ್ಪನವರ ಈ 'ಹಂಚಿನಮನಿ ಕಲಾಗ್ಯಾಲರಿ'ಯ ಆವರಣದಲ್ಲಿನ ಕಲೋಪಚಾರದ ಮೂಲಕ ಎಂದು ಹೇಳಬೇಕು.

## 'ಕನ್ನಡ ಕಾಯಕ ವರ್ಷ': ಹಾಗೆಂದರೇನು?

ಈ ಬಾರಿಯ ರಾಜ್ಯೋತ್ಸವದ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಮುಂದಿನ ಇಡೀ ವರ್ಷವನ್ನು ಕನ್ನಡ ಕಾಯಕ ವರ್ಷವನ್ನಾಗಿ ಆಚರಿಸಲಾಗುವುದೆಂದು ಘೋಷಿಸಿದ್ದಾರೆ. ಈ ಹಿಂದಿನ ಸರ್ಕಾರದಂತೆಯೇ ಕನ್ನಡ ಶಾಲೆಗಳನ್ನು ಕ್ರಮೇಣ ಇಂಗ್ಲಿಷ್ ಶಾಲೆಗಳನ್ನಾಗಿ ಪರಿವರ್ತಿಸುವ ನಿರ್ಭಿಡೆಯ 'ಪ್ರಗತಿಪರ' ಕೆಲಸದಲ್ಲಿ ತೊಡಗಿರುವ ಈ ಸರ್ಕಾರ ಯಾವ ಬಾಯಿಂದ 'ಕನ್ನಡ ಕಾಯಕ'ದ ಮಾತಾಡುತ್ತಿದೆಯೋ, ಅದರ ಅರ್ಥವಾದರೂ ಏನು? ಎಂಬುದು ತಿಳಿಯದಾಗಿದೆ. ತಣ್ಣಗೆ ಪ್ರಕಟವಾಗಿ, ಅಷ್ಟೇ ತಣ್ಣಗೆ ವಿತರಣೆಯೂ ಆಗಿ ಹೋದ ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಪಟ್ಟಿಯನ್ನು ನೋಡಿದರೇ, ಈ ಸರ್ಕಾರದ ಕನ್ನಡ ಕಾಯಕದ ರೀತಿ ನೀತಿಗಳು ಏನಿರಬಹುದೆಂಬ ಸೂಚನೆಗಳು ಸಿಕ್ಕಾವು. ಮೂರು–ನಾಲ್ಕು ಹೆಸರುಗಳ ಹೊರತಾಗಿ ಇನ್ನಾವ ಹೆಸರೂ ಸಂಘ ಪರಿವಾರದ ವಲಯದ ಹೊರಗೆ ಪರಿಚಿತವಲ್ಲದಂತೆ ತೋರುವ ಈ ಪಟ್ಟಿ ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಾಧನೆಗಳ ವಲಯ ಹೇಗೆ ಈಗ ರಾಜಕೀಯವಾಗಿ ಒಡೆದುಹೋಗಿದೆ ಎಂಬುದನ್ನು ಸೂಚಿಸುತ್ತಾ ಆತಂಕ ಹುಟ್ಟಿಸುವಂತಿದೆ. ಇಂತಹ ವಾತಾವರಣದಲ್ಲಿ 'ಕನ್ನಡ ಕಾಯಕ' ಎಂದರೇನಾಗಬಹುದೆಂದು ಯೋಚಿಸಲೂ ಆತಂಕವಾಗುತ್ತದೆ.

ಈ ಮಧ್ಯೆ ರಾಜ್ಯ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದ ಆಹ್ವಾನ ಪತ್ರಿಕೆ ಬಂತು. ಕುತೂಹಲಕ್ಕೆ ತೆರೆದು ನೋಡಿದರೆ ಪ್ರಶಸ್ತಿ ಪ್ರದಾನ ಮಾಡುವ ಮಹಾಶಯ ಮಲ್ಲೇಪುರಂ ವೆಂಕಟೇಶ್! ಪ್ರಶಸ್ತಿ ಸ್ವೀಕರಿಸುವವರು 'ಸಿಡಿಮದ್ದು–ನೆತ್ತರು–ನೇಣುಗಂಬ' ಇತ್ಯಾದಿ 'ವೀರಸಾಹಿತ್ಯ' ಖ್ಯಾತಿಯ ಬಾಬು ಕೃಷ್ಣಮೂರ್ತಿಯವರ ಜೊತೆ ನಮ್ಮ ಕ್ರಾಂತಿಕಾರಿ ಚಿಂತಕ ಪ್ರೊ. ಕೆ.ಜಿ. ನಾಗರಾಜಪ್ಪನವರು! ಜೊತೆಗಿನ್ನಿಬ್ಬರು ಹಿರಿಯರು. ಏನೀ ದುಃಸ್ಥಿತಿ ಎಂದು ವಿವರವಾಗಿ ನೋಡಿದರೆ ಅಲ್ಲಿದ್ದ ಅಕಾಡೆಮಿಯ ಸದಸ್ಯರ ಪಟ್ಟಿ ಕಂಡು–ಒಂದೆರಡು ಹೆಸರುಗಳ ಹೊರತಾಗಿ–ಅಕಾಡೆಮಿಯು ಈ ಸ್ಥಿತಿಗಿಂತ ಭಿನ್ನವಾಗಿರಲು ಸಾಧ್ಯವೇ ಇಲ್ಲ ಎನಿಸಿ ಉಗುಳು ನುಂಗಿಕೊಂಡು ಸುಮ್ಮನಿರುವ ದುಃಸ್ಥಿತಿ ನನ್ನದಾಯಿತು

## ಅಗಲಿದ ಹಲವು ಮಹನೀಯರು...

ಕೋವಿಡ್‌ನ ಪರಿಣಾಮವೋ ಏನೋ, ಇತ್ತೀಚಿನ ತಿಂಗಳುಗಳಲ್ಲಿ ನಾವು ನಮ್ಮ ಅನೇಕ ಗಣ್ಯರ ಸಾವಿಗೆ ಸಾಕ್ಷಿಯಾಗುತ್ತಿದ್ದೇವೆ. ಕಳೆದ ಕೆಲ ವಾರಗಳಲ್ಲಿ ಹಿರಿಯ ರಂಗಭೂಮಿ ಮತ್ತು ಚಲಚಿತ್ರ ಕಲಾವಿದ ಎಚ್.ಜಿ. ಸೋಮಶೇಖರ ರಾವ್, ಸೈಕಲ್ ಕವಿ ಎಂದೇ ಪ್ರಸಿದ್ಧರಾಗಿದ್ದ ಧಾರವಾಡದ ವಿ.ಸಿ. ಐರಸಂಗ, ಖ್ಯಾತ ಕಲಾವಿದ, ರಂಗಕರ್ಮಿ, ಶಿಗ್ಗಾಂವಿ ಬಳಿಯ ಗೋಟಗೋಡಿ ರಾಕ್‌ಗಾರ್ಡನ್ಸ್‌ನ ರೂವಾರಿ ಮತ್ತು ಬಯಲಾಟ ಅಕಾಡೆಮಿಯ ಅಧ್ಯಕ್ಷ ಡಾ. ಟಿ.ಬಿ. ಸೊಲಬಕ್ಕನವರ್, ಮುಧೋಳದ ರನ್ನಕವಿ ಪ್ರತಿಷ್ಠಾನದ ಸಂಚಾಲಕ ಮತ್ತು ಸಾಹಿತ್ಯ ಸಂಘಟಕ ಬಿ.ಪಿ. ಹಿರೇಸೋಮಣ್ಣನವರ್, ಚಿತ್ರದುರ್ಗದ ದಲಿತ ಚಳುವಳಿ ನಾಯಕ ಎಂ. ಜಯಣ್ಣ ಮತ್ತು ತಮ್ಮ ಬಹುಮುಖ ಪ್ರತಿಭೆಯ ರೀತಿ ನೀತಿಗಳಿಂದ ವಿವಾದಾಸ್ಪದರಾಗಿ, ಆ ವಿವಾದಾಸ್ಪದತೆಯ ಝಗಮಗದಲ್ಲೇ ಮೆರೆದು ಬೆಳೆದು, ಕೊನೆಗೆ ಅದರಿಂದ ಬಸವಳಿದು ಬಾಡಿಹೋದ ರವಿ ಬೆಳಗೆರೆ ನಮ್ಮನ್ನಗಲಿ ಹೋಗಿದ್ದಾರೆ. ಇವರೆಲ್ಲರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.

## 'ರವಿ ಬೆಳಗೆರೆ ಎಂಬ ವಕ್ರ ಪ್ರತಿಭೆ



ರವಿ ಬೆಳಗೆರೆ ಕರ್ನಾಟಕದ ಸಾಹಿತ್ಯಿಕ–ಸಾಂಸ್ಕೃತಿಕ ವಲಯದ ಎಲ್ಲ ಹಿರಿ ಕಿರಿಯರಿಗೂ ಪರಿಚಿತರಾಗಿದ್ದಂತೆ ನನಗೂ ಪರಿಚಿತರು. ಅದು ಈಚಿನ ದಿನಗಳಲ್ಲಿ ಕಡಿದು ಹೋಗಿದ್ದ ಪುರಾತನ ಪರಿಚಯವಷ್ಟೆ. ಲಂಕೇಶರಷ್ಟು ಆಳದ ಮತ್ತು ತೀವ್ರತೆಯ ಸೃಜನಶೀಲತೆಯುಳ್ಳವರಾಗಿಲ್ಲದಿದ್ದರೂ, ಸದ್ದು ಮಾಡುವುದರಲ್ಲಿ ಅವರನ್ನು ಹತ್ತುಪಟ್ಟು ಮೀರಿಸಬಲ್ಲವರಾಗಿದ್ದ ರವಿ ಲಂಕೇಶರ ನಂತರ ಕನ್ನಡದ ಒಂದು ತಲೆಮಾರಿನ ಅಭಿರುಚಿ, ಆಲೋಚನೆ ಮತ್ತು ಅಭಿವ್ಯಕ್ತಿ ಕ್ರಮಗಳನ್ನು ಪ್ರಭಾವಿಸಿದವರೆಂದು ಹೇಳಲಾಗುತ್ತಿದೆ. ಆದರೆ ಅವರ ಆರಂಭದ ಕೆಲ ಕಥೆ–ಕಾದಂಬರಿಗಳು ಮತ್ತು 'ಹಾಯ್ ಬೆಂಗಳೂರು'ವಿನ ಕೆಲ ಸಂಚಿಕೆಗಳ ಹೊರತಾಗಿ ಹೆಚ್ಚೇನೂ ಅವರನ್ನು ಓದದ ನನಗೆ ಈ ಮಾತನ್ನು ಎಷ್ಟರ ಮಟ್ಟಿಗೆ ಮತ್ತು ಯಾವ ಅರ್ಥದಲ್ಲಿ ಒಪ್ಪಬಹುದೋ ತಿಳಿಯದು. ಪತ್ರಕರ್ತನಾಗಿ, ವಿಶೇಷವಾಗಿ ಅಪರಾಧ ವಿಷಯಗಳ ವರದಿಗಾರನಾಗಿ ಅವರು ಆಯ್ದುಕೊಂಡ ದಾರಿ, ಆರಂಭಿಸಿದ ಶೈಲಿ

ಮತ್ತು ಟಂಕಿಸಿದ ನುಡಿಗಟ್ಟು ಖಂಡಿತ ಸದಭಿರುಚಿಯದೆಂದು ಹೇಳಲಾಗದು. ಇದರ ಹೊರತಾಗಿ ರವಿ ಕನ್ನಡದಲ್ಲಿ–ಅದು ಕಥನವೇ ಆಗಲಿ, ಪತ್ರಿಕಾ ವರದಿಯೇ ಆಗಲಿ– ವಿಷಯ ನಿರೂಪಣಾ ಶೈಲಿಗೆ ಹೊಸದೊಂದು ವಕ್ರ ಶಕ್ತಿ ನೀಡಿದ್ದಂತೂ ನಿಜ. ಆತನ ಬದುಕಿನಂತೆಯೇ ಈ ವಕ್ರತೆಯೂ ರೋಚಕವೂ, ಮಾದಕವೂ ಆಗಿತ್ತು. ಇವನ್ನು ಸವಿದು ಅಮಲೇರಿಸಿಕೊಂಡವರು ಅವರನ್ನು ಆ ಕಾರಣಗಳಿಗಾಗಿ ಸಾಕಷ್ಟು ಕಾಲ ನೆನಪಿಟ್ಟುಕೊಂಡಾರು. .

## ಒಂದೇ ವಾರದಲ್ಲಿ ಮೂರು ಪುಸ್ತಕಗಳು!



ಕೆ. ಸತ್ಯನಾರಾಯಣ ಕನ್ನಡದ ಓರ್ವ ವಿಶಿಷ್ಟ ಕಥೆಗಾರ. ಬಹುಶಃ ಕಾವ್ಯವೊಂದನ್ನು ಬಿಟ್ಟು ಸಾಹಿತ್ಯದ ಹೆಚ್ಚೂಕಡಿಮೆ ಎಲ್ಲ ಪ್ರಕಾರಗಳಲ್ಲಿಯೂ ಪರಿಶ್ರಮ ತೋರಿರುವುದಲ್ಲದೆ, ಈ ಎಲ್ಲ ಕ್ಷೇತ್ರಗಳಲ್ಲಿಯೂ ಕನ್ನಡ ಓದುಗರ ಗಮನವನ್ನೂ ಸೆಳೆದಿರುವ ಈ ಲೇಖಕ ಸದಾ ಪ್ರಯೋಗಶೀಲರೂ ಹೌದು. ಇತ್ತೀಚೆಗೆ ಕಥನ ಮತ್ತು ಆತ್ಮಚರಿತ್ರೆಯ ಪ್ರಕಾರಗಳಲ್ಲಿ ಹೊಸ ಹಾದಿ ಹಿಡಿದು ಕುತೂಹಲ ಹುಟ್ಟಿಸಿರುವವರು. ಒಟ್ಟಿನಲ್ಲಿ ಕನ್ನಡದ ಬಹು ಉತ್ಸಾಹಿ ಬರಹಗಾರರು. ಇವರ ಸಾಹಿತ್ಯ ರಾಶಿ ಸಾಕಷ್ಟು ಅಗಾಧವಾಗಿಯೇ ಇದೆ. ವರಮಾನ ತೆರಿಗೆ ಇಲಾಖೆಯ ಆಯುಕ್ತರಾಗಿದ್ದ ಸತ್ಯನಾರಾಯಣ ಆ ವೃತ್ತಿಯಿಂದ ನಿವೃತ್ತರಾದ ಮೇಲೆ ಒಂದೇ ಸಮನೆ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ನನಗೆ ಒಂದು ವಾರದಲ್ಲಿ ಅವರ ಮೂರು ಪುಸ್ತಕಗಳು ಬಂದು ತಲುಪಿವೆ. ಸತ್ಯನಾರಾಯಣ ಅವರ ಸಾಹಿತ್ಯ ಪ್ರೀತಿ ಮತ್ತು ನಿಷ್ಠೆಯನ್ನು ನಾನು ತುಂಬ ಗೌರವಿಸುವವನು.

ಸತ್ಯನಾರಾಯಣ ಇಂಗ್ಲಿಷ್ ಸಾಹಿತ್ಯದ ಎಲ್ಲ ಪ್ರಕಾರಗಳ ಸತತ ಓದುಗರು. ಅವರ ಸಾಹಿತ್ಯ ನೋಟ ಮತ್ತು ಅನುಭವವನ್ನು ಇದು ಸಾಕಷ್ಟು ನಿರ್ಣಾಯಕವಾಗಿ ಪ್ರಭಾವಿಸಿರುವಂತಿದೆ. ಇತ್ತೀಚೆಗೆ ನನ್ನನ್ನು ತಲುಪಿದ ಮೂರು ಕೃತಿಗಳಲ್ಲಿ ಎರಡು ಕೃತಿಗಳಾದರೂ ಈ ಪ್ರಭಾವ ಒಂದು ಖಯಾಲಿಯಾಗಿ ಅವರನ್ನು ಕಾಡುತ್ತಿರುವುದು ಎದ್ದು ಕಾಣುವಂತಿದೆ. ಉದಾಹರಣೆಗೆ ಇಂಗ್ಲಿಷ್‌ನಲ್ಲಿ ಕಾದಂಬರಿಯೊಂದನ್ನು ಅಧ್ಯಾಯವಾರು ಓದಿ ಮಾಡುವ ಟಿಪ್ಪಣಿಗಳ ಮಾದರಿಯೊಂದರಿಂದ ಪ್ರೇರಿತರಾಗಿ ಇವರು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು 'ಚಿನ್ನಮ್ಮನ ಲಗ್ನ–೧೮೯೩' ಎಂಬ ಶೀರ್ಷಿಕೆಯಡಿ ಇಂತಹ ಪ್ರಯೋಗಕ್ಕೆ ಒಡ್ಡುವ ಪ್ರಯತ್ನ ಮಾಡಿದ್ದಾರೆ. ಇಂತಹ




ನವೀನ ಪ್ರಯತ್ನವೇನೋ ಸ್ವಾಗತಾರ್ಹವೇ ಆದರೂ, ಅದರಿಂದ ಆ ಕೃತಿ ಕುರಿತ ಹೊಸ ವ್ಯಾಖ್ಯಾನ–ಹೊಳಹು–ತಿಳುವಳಿಕೆಗಳು ಮೂಡುವಂತಾಗದಿದ್ದರೆ ಏನು ಪ್ರಯೋಜನ? ಈ ಪುಸ್ತಕದ ಬಗ್ಗೆ ಈ ಪ್ರಶ್ನೆ ಕೇಳುವಂತಾಗಿರಲು ಮುಖ್ಯ ಕಾರಣ, ಅವರು ಕನ್ನಡದ ಈ ಅನನ್ಯ ಕೃತಿ ಟಾಲ್‌ಸ್ಟಾಯ್‌ರ ಕಾದಂಬರಿಗಳ ಪ್ರಭಾವದಿಂದ ರಚಿತವಾದದ್ದೆಂಬ 'ಮಾಹಿತಿ'ಯನ್ನು ಆಧರಿಸಿ ಅದನ್ನು ಕಾಲ–ದೇಶಗಳ ಸಾಂಪ್ರದಾಯಿಕ ಅರ್ಥದ ಪರಿಕಲ್ಪನೆಗಳಿಂದ ಬಂಧಿತವಾದ ವಾಸ್ತವತಾವಾದದ ಮತ್ತು ಕಾದಂಬರಿ ಎಂಬ ಸಾಹಿತ್ಯ ಆಕೃತಿಯ ಎಲ್ಲೆಗಳನ್ನು ಮೀರಲು ಈ ಕೃತಿಯೇ ಮಾಡುವ ಒತ್ತಾಯಗಳಿಗೆ ಸ್ಪಂದಿಸಲಾಗದೇ ಹಳೇ ಹಾದಿಯಲ್ಲಿ ಓದಿರುವುದು. ಇದರಿಂದಾಗಿ ಇಲ್ಲಿ ದಾಖಲಾಗಲು ಸಾಧ್ಯವಾಗಿರುವುದು, ಸತ್ಯನಾರಾಯಣ ಕೊನೆಯಲ್ಲಿ ಹೇಳುವ ಈ ಲೆಕ್ಕಾಚಾರದ ದೇಶಾವರಿ ಮಾತುಗಳಷ್ಟೆ: 'ಲೇಖಕ ತನ್ನ ಪ್ರತಿಯೊಂದು ಕೃತಿಯ ವಸ್ತುವನ್ನೂ.. ಶೈಲಿಯನ್ನು ಆಯ್ಕೆ ಮಾಡಿಕೊಳ್ಳುವಾಗಲೇ ಕೃತಿಯನ್ನು ಯಾವ ರೀತಿಯ ಓದುಗರು, ಎಷ್ಟು ಪೀಳಿಗೆಯ ಓದುಗರು ಓದಬೇಕು, ಓದುತ್ತಾರೆ ಎಂಬ ಆಯ್ಕೆಯನ್ನು ಕೂಡ ಮಾಡಿರುತ್ತಾನೆ. ಈ ಮಾನದಂಡದಿಂದ ಗಮನಿಸುವುದಾದರೆ ಕುವೆಂಪುವಿನ ದೃಷ್ಟಿಯೆಲ್ಲ ತಕ್ಷಣದ ಅಥವಾ ಸಮಕಾಲೀನ ಓದುಗರಿಗಿಂತ ಹೆಚ್ಚಾಗಿ ಮುಂದಿನ ತಲೆಮಾರುಗಳಲ್ಲಿ ಬರುವ ಓದುಗರ ಕಡೆಗೇ ಇದೆ ಎಂಬುದು ಸ್ಪಷ್ಟವಾಗುತ್ತದೆ.' ಇದು ಈ ಕೃತಿಯ ಸತ್ಯನಾರಾಯಣರ ವಿಶಿಷ್ಟ ಓದು ಒದಗಿಸಿರುವ ಒಂದು ಹೊಸ ಒಳನೋಟ ಎಂದರೆ ಏನು ಹೇಳುವುದು?

ಇನ್ನು 'ಕಾರಂತರ ಕಾದಂಬರಿಗಳಲ್ಲಿ ದುಡಿಮೆ' ಎಂಬ ಇನ್ನೊಂದು ಪುಸ್ತಕ ಕರೋನಾ ಸಂಬಂಧವಾಗಿ ಘೋಷಿತವಾದ ಲಾಕ್‌ಡೌನ್‌ನ ಪರಿಣಾಮದಿಂದ ಉಂಟಾದ ಕಾರ್ಮಿಕರ ವಲಸೆ ಎಂಬ ವಿದ್ಯಮಾನದಿಂದ ಪ್ರೇರಿತವಾದ ಕೃತಿ. ಇದರಲ್ಲಿ 'ಚೋಮನ ದುಡಿ', 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಕುಡಿಯರ ಕೂಸು' ಮತ್ತು 'ಜಾರುವ ದಾರಿಯಲ್ಲಿ' ಕೃತಿಗಳಲ್ಲಿ ಸತ್ಯನಾರಾಯಣರೇ ಈ ಪುಸ್ತಕದಲ್ಲಿ ಬಹಳ ಬಾರಿ ಬಳಸುವ (ಆದರೆ ಅರ್ಥ ಮಾತ್ರ ಸ್ಪಷ್ಟವಾಗದ) 'ಶ್ರಮದ ವಿನ್ಯಾಸ' ಕುರಿತ ಚರ್ಚೆ ಇದೆ. ಆದರೆ ಪುಸ್ತಕದ ಪ್ರವೇಶ ಅಧ್ಯಾಯದಲ್ಲಿ 'ಜಗತ್ತಿನ ಆರ್ಥಿಕ ವ್ಯವಸ್ಥೆ ಬೆಳೆದಿರುವುದೇ ವಲಸಿಗರಿಂದ. ವಲಸೆ ಕಾರ್ಮಿಕರಿಂದ..... ಹೆಚ್ಚಿನ ಸಂದರ್ಭಗಳಲ್ಲಿ ವಲಸಿಗರು ಸ್ಥಳೀಯರಿಗಿಂತ ಹೆಚ್ಚು ಸಾಹಸಿಗಳು, ಪ್ರತಿಭಾವಂತರು, ಕುಶಲಿಗಳೂ ಆಗಿರುತ್ತಾರೆ. ಇವರ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಹೀರಿಕೊಂಡ ನಂತರ ಸ್ಥಳೀಯರು ಇವರ ಬಗ್ಗೆ ಮೊದಲು ಬೊಬ್ಬೆ ಎಬ್ಬಿಸುತ್ತಾರೆ, ನಂತರ ದ್ವೇಷಿಸುತ್ತಾರೆ; ಎಂಬ ಸರಳೀಕೃತವಾದರೂ, ಇದು ಹುಟ್ಟಿಸುವ ಇಲ್ಲಿನ ಚರ್ಚೆ ವಲಸೆ ಸಮಸ್ಯೆಯ ಸುತ್ತ ಇದೆ ಎಂಬ ನಿರೀಕ್ಷೆ– ಕುತೂಹಲಗಳನ್ನೂ ಈ ಪುಸ್ತಕ ಹುಸಿ ಮಾಡುತ್ತದೆ. ಈ ಕಾದಂಬರಿಗಳ ಬಗ್ಗೆ ಬರೆಯಲು ಲೇಖಕರಿಗೆ ಒಂದು ನೆಪಬೇಕಾಗಿತ್ತು ಎಂಬಂತೆ ಈ ಹಿಂದೆ ಹೇಳಿದ 'ಶ್ರಮದ ವಿನ್ಯಾಸ' ಎಂಬ ಅಮೂರ್ತ ಪರಿಕಲ್ಪನೆಯ ಸುತ್ತ ಈ ಕಾದಂಬರಿಗಳನ್ನು ಕುರಿತ ಈವರೆಗಿನ ಬರಹಗಳಲ್ಲಿ ಮಿಂಚದ ಹೊಳಹುಗಳೇನೂ ಇಲ್ಲದ ಒಂದಿಷ್ಟು ಟಿಪ್ಪಣಿಗಳು ಇಲ್ಲಿ ದಾಖಲಾಗಿವೆ. ಕೊನೆಯಲ್ಲಿ ಒಂದು ಮಾತು: ಸತ್ಯನಾರಾಯಣ ಈ ಪುಸ್ತಕದ ಕೊನೆಯತ ಅಧ್ಯಾಯವಾಗಿ ಬರೆಯುವ ಒಟ್ಟಂದದ ಮಾತುಗಳನ್ನು ಬರೆಯುವ ಮುನ್ನ ಈ ಒಟ್ಟಂದದ ವ್ಯಾಪ್ತಿಗೆ ಕಾರಂತರ ರಾಜಕೀಯ ಕಾದಂಬರಿಗಳೆಂದು ಗುರುತಿಸಬಹುದಾದ 'ಔದಾರ್ಯದ ಉರುಳಿನಲ್ಲಿ', 'ಗೊಂಡಾರಣ್ಯ', ಮೂಜನ್ಮ', 'ನಾವು ಕಟ್ಟಿದ ಸ್ವರ್ಗ' ಮುಂತಾದ ಕಾದಂಬರಿಗಳನ್ನೂ ಗಣನೆಗೆ ತೆಗೆದುಕೊಂಡಿದ್ದರೆ ಸತ್ಯನಾರಾಯಣರ ಒಟ್ಟಂದದ ಮಾತುಗಳು ಒಂದಿಷ್ಟು ಸಂಕೀರ್ಣತೆಯನ್ನೂ ಪಡೆಯಬಹುದಿತ್ತು.

ಸತ್ಯನಾರಾಯಣ ಕ್ಷಮಿಸಬೇಕು: ನನಗೆ ಈ ಎರಡು ಕೃತಿಗಳೂ ಲಾಕ್‌ಡೌನ್ ಸಮಯದ 'ಟೈಂ ಪಾಸ್' ಬರಹಗಳಂತೆ ಕಂಡಿವೆ, ಇನ್ನು ಮಾಸ್ತಿ ಕುರಿತ ಮೂರನೇ ಕೃತಿ ಹೇಗೋ ಇನ್ನೂ ಓದಿ ನೋಡಬೇಕು.

## ಕುವೆಂಪು ಕೃತಿಗಳಿಗೆ ಈಗ ಸಂಪಾದಕರ ಭಾಗ್ಯ!




ಕೆಲ ದಿನಗಳ ಹಿಂದೆ ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರು ಕರೆ ಮಾಡಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದವರು ಮರುಮುದ್ರಣ ಮಾಡಿರುವ ಕುವೆಂಪು ಸಮಗ್ರ ಸಾಹಿತ್ಯ ಸಂಪುಟಗಳನ್ನು ನೋಡಿದಿರಾ ಎಂದು ಕೇಳಿದರು. ಕೊನೆಯ ಒಂದು ಸಂಪುಟದ ಹೊರತಾಗಿ ಮಿಕ್ಕೆಲ್ಲ ಸಂಪುಟಗಳು ನನ್ನಲ್ಲಿದ್ದರಿಂದ, 'ಇಲ್ಲ. ಏನು ವಿಶೇಷ? ಎಂದು ಕೇಳಿದೆ. ತಕ್ಷಣ ಅವರು ಅವುಗಳ ಮುಖಪುಟಗಳ ವಾಟ್ಸಪ್ ಬಿಂಬಗಳನ್ನು ಕಳಿಸಿದರು! ನೋಡಿದರೆ ಪ್ರತಿ ಸಂಪುಟದ ಮುಖಪುಟದಲ್ಲೂ ಸಂಪಾದಕ: ಡಾ ಕೆ.ಸಿ. ಶಿವಾರೆಡ್ಡಿ ಎಂಬ ಹೆಸರು ರಾರಾಜಿಸುತ್ತಿದೆ. ಶ್ರೀರಾಮಾಯಣ ದರ್ಶನಂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು'ಗೂ ಇವರು ಸಂಪಾದಕರು! ಈ ಹಿಂದಿನ ಮುದ್ರಣದ ಸಂಪುಟಗಳಲ್ಲಿ ಸಂಯೋಜಕ ಸಂಪಾದಕರು ಎಂದು ಒಳ ತಾಂತ್ರಿಕ ಪುಟದಲ್ಲಿದ್ದ ಹೆಸರು ಈಗ ಸಂಪಾದಕರು ಎಂದು ಮುಖಪುಟದ ಮೇಲೇ ಬಂದಿದೆ! ಏನು ಸಂಪಾದನಾ ಕಾರ್ಯ ನಡೆದಿದೆ ಎಂದು ಒಳಗೆ ತೆಗೆದು ನೋಡಿದರೆ, ಅದರ ಯಾವ ಸುಳಿವೂ ಇಲ್ಲ. ಈ ಕೆಲವು ಸಂಪುಟಗಳನ್ನು ಈ ಮೊದಲು ಪ್ರತಿಷ್ಠಾನದ ಪರವಾಗಿ ಮುದ್ರಿಸಿದ್ದ ಪ್ರಕಾಶ್ ಅವರನ್ನೇ ಕೇಳಿದರೆ, 'ನಿಮ್ಮಂಥವರೇ ಹೇಳಬೇಕು' ಎಂದು ನಿರಾಶರಾಗಿ ಹೊಸದಾಗಿ ಪ್ರಕಟವಾಗಿರುವ 'ಕುವೆಂಪು ಪತ್ರಗಳು' ಸಂಪುಟಕ್ಕಾಗಿ ರೆಡ್ಡಿಯವರ ಸಂಪಾದನಾ ಶ್ರಮವಿರಬಹುದು' ಎನ್ನುತ್ತಿರುವಾಗಲೇ ಮತ್ತೊಂದು ವಾಟ್ಸಪ್ ಸಂದೇಶ ನನ್ನನ್ನು ತಲುಪಿತು. ಇದೇ ವಿಷಯದ ಬಗ್ಗೆ ಕೋಪಾವಿಷ್ಟರಾಗಿ ಬರೆದಿದ್ದ ಹರಿಹರಪ್ರಿಯರೆಂಬ ಅಭಿಮಾನಿ 'ಕುವೆಂಪು ಪತ್ರಗಳನ್ನು ಸಂಗ್ರಹಿಸಿ ಅಡಿಟಿಪ್ಪಣಿಗಳೊಂದಿಗೆ ಈ ಮೊದಲೇ ಪ್ರಕಟಿಸಿದ್ದವನು ನಾನು!' ಎಂಬ ಸಾರ್ವಜನಿಕ ಪ್ರಕಟಣೆ ನೀಡಿದ್ದರು!

ನಿಜ, ಶಿವಾರೆಡ್ಡಿಯವರು ಕುವೆಂಪು ಮತ್ತು ತೇಜಸ್ವಿ ಸಾಹಿತ್ಯದ ಬಗ್ಗೆ ಆಸಕ್ತಿ, ಶ್ರದ್ಧೆ ಅಭಿಮಾನಗಳಿಂದ ಸಾಕಷ್ಟು ಕೆಲಸ ಮಾಡಿದ್ದಾರೆ, ಆದರೆ ಅದಕ್ಕಾಗಿ ಔಚಿತ್ಯ ಮೀರಿ ಹೆಸರು ಪಡೆಯಲು ಹೋಗಬಾರದು. ಹಾಗೇ ಇಂತಹ ವಿಷಯಗಳಲ್ಲಿ ವಿಶ್ವವಿದ್ಯಾಲಯಗಳು ಕೂಡ ಇನ್ನಷ್ಟು ಜವಾಬ್ದಾರಿಯಿಂದ ವರ್ತಿಸಬೇಕಲ್ಲವೆ?

ಇನ್ನೊಂದು ಮಾತು ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ಕುವೆಂಪು ಸಮಗ್ರ ಕಾವ್ಯ ಎಂಬ ಸಾರ್ವತ್ರಿ ಶೀರ್ಷಿಯಡಿ ಇನ್ನೊಂದು ಕಾವ್ಯಕೃತಿಯೊಡನೆ ಉಪಶೀರ್ಷಿಕೆಯನ್ನಾಗಿ ಮಾಡಿ ಪ್ರಕಟಿಸುವುದೂ, ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳನ್ನು ಕುವೆಂಪು ಅವರ ಇತರ ಗದ್ಯ ಲೇಖಗಳಂತೆ ಸಮಗ್ರ ಗದ್ಯವೆಂಬ ಸಾರ್ವತ್ರಿಕ ಶೀರ್ಷಿಕೆಯಡಿ ಉಪಶೀರ್ಷಿಕೆಗಳಾಗಿ ಪ್ರಕಟಿಸುವುದು ಆಯಾ ಕೃತಿಗಳ ಅನನ್ಯತೆಗಳಿಗೆ ಅನ್ಯಾಯ ಮಾಡಿದಂತೆ. ಕನ್ನಡ ವಿಶ್ವವಿದ್ಯಾಲಯ ಈ ಬಗ್ಗೆ ಯೋಚಿಸಬೇಕು.

–ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು: **ಗೈರ ಸಮಜೂತಿ**(ಕಾದಂಬರಿ) ಲೇ: **ರಾಘವೇಂದ್ರ ಪಾಟೀಲ** ಪ್ರ : **ಮನೋಹರ ಗ್ರಂಥ ಮಾಲಾ,** ಧಾರವಾಡ(೮೩೬–೨೪೪೧೮೨೩) ಪು:**೪೫೬** ಬೆ:ರೂ.೪೫೦/–

### ತಿಳಿಗೊಳ್ಳದ ಜಿಜ್ಞಾಸೆ



'ಒಡಪುಗಳು', 'ಪ್ರತಿಮೆಗಳು', 'ದೇಸಗತಿ', 'ಮಾಯಿಯ ಮುಖಗಳು', 'ತೇರು' ಕೃತಿಗಳ ಮೂಲಕ ಕಥನ ಕ್ರಿಯೆಯ ಹೊಸ ಸಾಧ್ಯತೆಗಳನ್ನು ತೋರಿದ ರಾಘವೇಂದ್ರ ಪಾಟೀಲ ಕನ್ನಡ ಕಥನ ಸಾಹಿತ್ಯದಲ್ಲಿ ತಮ್ಮದೆ ಛಾಪು ಮೂಡಿಸಿದ್ದಾರೆ. ಈಗ ಅವರ ಹೊಸ ಕಾದಂಬರಿ 'ಗೈರ ಸಮಜೂತಿ' ಬಂದಿದೆ. ಅವರ ಕೃತಿಗಳ ವಸ್ತು, ಅವು ನಿರೂಪಿಸ ಬಯಸುವ ಬದುಕು, ಅಲ್ಲಿನ ಪಾತ್ರಗಳ ವೈವಿಧ್ಯತೆ... ಇವು ಯಾವೂ ಕೂಡ ಪಾಟೀಲರ ವಿಶಿಷ್ಟ ಕಥನ ಕ್ರಮವನ್ನು ನಿರ್ಲಕ್ಷಿಸಲು ಬಿಡುವುದಿಲ್ಲ. ಈ 'ಗೈರ ಸಮಜೂತಿ' ಕಾದಂಬರಿಯಲ್ಲೂ ಅವರು ಕಥನದ ಮತ್ತೊಂದು ಮಗ್ಗುಲನ್ನು ತಲುಪಲು ಯತ್ನಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವ ಕಾಲದ ಬದುಕಿನಿಂದ ಆರಂಭವಾಗುವ ಈ ಕಾದಂಬರಿಯ ವಸ್ತು ಈ ಹೊತ್ತಿನ ವರ್ತಮಾನದವರೆಗೂ ಚಾಚಿಕೊಳ್ಳುತ್ತದೆ. ಮೂರು ತಲೆಮಾರುಗಳ ಈ ಕಥನ ಬೆಟಗೇರಿ, ಐನಾಪುರದ ಎರಡು ಬ್ರಾಹ್ಮಣ ಕುಟುಂಬಗಳ ಅಥವಾ ಶಾಮರಾಯ, ಸತ್ಯಭೋಧ, ಅಚ್ಯುತ, ರಾಘಣ್ಣ, ವಚ್ಚಕ್ಕ, ರಾಧಜ್ಜಿ, ಕುಮಾರಿಲನಾಥನ ಕತೆಯಷ್ಟೇ ಆಗದೆ ಭಾರತದ ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯ ಸತ್ಯಾನ್ವೇಷಣೆ, ವಿಧವಾ ಸಮಸ್ಯೆಗಳ ಮೂಲಕ ಈ ಕಾದಂಬರಿ ಹಲವು ಭಾವತಂತುಗಳನ್ನು ಮೀಟುತ್ತದೆ. ಧಾರ್ಮಿಕ, ರಾಜಕೀಯ ಜಿಜ್ಞಾಸೆಗಳನ್ನು ನಡೆಸುತ್ತ ಭಾರತದ ಸಂಸ್ಕೃತಿ, ಅದರ ಸೌಹಾರ್ದದ ನೆಲೆಗಳನ್ನು ಶೋಧಿಸಲು ಯತ್ನಿಸುತ್ತದೆ.

ಆಡುನುಡಿಯಲ್ಲಿ ಇಂತಹದೊಂದು ದೀರ್ಘ ಕಾದಂಬರಿ ಬರೆಯುವುದು ಬಲು ಪ್ರಯಾಸದ ಕ್ರಿಯೆ. ಎಲ್ಲೂ ಅಸಹಜ ಅನ್ನಿಸದಂತೆ, ಗೋಕಾಂವಿ ಭಾಷೆಯ ಸೊಗಡು ತಟಗೂ ಮುಕ್ಕಾಗದಂತೆ ಒಂದು ಲಯದೊಳಗಡೆ ಇಡೀ ಕಾದಂಬರಿಯ ನೇಯ್ಗೆ ಇದೆ. ಓದುತ್ತಾ ಹಳ್ಳಿಯ ಯಾವುದೋ ಒಂದು ಓಣಿಯಲ್ಲಿ ತಿರುಗಾಡಿದಂತೆ, ಆ ಪಾತ್ರಗಳ ಜೊತೆ ನಾವು ಜೀವಿಸುತ್ತಿರುವಂತೆ ಭಾಸವಾಗುತ್ತದೆ. ಅಷ್ಟರ ಮಟ್ಟಿಗೆ ಇಲ್ಲಿನ ಭಾಷೆ ಜೀವಂತಿಕೆಯನ್ನು ಚಿಮ್ಮಿಸುತ್ತದೆ.

'ಗೈರ ಸಮಜೂತಿ' ಎಂದರೆ ತಪ್ಪು ಕಲ್ಪನೆ ಎಂದರ್ಥ. ಬ್ರಿಟಿಷ್ ವಿರೋಧಿ ಕೃತ್ಯಗಳಲ್ಲಿ ತೊಡಗಿಸಿಕೊಂಡು ತಲೆ ಮರೆಸಿಕೊಂಡಿದ್ದ ಸ್ವಾತಂತ್ರ್ಯ ಹೋರಾಟಗಾರ, ತನ್ನ ಚಿಕ್ಕಪ್ಪ ಕೃಷ್ಣಾಜಿಯನ್ನು ಅಚ್ಯುತ ಹೋಲುತ್ತಿದ್ದ. ಅವನನ್ನು ಬಂಧಿಸಲಾಗದಿದ್ದಲ್ಲಿ ಗುಂಡಿಕ್ಕಿ ಕೊಲ್ಲುವ ಆದೇಶವಿತ್ತು. ಅಚ್ಯುತನನ್ನೇ ಕೃಷ್ಣಾಜಿಯೆಂದು ಭಾವಿಸಿ ಕೊಲ್ಲಲಾಯಿತು. ಈ 'ಗೈರ ಸಮಜೂತಿ'ಯಿಂದಾಗಿ ಬಾಲ್ಯವಿವಾಹವಾಗಿದ್ದ ವಚ್ಚಕ್ಕ ವಿಧವೆಯಾಗುತ್ತಾಳೆ. ಬ್ರಾಹ್ಮಣ ಪರಿಸರದ ವೈಧವ್ಯದ ಪಡಿಪಾಟಲುಗಳನ್ನು ದಾಟಿಕೊಂಡು ವಚ್ಚಕ್ಕ ಸಂಸ್ಕೃತ ಕಲಿಯುತ್ತ, ಕಠೋಪನಿಷತ್‌ನ್ನು ಬದುಕಿನಲ್ಲಿ ಅಳವಡಿಸಿಕೊಂಡು ಓಂಕಾರದ ವಚ್ಚಕ್ಕ ಗೌಡತಿಯಾಗಿ ಸಮಾಜಮುಖಿ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಮದುವೆಯೊಂದೇ ಅಂತಿಮವಲ್ಲ; ಬದುಕು ಬಹು ದೊಡ್ಡದು. ಬದುಕಿನ ದಿನಚರಿಗೆ ಮುಖಾಮುಖಿಯಾಗುತ್ತ ಆದರ್ಶದ ಬಾಳನ್ನು ಕಟ್ಟಿಕೊಳ್ಳುವದು ಮುಖ್ಯವೆಂದು ತೋರ್ಪಡಿಸುತ್ತಲೆ ವಚ್ಚಕ್ಕನ ದಿಟ್ಟ ಬದುಕನ್ನು ಲೇಖಕ ಪಾಟೀಲರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ವೈಯಕ್ತಿಕ ಬದುಕಿನಲ್ಲಿ ಸಂಭವಿಸುವ 'ಗೈರ ಸಮಜೂತಿ'ಗಳು ಆ ವ್ಯಕ್ತಿಯ ಬಾಳಿನಲ್ಲಷ್ಟೇ ತಾಪತ್ರಯ ತಂದೊಡ್ಡಬಹುದು. ಆದರೆ, ಪ್ರಭುತ್ವ ಎಸಗುವ ತಪ್ಪು ಕಲ್ಪನೆಗಳು ಸಮಾಜೋ– ರಾಜಕೀಯ ವಿಪ್ಲವಗಳಿಗೆ ಕಾರಣವಾಗುತ್ತವೆ. ಅಂತಹ ಹತ್ತಾರು 'ಗೈರ ಸಮಜೂತಿ'ಗಳನ್ನು ಈ ಕಾದಂಬರಿಯುದ್ದಕ್ಕೂ ಕಾಣುತ್ತೇವೆ. ಕೌಟುಂಬಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಲಯದೊಳಗಡೆ ಜರುಗುವ ಗೈರ ಸಮಜೂತಿಗಳು ಹೇಗೆ ಸಾಮಾಜಿಕವಾಗಿ ಪ್ರಕ್ಷುಬ್ಧತೆಯನ್ನು ಉಂಟುಮಾಡುತ್ತವೆ ಎನ್ನುವುದನ್ನು ಕಾದಂಬರಿ ಮನಗಾಣಿಸುತ್ತದೆ. ಇಲ್ಲಿ 'ಗೈರ ಸಮಜೂತಿ' ಒಂದು ರೂಪಕ, ತಂತ್ರದಂತೆ ಬಳಕೆಯಾಗಿದೆ.

ಮುಸ್ಲಿಂ ಮಹಿಳೆಯೊಬ್ಬಳು ಹೆರಿಗೆ ಬೇನೆ ತಿನ್ನುತ್ತ ತೊಂದರೆ ಅನುಭವಿಸುತ್ತಿರುವಾಗ ಆ ಹೆರಿಗೆ ಮಾಡಿಸಲು ಸಹಾಯ ಕೋರಿ ವಚ್ಚಕ್ಕನನ್ನು ಕೇಳಲು ಹುಸೇನಬೀ ಶಾಮರಾಯರ ಮನೆಗೆ ಬರುವ ದೃಶ್ಯ ಮನ ಕಲಕುವಂತಿದೆ. ಮತಾಂಧತೆ ಎನ್ನುವುದು ಅದೆಷ್ಟು ಕಠೋರವಾಗಿರುತ್ತದೆ, ಕತ್ತಿಯ ಅಂಚಿನ ಹಾಗೆ ಹರಿತವಾಗಿರುತ್ತದೆ ಎಂಬುದನ್ನೂ ಪಾಟೀಲರು ಇಲ್ಲಿ ಚಿತ್ರಿಸಿದ್ದಾರೆ. ಹುಸೇನಬೀ ಬಂದಾಗ ಮಾಧವ ರೌಸಿನಿಂದ ಚೀರಾಡಲು ಶುರು ಮಾಡುತ್ತಾನೆ: 'ಯಾವ ಓಂಕಾರದ ಗೋಡತೇನೂ ಬರೂದುಲ್ಲಾ... ಯಾರೂ ಬರೂದುಲ್ಲಾ..! ನಡೀರಿ... ಹೋಗರಿ ಅಲ್ಲಿಗೇ... ಅದ ನಿಮ್ಮ ಪಾಕಿಸ್ತಾನ ಐತೆಲಾ.. ಅಲ್ಲಿಗೇ ಹೋಗರೀ..'

ಹುಸನಬೀ ಎರಡೂ ಕೈ ಜೋಡಿಸಿ ಅಂದಳು.. 'ನಮಗ ಯಾವ ಪಾಕಿಸ್ತಾನನೂ ಗೊಂತಿಲ್ಲ ಯಪ್ಪಾ. ದುಡಕೊಂಡು ತಿನ್ನಾವರ ನಾವಾ.. ನಮಗ ಗೊಂತಿರೂದು ಇದ ಬೆಟಗೇರೀ ಮತ್ತ ಖಬರಸ್ತಾನಾ ಎಡ್ಡ. ಇವನ್ನ ಬಿಟ್ಟರ ನಮಗ ಯಾವದೂ ಗೊಂತಿಲ್ಲ ತಂದೆ.'

ಕೊನೆಗೆ ಮಾಧವನ ಮಾತನ್ನು ಅಲಕ್ಷಿಸಿ ವಚ್ಚಕ್ಕ ಹೆರಿಗೆ ಮಾಡಿಸಲು ತೆರಳುತ್ತಾಳೆ. ಜಾತಿ, ಮತದ ಹೊಟ್ಟು ಗಾಳಿಗೆ ತೂರಿ ಮುಂದೆ ಸಾಗುವ ವಚ್ಚಕ್ಕನ ಮಾನವೀಯತೆಗೆ ಗೆಲುವಾಗುತ್ತದೆ.

ಭಾರತದ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ನಮ್ಮ ಸಂಸ್ಕೃತಿಯಲ್ಲಿಯೇ ಉತ್ತರಗಳಿವೆ ಎಂಬುದನ್ನು ಸೂಚ್ಯವಾಗಿ ಕಾದಂಬರಿ ಪ್ರಕಟಿಸಲು ಪ್ರಯತ್ನಿಸುತ್ತಿರುವಂತಿದೆ. ಇದು ಈ ಹೊತ್ತಿನ ಹಿಂದೂ – ಮುಸ್ಲಿಂ ಸಮುದಾಯಗಳ ಮೂಲಭೂತವಾದ ತಂದೊಡ್ಡಿದ ಸಮಸ್ಯೆಯವರೆಗೂ ಮಾತಾಡುತ್ತದೆ. 'ನಾವು' ಮತ್ತು 'ಅವರು' ಎನ್ನುವ ಭಿನ್ನತೆ ಹುಟ್ಟಿಕೊಂಡದ್ದು ರಾಜಕೀಯ ದುರುದ್ದೇಶದಿಂದ ಎಂಬುದು ಸ್ಪಷ್ಟವಾಗಿದ್ದರೂ ಕೆಲ 'ಗೈರ ಸಮಜೂತಿ'ಗಳಿಂದಾಗಿ ಇಂಡಿಯಾದ ಮನಸ್ಸುಗಳಲ್ಲಿ ಕೋಮು ದಳ್ಳುರಿ ಹೊತ್ತಿ ಉರಿಯುತ್ತಲೇ ಇದೆ. ಇದು ಶಮನವಾಗುವುದು ಎರಡೂ ಕಡೆಯ ಮೂಲಭೂತವಾದಕ್ಕೆ ಬೇಕಾಗಿಲ್ಲ ಎಂದು ಸೂಚಿಸುತ್ತಾ ಲೇಖಕರು ಈ ಭಿನ್ನ ಸಂಸ್ಕೃತಿಗಳನ್ನು ಚಿತ್ರಿಸುವಾಗ ಮತ್ತೊಂದು ಸಂಸ್ಕೃತಿಯ ಬಗೆಗೆ ಮೆಲುವಾಗಿ ಮಾತಾಡಿದರೂ ಅಲ್ಲೊಂದು ಅಸ್ಪಷ್ಟತೆಯ ಗೆರೆ ಕೊರೆದುಕೊಂಡು ಹೋಗುತ್ತದೆ.

ತಮ್ಮ ಅನುಬಂಧಥ ಮಾತುಗಳಲ್ಲಿ ಓ.ಎಲ್. ನಾಗಭೂಷಣಸ್ವಾಮಿ ಅವರು ಗುರುತಿಸುವಂತೆ 'ಮನುಷ್ಯ ಪ್ರೀತಿ, ಕಾರುಣ್ಯಗಳ ದಾರಿ 'ನಿಜ' ಸನಾತನ ಮಾತ್ರವೇ? ಹೌದಾದರೂ ಅದರ ಪ್ರತಿನಿಧಿಯಾಗಿರುವ ವಚ್ಚಕ್ಕನಿಗೆ ಜೊತೆಯಾಗಿ ನಿಸರ್ಗವೂ ಹಕ್ಕಿ ಪಕ್ಷಿಗಳೂ ಒದಗಿಬರುವುದು ಸುಂದರ, ಅಪೇಕ್ಷಣೀಯ ಸ್ವಪ್ನವಾಗಿದ್ದರೂ ಮಾಧವ ಪ್ರತಿನಿಧಿಸುವ ಉಗ್ರ ಧಾರ್ಮಿಕತೆಯೇ ನಿಜವೆನಿಸಿಬಿಡುವ ಅಪಾಯವಿದೆ..'.

ಈ ಮಾತು ಖರೆ. ಈ ಕಾದಂಬರಿಯ ಪಾತ್ರಗಳಾದ ಆದರ್ಶದ ಹಾದಿ ತುಳಿದ ವಚ್ಚಕ್ಕ, ಸ್ವಾತಂತ್ರ್ಯ ಹೋರಾಟಗಾರ ಕೃಷ್ಣಾಜಿ ಮತ್ತು ಮತಾಂಧನಂತಿರುವ ಮಾಧವ ಒಂದೇ ಕುಟುಂಬದಿಂದ ಬಂದವರು. ಆದರೆ ಎಲ್ಲರದೂ ಭಿನ್ನ ವ್ಯಕ್ತಿತ್ವ ಮತ್ತು ಭಿನ್ನ 'ಸಂಸ್ಕಾರ'. ಈ ವಿಭಿನ್ನತೆ ಬರೀ ಈ ಕುಟುಂಬದಲ್ಲಷ್ಟೇ ಅಲ್ಲ, ಎಲ್ಲ ಭಾರತೀಯ ಧರ್ಮಗಳ ಬಹುತೇಕ ಕುಟುಂಬಗಳ ಕತೆಯೂ ಹೀಗೆಯೇ ಇರುತ್ತದೆ. ಈ ಕಾದಂಬರಿ ಹೊರಡಿಸಲು ಪ್ರಯತ್ನಿಸುವ ಆದರ್ಶ ಮಾರ್ಗದ ಧ್ವನಿ ಹಲವು ತರಂಗಗಳಲ್ಲಿ ಕೇಳಿಸಿ ಗೊಂದಲ ಮೂಡಿಸುತ್ತದೆ. ಸಂಸ್ಕೃತ ಕಲಿತು, ಕಠೋಪನಿಷತ್ತು ಅಳವಡಿಸಿಕೊಂಡವರಷ್ಟೇ ಆದರ್ಶದ ದಾರಿಯಲ್ಲಿ ಸಾಗುತ್ತಾರೆ, ಭಾರತೀಯ ಅಧ್ಯಾತ್ಮಿಕ ಪರಂಪರೆ ಹಾಗೂ ಸನಾತನೆಗಳಲ್ಲಿಯೇ ಔನ್ನತ್ಯ ಅಡಗಿದೆ ಎಂಬರ್ಥ ಇಲ್ಲಿ ಧ್ವನಿಸಿದಂತಾಗುತ್ತದೆ. ಧರ್ಮ ಮತ್ತು ರಾಜಕಾರಣದ ಬಗೆಗೆ ಕೃತಿಯಲ್ಲಿ ನಡೆಯುವ ಜಿಜ್ಞಾಸೆ ತಿಳಿಗೊಳ್ಳದೆ ಓದುಗನೊಳಗೆ ಹಲವು ಜಟಿಲ ಪ್ರಶ್ನೆಗಳ ಅಲೆ ಎಬ್ಬಿಸಿ ಈ ಕಾದಂಬರಿ ಮುನ್ನಡೆಯುತ್ತದೆ.

**–ಟಿ.ಎಸ್. ಗೊರವರ**

ಪು: **ಶರಣ ಕ್ರಾಂತಿ** (ವಿಭಿನ್ನ ಪ್ರತಿಕ್ರಿಯೆಗಳು) ಸಂ: **ಬಸವರಾಜ ಸಾದರ** ಪ್ರ: **ಲಡಾಯಿ ಪ್ರಕಾಶನ,** ಗದಗ (೯೪೮೦೨೮೬೮೪೪) ಪು: ೧೫೦ ಬೆ; ರೂ.೧೨೦/–

### ಶರಣ ಕ್ರಾಂತಿಯ ವಿವಿಧ ಆಯಾಮಗಳ ಪರಿಶೀಲನೆ

ವಚನ ಚಳವಳಿ ಅಥವಾ ಶರಣ ಕ್ರಾಂತಿ ಎಂದೆಲ್ಲ ಕರೆಯುವ ೧೨ನೇ ಶತಮಾನದ ಬಹುಮುಖ್ಯ ವಿದ್ಯಮಾನದ ಕುರಿತು 'ಶರಣ ಕ್ರಾಂತಿ: ವಿಭಿನ್ನ ಪ್ರತಿಕ್ರಿಯೆಗಳು' ಎಂಬ ಶೀರ್ಷಿಕೆಯಡಿ ಇಲ್ಲಿ ನಾಡಿನ ೧೫ ಚಿಂತಕರ ಅಭಿಪ್ರಾಯಗಳನ್ನು ಪ್ರಶ್ನೋತ್ತರ ರೂಪದಲ್ಲಿ ದಾಖಲಿಸಲಾಗಿಉದೆ.

ಸಮಾಜದ ಪರಿಕಲ್ಪನೆಯ ಆಶಯದೊಂದಿಗೆ ಸಮಾಜದ ಪ್ರಗತಿ, ಶೋಷಣಾರಹಿತ ವ್ಯವಸ್ಥೆಗಾಗಿ ನಡೆದ ವಚನ ಚಳವಳಿಯನ್ನು 'ಕ್ರಾಂತಿ' ಎಂದು ಪರಿಗಣಿಸದೆ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವುದು ಇಡೀ ಚಳವಳಿಯನ್ನೆ ನೆಗೇಟ್ ಮಾಡಿದಂತೆ ಎಂಬುದು ಲೇಖಕರ ಖಚಿತ ನಿಲುವು ಆಗಿದೆ. ಈ ದಿಕ್ಕಿನಲ್ಲಿ ತೋರುವ 'ಹಿಂಜರಿಕೆ'ಯ ಮನೋಧರ್ಮವನ್ನು ಈ ಕೃತಿ ಪ್ರಶ್ನಿಸುತ್ತದೆ.

ವಚನ ಚಳವಳಿಯ ಹಿಂದಿನ ತಾತ್ವಿಕತೆ, ಪ್ರೇರಣೆ, ಅದರ ಹಿಂದಿದ್ದ ಸಾಂದರ್ಭಿಕ ಒತ್ತಡ, ಚಳವಳಿಯ ಸ್ವರೂಪ, ವಿನ್ಯಾಸ, ಭಾಷೆ, ಕನ್ನಡ ಸಾಹಿತ್ಯ ಅದರಿಂದ ಪಡೆದ



ಪ್ರೇರಣೆ, ಚಳವಳಿ ಸಂದರ್ಭದಲ್ಲಿ ತೀವ್ರವಾಗಿ ಕಾಡುವ ಘಟನೆ, ಅತೀ ಮುಖ್ಯವೆನಿಸುವ ವಚನ, ಸೈದ್ಧಾಂತಿಕ ಧೋರಣೆ-ಮಿತಿ, ಒಂದು ಧರ್ಮ ಅಥವಾ ಜಾತಿಗೆ ಅಂಟಿಕೊಂಡ ಬಗೆ ಮತ್ತು ಅದಕ್ಕೆ ಕಾರಣವಾದ ಸಂಗತಿಗಳು...... ಹೀಗೆ ಹತ್ತು ಹಲವು ವಿಷಯಗಳು ಪ್ರಶ್ನೋತ್ತರಗಳ ರೂಪದಲ್ಲಿ ಕೃತಿಯಲ್ಲಿ ದಾಖಲುಗೊಂಡಿದೆ.

ವಚನ ಚಳವಳಿ ಪ್ರಸ್ತುತತೆ ಕುರಿತು ಉತ್ತರಿಸುತ್ತ ಬರಗೂರು, 'ವಚನ ಚಳವಳಿಯನ್ನು ಮರೆತು ನಾವು ಮುಂದೆ ಹೋಗುವಂತಿಲ್ಲ' ಎಂದರೆ ಚಂಪಾ, 'ಎದುರಿಗಿರುವ 'ವಾಸ್ತವ'ವನ್ನು ಅಮೂಲಾಗ್ರವಾಗಿ ಬದಲಿಸುವಲ್ಲಿ ನಡೆಯುವ ಪ್ರಜ್ಞಾಪೂರ್ವಕ ಸಂಘರ್ಷ ಯಾವುದೇ ದೇಶದ ಚಳವಳಿಗೆ ಸದಾ ಪ್ರಸ್ತುತ' ಎಂಬ ಅಭಿಪ್ರಾಯ ಮಂಡಿಸುತ್ತಾರೆ.

'ವಚನ ಸಾಹಿತ್ಯ ಒಂದು ಜಾತಿಯ ಆಸ್ತಿಯಂತಾಗಿದ್ದು ಅದನ್ನು ಜಾತಿಯ ಬಂಧದಿಂದ ಬಿಡುಗಡೆಗೊಳಿಸದೆ ಸಮಾಜವಾದದೊಂದಿಗೆ ತುಲನೆ ಮಾಡಲಾಗದು' ಎನ್ನುವ ಡಿ.ಎಸ್.ನಾಗಭೂಷಣ್, 'ದೇಹವನ್ನೆ ಕೇಂದ್ರವಾಗಿಟ್ಟುಕೊಂಡು ತನ್ನ ಅಧ್ಯಾತ್ಮ ಕಟ್ಟಿಕೊಳ್ಳುವ ವಚನ ಚಳವಳಿಯ ಪರಿ ಸಮಾಜವಾದಿ ತಾತ್ವಿಕತೆಗೆ ಹತ್ತಿರವಾದದ್ದು' ಎಂದು ವಿಶ್ಲೇಷಿಸುತ್ತಾರೆ.

ವಚನ ಕಾವ್ಯವೆ, ಶಾಸ್ತ್ರವೆ ಎಂಬ ಪ್ರಶ್ನೆಗೆ ಉತ್ತರಿಸುತ್ತ, ಎಚ್.ಎಸ್.ಶಿವಪ್ರಕಾಶ್, 'ವಚನಗಳಲ್ಲಿ ಕಾವ್ಯದ ಜೊತೆ ಶಾಸ್ತ್ರಾತ್ಮಕತೆಯೂ ಉಂಟು. ನುಡಿಯಿಂದ ದೂರವಾದ ಕಾವ್ಯವನ್ನು ವಚನಕಾರರು ಖಂಡಿಸಿದರು' ಎಂದಿರುವುದು ಗಮನಾರ್ಹವಾಗಿದೆ. ಶರಣ, ದಲಿತ ಚಳವಳಿ ಖಂಡಿಸಿದ ಮಾರ್ಗಗಳ ಕುರಿತು ಮಾತನಾಡುತ್ತ ಅರವಿಂದ ಮಾಲಗತ್ತಿ, 'ಶರಣ ಚಳವಳಿಗೆ ಭಕ್ತಿಯೆ ಜೀವಾಳವಾಗಿದೆ. ದಲಿತ ಚಳವಳಿ ಭಕ್ತಿ ಮಾರ್ಗವನ್ನು ನಿರಾಕರಿಸಿ ವಾಸ್ತವತೆಯನ್ನೆ ಪ್ರಧಾನವಾಗಿಟ್ಟುಕೊಂಡಿದೆ' ಎನ್ನುತ್ತ ಸಮಗ್ರ ಕ್ರಾಂತಿ ಘಟಿಸಿದ್ದೆ ಆಗಿದ್ದಲ್ಲಿ ೧೨ನೇ ಶತಮಾನದಲ್ಲಿ ಎದುರಿಸಿದ್ದ ಸಾಮಾಜಿಕ ಸಮಸ್ಯೆಗಳನ್ನೆ ಇಂದೂ ಎದುರಿಸುವ ಸ್ಥಿತಿ ಬರಬಾರದಿತ್ತು ಎಂಬ ಮುಖ್ಯ ಪ್ರಶ್ನೆಯನ್ನು ಎತ್ತುತ್ತಾರೆ.

ವಚನ ಚಳವಳಿಯಲ್ಲಿನ ಸ್ತ್ರೀ ವಾದದ ನೆಲೆಗಳ ಕುರಿತ ಪ್ರಶ್ನೆಗೆ, 'ಹೆಣ್ಣಿನ ಪ್ರಶ್ನೆಯೆ ಮೂಲ ಕೇಂದ್ರವಾದ ಚಳವಳಿ ಯಾವುದಾದರೂ ಇದೆಯಾ' ಎಂಬ ಮರು ಪ್ರಶ್ನೆಯನ್ನು ಎಂ.ಎಸ್.ಆಶಾದೇವಿ ಮುಂದಿಡುತ್ತಾರೆ. ಇದೇ ಹೊತ್ತಿಗೆ 'ವೈರಾಗ್ಯಕ್ಕಿಂತ 'ಸಂಸಾರ' ಶ್ರೇಷ್ಠ ಎಂದು ಪ್ರತಿಪಾದಿಸುವ ಮೂಲಕ ವಚನ ಸಾಹಿತ್ಯ ಕನ್ನಡ ಜಗತ್ತಿನ ಲೋಕ ಮೀಮಾಂಸೆಯನ್ನೆ ಬದಲಿಸುವ ಶಕ್ತಿ ಪಡೆಯಿತು' ಎಂಬುದನ್ನು ಗುರುತಿಸಿದ್ದಾರೆ.

'ಸರಳವಾದ ಭಾಷೆಯನ್ನು ಗಂಭೀರ ಪ್ರಶ್ನೆಯನ್ನು ಕೇಳಬಹುದು ಎಂಬುದನ್ನು ತೋರಿಸಿಕೊಟ್ಟಿದ್ದು ವಚನ ಚಳವಳಿಯ ಹೆಗ್ಗಳಿಕೆ' ಎನ್ನುವ ಪುರುಷೋತ್ತಮ ಬಿಳಿಮಲೆ, ಅದೇ ಹೊತ್ತಿಗೆ ಈ ಚಳವಳಿ ಪತನ ಸಂಸ್ಕೃತಿಯ ಭಾಗವಾದ ಬಗ್ಗೆ ಗಾಢ ವಿಷಾದ ಸೂಚಿಸುತ್ತಾರೆ. ಮಾಲಗತ್ತಿ ವಚನ ಸಾಹಿತ್ಯದಲ್ಲಿ ಬಳಕೆಯಾಗಿರುವ ಭಾಷೆಯನ್ನು 'ಕರಳುಬಳ್ಳಿಯ ಬಂಧುತ್ವದ ಭಾಷೆ' ಎಂದು ಕರೆದಿರುವುದು ವಿಶಿಷ್ಟವಾಗಿದೆ.

ಸಿದ್ದಲಿಂಗಯ್ಯ ಅವರಿಗೆ ಶರಣ ವೈಚಾರಿಕತೆಯೊಂದೆ ಬಿಡುಗಡೆಯ ಮಾರ್ಗವಾಗಿ ಕಂಡಿದ್ದರೆ, ರಹಮತ್ ತರೀಕೆರೆ ಅವರಿಗೆ ವಚನ ಚಳವಳಿಯನ್ನು ಕೇವಲ ಸಾಹಿತ್ಯಿಕ ನೆಲೆಯಿಂದ ನೋಡುವುದು ಒಂದು ಮಿತಿಯಾಗಿ ಕಾಣಿಸಿದೆ. ವಚನ ಸಾಹಿತ್ಯದಲ್ಲಿನ ದಲಿತ, ಸ್ತ್ರೀ ಸಂವೇದನೆಗಳನ್ನು ಸರಳೀಕೃತಗೊಳಿಸುವ ಅಪಾಯಗಳ ಬಗ್ಗೆ ಒ.ಎಲ್.ನಾಗಭೂಷಣ ಸ್ವಾಮಿ ಮಾತನಾಡಿದ್ದಾರೆ.

ವಚನಗಳ ಅಧ್ಯಯನಕ್ಕೆ ಎಚ್.ಎಸ್.ರಾಘವೇಂದ್ರ ರಾವ್ ತೋರಿಸಿರುವ ದಾರಿಗಳು ಮಹತ್ವದ್ದಾಗಿದೆ. ವಚನಗಳ ಅನ್ವಯಿಕತೆ ಕುರಿತು ಅವರು ಮಾತನಾಡುತ್ತ, 'ವಚನಗಳು ನಮ್ಮ ಪ್ರಜ್ಞೆಯ ಭಾಗ, ಸಾಮಾಜಿಕ ನಡವಳಿಕೆಯ ಪ್ರೇರಕವಾಗದೆ ಇದ್ದರೆ ಹೆಚ್ಚಿನದೇನೂ ಆಗುವುದಿಲ್ಲ' ಎಂದಿರುವುದು ಮುಖ್ಯವಾದ ಮಾತಾಗಿ ಕಾಣುತ್ತದೆ.

ವಚನ ಚಳವಳಿ ತೀವ್ರ ತುಡಿತದ ನೋವಿನಿಂದ ಕೂಡಿದ ಸತ್ಯದ ಜೊತೆಗಿನ ಪ್ರಯೋಗಗಳ ಅಭಿವ್ಯಕ್ತಿ ಎಂದು ರಾಜೇಂದ್ರ ಚೆನ್ನಿ ವಿಶ್ಲೇಷಿಸಿದರೆ, ಅಕ್ಕಮಹಾದೇವಿಯ ಸ್ತ್ರೀ ಸಮಾನತೆಯ ಧ್ವನಿ ಆಂಶಿಕ ಪ್ರತೀಕವೆ ಹೊರತು ವಾಸ್ತವವಲ್ಲ ಎಂದು ಮಲ್ಲಿಕಾ ಘಂಟಿ ಅಭಿಪ್ರಾಯಪಟ್ಟಿದ್ದಾರೆ. ನಟರಾಜ್ ಹುಳಿಯಾರ್ ತಮ್ಮ 'ಮುಂದಣ ಕಥನ' ನಾಟಕಕ್ಕೆ ಈ ಒಂದು ವಚನದ ಸಾಲೆ ಹೇಗೆ ಪ್ರೇರಣೆಯಾಯಿತು ಎಂಬುದನ್ನು ವಿವರಿಸಿದ್ದಾರೆ.

ಒಟ್ಟಾರೆಯಾಗಿ ವಚನ ಚಳವಳಿ, ವಚನ ಸಾಹಿತ್ಯದ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮಾರ್ಗಸೂಚಿಯಾಗುವಂತಿದೆ. ಸಂದರ್ಶನಕ್ಕೆ ಒಳಪಟ್ಟ ಲೇಖಕರು ಪ್ರತಿಪಾದಿಸಿರುವ ವಿಷಯ ವೈವಿಧ್ಯತೆಯಿಂದ ಕೂಡಿದ್ದು ಅವರು ಬಳಸಿರುವ ಭಾಷೆ ವಿಮರ್ಶೆಯ ಭಾಷೆಯ 'ವಿಸ್ಮಯ'ದ ಸೂಚನೆಯಂತಿದೆ. ಸಂದರ್ಶನಕ್ಕೆ ಒಳಗಾದ ಲೇಖಕರ ಪಟ್ಟಿಯಲ್ಲಿ ನಟರಾಜ ಬೂದಾಳು ಅವರು ಸೇರದಿರುವುದು ಆಶ್ಚರ್ಯ ತಂದಿದೆ.

**-ಎಂ. ರಾಘವೇಂದ್ರ**

**ಪು: ಮೂಕ ಸಹ್ಯಾದ್ರಿಗೆ ಮಾತು ಕೊಟ್ಟವಳು ಡಾ|| ಕುಸುಮಾ ಸೊರಬ** ಲೇ: **ಶಾರದಾ ಗೋಪಾಲ** ಪ್ರ: **ಕನ್ನಡ ಪುಸ್ತಕ ಪ್ರಾಧಿಕಾರ,** ಬೆಂಗಳೂರು(೦೮೦- ೨೨೧೦೭೭೦೪

## ಅಪೂರ್ಣವಾದ ಒಂದು ಮಹಾಕನಸಿನ ಕಥೆ



**ಪ**ಶ್ಚಿಮಘಟ್ಟದ ಪರಿಸರ ಸಂರಕ್ಷಣೆಗಾಗಿ ಜೀವಸವೆಸಿದ ಕುಸುಮಾ ಸೊರಬ ಅವರ ಜೀವನಗಾಥೆಯನ್ನು ನಿರೂಪಿಸುವ ಈ ಕೃತಿ ಕೆ.ವಿ. ಸುಬ್ಬಣ್ಣ ಅವರ ಲೇಖನವೊಂದನ್ನು ಪೀಠಿಕೆಯನ್ನಾಗಿ ಬಳಸಿಕೊಂಡು, ಉ.ಕ. ಜಿಲ್ಲೆಯ ಪರಿಸರ ಹೋರಾಟ ಕುರಿತ ಒಬ್ಬ ಮಹಿಳೆಯ ಸಾಧನೆಯನ್ನು ದಾಖಲಿಸುತ್ತದೆ.

ಉ.ಕ.ದ ಕೆರವಳ್ಳಿಯಲ್ಲಿ ತನ್ನ ಬೇರುಹೊಂದಿದ ಕುಸುಮಾ ಹುಟ್ಟಿದ್ದು ಹುಬ್ಬಳ್ಳಿಯಲ್ಲಿ. ಬಾಲ್ಯದಲ್ಲೇ ಕೆರವಳ್ಳಿಯ ಪರಿಸರವನ್ನು ತಮ್ಮ ಕರ್ಮಭೂಮಿ ಎಂದು ಗುರುತಿಸಿಕೊಂಡಿದ್ದರು. ನರ್ಸಿಂಗ್ ಮತ್ತು ವೈದ್ಯಕೀಯ ಶಿಕ್ಷಣವೆರಡನ್ನೂ ಪಡೆದಿದ್ದರು. ಕುಸುಮಾ ಬಿಜಾಪುರದಲ್ಲಿ ನರ್ಸ್ ಆಗಿದ್ದಾಗ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಸ್ವಾತಂತ್ರ್ಯ ಸೇನಾನಿ ವೀರ ಸಾವರ್‌ಕರ್, ನೈಟಿಂಗೇಲಳ ಜೀವನಚರಿತ್ರೆಯ ಪುಸ್ತಕವಲ್ಲದೆ, ಗಾಂಧೀಜಿಯವರ ಹಿಂದ್ ಸ್ವರಾಜ್ ಮತ್ತು ರವೀಂದ್ರನಾಥ ಠಾಗೋರರ ಪುಸ್ತಕಗಳನ್ನು ಕುಸುಮಾಗೆ ನೀಡಿರುವುದನ್ನು ಶಾರದಾ ಗೋಪಾಲ ಉಲ್ಲೇಖಿಸಿದ್ದಾರೆ.

ಕುಸುಮಾ ಅವರು 'ಸ್ನೇಹಕುಂಜ' ಎಂಬ ಟ್ರಸ್ಟ್ ಸ್ಥಾಪಿಸಿ, ಹೊನ್ನಾವರ ಸಮೀಪದ ಕಾಸರಕೋಡು ಎಂಬಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸುವ ಹಂತದಲ್ಲಿ ಎದುರಿಸಿದ ಅಡ್ಡಿ-ಆತಂಕಗಳು, ಅಕೆಗೆ ಮುಂದಿನ ಸಂಕಷ್ಟಗಳನ್ನು ಎದುರಿಸಲು ಪ್ರಥಮ ಪಾಠಗಳಾದವು. ಶಿಕ್ಷಿತವರ್ಗ ಹಳ್ಳಿಗಳ ಕಡೆ ಮುಖ ಮಾಡದೆ, ಪಟ್ಟಣಗಳೆಡೆಗೆ ಆಕರ್ಷಿತವಾಗಿದ್ದರೆ ಕುಸುಮಾ ಅವರ ಗುರಿ ಹಳ್ಳಿಯಲ್ಲಿಯೇ ಆಸ್ಪತ್ರೆ ಕಟ್ಟಿಸಿ, ಬಡರೋಗಿಗಳಿಗೆ ಚಿಕಿತ್ಸೆ ನೀಡುವುದಾಗಿತ್ತು. ಈ ಮಧ್ಯೆ, ಆಕೆ ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡರು. ಕುಸುಮಾ ಅವರ ಆಸ್ಪತ್ರೆಗೆ ಬೇಕಾದ ೨೦ ಎಕರೆ ಜಾಗಕ್ಕಾಗಿ, ಆಗಿನ ಮುಖ್ಯಮಂತ್ರಿ ಗುಂಡೂರಾವ್ ಅವರು ಜಿಲ್ಲಾಧಿಕಾರಿಗೆ ಸೂಚನೆ ನೀಡಿ, ಜಾಗ ಮಂಜೂರಾದರೂ, ಮರುದಿನವೇ ಸ್ಥಳೀಯರು ಉಚ್ಚ ನ್ಯಾಯಾಲಯದಿಂದ ತಂದ ತಡೆಯಾಜ್ಞೆಯು ಪ್ರಸ್ತುತ ಸಮಾಜವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ದಾದಿಯರ ತರಬೇತಿಯನ್ನೂ ಪ್ರಾರಂಭಿಸಿದ ಕುಸುಮಾ ಅವರು, ಸಂಸ್ಥೆಯನ್ನು ಗಾಂಧೀಜಿಯವರ ವಾರ್ಧಾ ಸೇವಾಗ್ರಾಮದಂತೆ ಮಾಡುವ ಕನಸು ಹೊತ್ತು, ಅಲ್ಲಿ ದೇಶಭಕ್ತಿಗೀತೆ ಹಾಡುವುದು, ಯೋಗ, ವ್ಯಾಯಾಮ, ಶೌಚಾಲಯ ತೊಳೆಯುವುದು ಇತ್ಯಾದಿ ಕೆಲಸಗಳಲ್ಲಿ ಭೇದಭಾವವಿಲ್ಲದೆ ತೊಡಗಿಸಿಕೊಳ್ಳುವುದನ್ನು ನಿಯಮಿತಗೊಳಿಸಿದರು. ರೋಗಗಳ ಮೂಲ ಹುಡುಕಲು ಹೊರಟ ಕುಸುಮಾ ಹಳ್ಳಿಗಳಿಗೆ ಭೇಟಿ ನೀಡಿ, ಕುಡಿತದ ಸಮಸ್ಯೆ, ಅನಕ್ಷರತೆ, ಸ್ವಚ್ಛತೆಯ ಬಗ್ಗೆ ಅಜ್ಞಾನ ಇತ್ಯಾದಿಗಳನ್ನು ಮನಗಂಡು, ರೋಗಮೂಲಕ್ಕೆ ಔಷಧ ಎಂಬಂತೆ, 'ಗ್ರಾಮ ವಿಕಾಸ ಯೋಜನೆ'ಯನ್ನು ರೂಪುಗೊಳಿಸಿದರು. 'ಅಪ್ಪಿಕೋ ಚಳುವಳಿ' ಮತ್ತು 'ಪಶ್ಚಿಮ ಘಟ್ಟ ಉಳಿಸಿ' ಪಾದಯಾತ್ರೆಯಲ್ಲಿ ಪಾಲ್ಗೊಂಡರು. ಪಾನಪ್ರತಿರೋಧ ಮತ್ತು, ಕೈಗಾ ಅಣುಸ್ಥಾವರ ವಿರೋಧಿಸಿ ಚಳುವಳಿ ನಡೆಸಿದರು.

ಶರಾವತಿ ಟೇಲ್ ರೇಸ್ ಯೋಜನೆಯನ್ನು ವಿರೋಧಿಸುವ ಬಗ್ಗೆ ನ್ಯಾಯಾಲಯದ ಮೆಟ್ಟಿಲೇರಲು ಬೆಂಗಳೂರಿಗೆ ವಕೀಲರೊಂದಿಗೆ ಚರ್ಚಿಸಲು ಬಂದ ಕುಸುಮಾ, ಗಾಂಧೀಭವನದ ಸತ್ಯವ್ರತ ಅವರೊಂದಿಗೆ, ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಬೇಕಾದ ಪೂರ್ವಸಿದ್ಧತೆಗಳ ಬಗ್ಗೆ ಪ್ರಸ್ತಾಪಿಸಿ, ಇನ್ನೂ ಈ ಬಗ್ಗೆ ಚರ್ಚಿಸಬೇಕೆಂದು ಹೇಳಿ ಹಿಂದಿರುಗುವ ಸಂದರ್ಭದಲ್ಲಿ ರಾತ್ರಿ ಮಾರ್ಗಮಧ್ಯದಲ್ಲಿಯೇ ಅಪಘಾತಕ್ಕೀಡಾದರು. ಒಬ್ಬ ಮಹಿಳೆಯ ಸಾಹಸಗಾಥೆ ಅಲ್ಲಿಗೇ ನಿಂತಿತು.

ವೈಯಕ್ತಿಕ ಉದ್ಧಾರವೇ ಮಂತ್ರವಾದ ಈ ಕಾಲಘಟ್ಟದಲ್ಲಿ, ಪರಿಸರ, ಪ್ರಾಣಿಪಕ್ಷಿಗಳು, ದುರ್ಬಲರಪರ ಕಾಳಜಿ ಹೊಂದಿ ಹೋರಾಟದ ಬದುಕು ಸವೆಸಿದ ಕುಸುಮಾ ಅವರ ಜೀವನಗಾಥೆ ಕೆಲವರಿಗಾದರೂ ಮಾರ್ಗದರ್ಶಿಯಾಗಲೆಂಬ ಆಶಯವುಳ್ಳ ಈ ಹೊತ್ತಿಗೆಯನ್ನು ನೀಡಿದ ಶಾರದಾ ಗೋಪಾಲ ಅವರ ಪ್ರಯತ್ನ ಸ್ತುತ್ಯರ್ಹ. ಘಟನಾವಳಿಗಳಿಗೆ ಕಥಾನಕದ ದಿರಿಸು ತೊಡಿಸಿ ಬರೆದಿರುವುದರಿಂದ ಓದುವ ಓಟಕ್ಕೆ ಮುದ ನೀಡಿದರೂ ಕೆಲವೊಮ್ಮೆ ಮುಖ್ಯವಿಷಯಗಳು ಬದಿಗೆ ಸರಿಯುತ್ತವೆ. ಪುಸ್ತಕದಲ್ಲಿ ಕುಸುಮಾ ಅವರ ಒಂದೇ ಒಂದು ಭಾವಚಿತ್ರ ಇಲ್ಲದಿರುವುದು ಕೊರತೆಯಾಗಿ ಕಾಣಿಸುತ್ತದೆ.

ಪರಿಸರ ಸಂರಕ್ಷಣೆ, ಗ್ರಾಮ ವಿಕಾಸ ಇತ್ಯಾದಿ ವಿಷಯಗಳು ಹಿನ್ನೆಲೆಗೆ ಸರಿದಿರುವ ಈ ಸಂದರ್ಭದಲ್ಲಿ ಈ ಪುಸ್ತಕದ ಓದು ಹೊಸ ಪೀಳಿಗೆಯವರಿಗೆ ಪ್ರೇರೇಪಣೆ ನೀಡುವುದು ಎಂದು ಆಶಿಸಬಹುದು.

**-ಕೆ. ಶ್ರೀದೇವಿ**

ಪು: ಅಕ್ಕನ ಹೃದಯ ಗೀತಾಂಜಲಿ(ಕವಿತೆಗಳು) ಲೇ: ಜಂಬಣ್ಣ ಅಮರಚಿಂತ ಪ್ರ: ಎ. ರಾಜಶೇಖರ, ರಾಯಚೂರು(೯೭೪೧೧೦೮೫೨೯) ಪು: ೮೮ ಬೆ: ರೂ.೧೦೦/-

## ಅಕ್ಕನ ಹೃದಯ ನಿವೇದನೆಯ ನೆರಳು



**ಅ**ಕ್ಕ ಕವಿಗಳಿಗೆ ಬಹಳ ಹತ್ತಿರದವಳು. ಅದರಲ್ಲೂ ಹೆಣ್ಣುಮಕ್ಕಳ ಕವಿತೆಗಳಲ್ಲಿ ಒಂದಲ್ಲಾ ಒಂದು ರೂಪದಲ್ಲಿ ಸುಳಿದು ಸುತ್ತುವವಳು. ಪುರುಷರೂ ಅಕ್ಕನನ್ನು ಬೇರೆ ಬೇರೆ ರೂಪದಲ್ಲಿ 'ಚಿತ್ರಿಸಿ'ದ್ದಿದೆ. ಅದು ಹರಿಹರನಿಂದಲೇ ಆರಂಭವಾಗಿದೆ. ಕತೆ, ಕಾದಂಬರಿ, ನಾಟಕಗಳಲ್ಲಿ ಅವಳ ನಿರೂಪಣೆಗಳು ಬರೆವವರ ಮೂಗಿನ ನೇರಕ್ಕೆ ಕೆತ್ತನೆಗೊಂಡಿವೆ. ಆದರೆ, ಅವಳ ಮತ್ತು ಚೆನ್ನನ ಮಧುರ ಬಂಧದ ಮೆಲುಕನ್ನೇ ಇಡೀ ಸಂಕಲನವಾಗಿ ತಂದ ಆಧುನಿಕ ಕವಿಗಳು ಇಲ್ಲ. ಜಂಬಣ್ಣ ಅಮರಚಿಂತರ 'ಅಕ್ಕನ ಹೃದಯ ಗೀತಾಂಜಲಿ' ಈ ರೀತಿಯ ಸಂಕಲನ. ಈ ಕವಿಯ ಮರಣಾನಂತರ ಅವರ ಕುಟುಂಬ ಮತ್ತು ಗೆಳೆಯರು ಅವರಿಗೆ ಶ್ರದ್ಧಾಂಜಲಿ ರೂಪದಲ್ಲಿ ಪ್ರಕಟಿಸಿರುವ ಕೃತಿಯಾಗಿದ್ದು, ಈದರಲ್ಲಿ ಕವಿತೆಗಳ ಜೊತೆಗೆ ಅಗಲಿದ ಕವಿಯ ಬಗೆಗಿನ ಅವರ ಪತ್ನಿ-ಪುತ್ರ ಮತ್ತು ಗೆಳೆಯರ ನೆನಪಿನ ಲೇಖನಗಳೂ ಸೇರಿವೆ.

ಇಲ್ಲಿನ ಕವಿತೆಗಳ ನಿರೂಪಕಿ ಸ್ವತಃ ಅಕ್ಕ. ಶಿವನೆಡೆಗಿನ ತನ್ನ ಸೆಳೆತದ ನಿವೇದನೆ ಇಲ್ಲಿನ ಮೂಲ ಭಿತ್ತಿ. ಅದು ಪ್ರೇಮಿಯೊಬ್ಬಳ ನಿವೇದನೆಯಂತೆ ಇಲ್ಲಿ ವ್ಯಕ್ತವಾಗಿದೆ. ಕವಿ ತಾನೇ ಅಕ್ಕನ ಹೃದಯವಾಗುವ ಹಂಬಲದಿಂದ ಇದನ್ನು ಬರೆದಿದ್ದರೂ, ಹಾಗೆ ಆಗದೆ ಅಕ್ಕನ ಪರ ವಕೀಲಿ ಮಾಡುವವನಾಗಿ ಹೊರಗೇ ನಿಂತು ಬಿಡುತ್ತಾನೆ. ಇಲ್ಲಿ ಬಿಂಬಿತವಾದ ಯಾವ ಭಾವವೂ ಅಪ್ರಾಮಾಣಿಕವಲ್ಲ. ಆದರೆ, ಸ್ವತಃ ಅಕ್ಕನ ತೀವ್ರ ಭಾವದ ವಚನಗಳೇ ನಮ್ಮೆದುರಿಗಿರುವಾಗ ಅದನ್ನೂ ಮೀರಿಸುವ ತುಡಿತದ ಅಭಿವ್ಯಕ್ತಿಯ ಸವಾಲನ್ನು ಇಲ್ಲಿನ ಕವಿತೆಗಳ ವಸ್ತು ಆಹ್ವಾನಿಸುತ್ತದೆ. ಹೀಗಾಗಿ ಓದುಗರಿಗೆ ಸಹಜವಾಗಿ ನಿರೀಕ್ಷೆ ಹುಟ್ಟಿಕೊಳ್ಳುತ್ತದೆ. ಚೆನ್ನ ಮತ್ತು ತನ್ನ ನಡುವಿನ ಸಂಧಿಲ್ಲದ ಬೆಸುಗೆಯನ್ನು ಪದದ ಕುದಿಯಲ್ಲಿ ದಾಟಿಸಿದವಳು ಅಕ್ಕ. ಅಂತಹ ಅಭಿವ್ಯಕ್ತಿಯ ಮತ್ತೊಬ್ಬ ಅಕ್ಕ ಇನ್ನೂ ಹುಟ್ಟಿಲ್ಲ. ಈ ಕಾರಣದಿಂದಲೇ ಅಮರಚಿಂತರು ಅಕ್ಕನನ್ನು ಧ್ಯಾನಿಸಿಯೂ ಅಕ್ಕನಾಗಲಾರದ ಇಕ್ಕಟ್ಟನ್ನು ಅನುಭವಿಸುತ್ತಾರೆ. ಎಲ್ಲ ತೊಡಕುಗಳ ಸಂಕೋಲೆಗಳನ್ನು ಕಳಚಿ ಎಸೆದ ಅಕ್ಕನ ದಿಟ್ಟತನದೆದುರು, ಲೌಕಿಕದ ಚೌಕಟ್ಟುಗಳ ನಡುವಿನ ಪ್ರೇಮದ ಪಿಸುಮಾತುಗಳನ್ನು ನಚ್ಚಿಕೊಂಡಿರುವ ಇಂದಿನ ಕವಿಯದು ಉಸಿರಾಗದೇ, ನಿಟ್ಟುಸಿರಷ್ಟೇ ಆಗಿಬಿಡುತ್ತದೆ. ಅಲ್ಲಲ್ಲಿ, ಗಜಲ್ ಧಾಟಿಯ ಕೆಲವು ಸಾಲುಗಳು ನಮ್ಮನ್ನು ಸೆಳೆಯ ಬಲ್ಲವಾದರೂ, ಅದಕ್ಕೆ ನಾವು ಅಲ್ಲಿರುವುದು ಅಕ್ಕ ಎಂಬುದನ್ನು ಮರೆಯ ಬೇಕಾಗುತ್ತದೆ.

**ಇರುಳಲಿ ಕಣ್ಣೀರು ಸುರಿಸದಿರೆ ಮತ್ತೇನು ಮಾಡಲಿ?**
**ಅವನ ನೆನಪು ಮತ್ತೆ ಮರುಕಳಿಸಿದರೆ ನಾನೇನು ಮಾಡಲಿ?**

**ಕತ್ತಲೆ ಕಾರಿರುಳು ಅವನಿಗೆ ಬೇಡವಾದಾಗ**
**ದಾರಿಯಲಿ ಹೃದಯ ದೀಪ ಬೆಳಗದೆ ಮತ್ತೇನು ಮಾಡಲಿ?**

**ಆಡಿಕೊಳ್ಳುವರೆಲ್ಲರು, ನೋವು ತೋಡಿಕೊಂಡರೆ**
**ಕೇಳುವವರಿಲ್ಲದಾಗ, ನೋವು ನುಂಗಿಕೊಳ್ಳದೆ ಮತ್ತೇನು ಮಾಡಲಿ?**

ಅಕ್ಕ ಎಂದೂ ಹೀಗೆ ಕೊರಗಿದವಳಲ್ಲ. ಅವಳು ಪ್ರಕೃತಿಯೊಂದಿಗೆ ಮೆಲುಮಾತಿನಲ್ಲಿ 'ನೀವು ಕಾಣಿರೇ?' ಎಂದು ಕೇಳಿರಬಹುದು. ಉಳಿದಂತೆ ಅವನು ಚೆಲುವನಾಗಿ, ಚೆನ್ನಕ್ಕರಿಸಿನವನಾಗಿ, ಎರಡರ ಮುನಿಸಿನವನಾಗಿ, ತನ್ನ ಹಕ್ಕಿನವನಾಗಿ ಮತ್ತು ಲೋಕದ ಗಂಡಸರು ತನಗಾಗದ ಮೋರೆಯವರಾಗಿ ದಿಟ ನುಡಿಯಲ್ಲಿ ಸೆಟೆದು ನಿಂತವಳು. ಕವಿಯೇನೋ, ಚೆನ್ನ ಕೊನೆಗೂ ದೊರಕದೇ ಹೋದನೆಂಬ ದುಃಖದಲ್ಲಿ ಅವಳ ದುಃಖಕ್ಕೆ ಸ್ಪಂದಿಸುವ ತುಡಿತದಿಂದ ಈ ಕವಿತೆಗಳನ್ನು ಬರೆಯುತ್ತಾರೆ. ಬರೆಯುತ್ತಾ ಬರೆಯುತ್ತಾ, ಕವಿಗೆ ತನ್ನನ್ನು ಮರೆಯಲು ಸಾಧ್ಯವಾಗದೆ, ಧುತ್ತನೆ ಕಾಣಿಸಿಕೊಂಡು ಬಿಡುತ್ತಾರೆ. "ಜಾತಿ ವಿಜಾತಿ ಎನದಿರು ಜಾತ್ಯತೀತಳು ನಾನು/ ಹೆಣ್ಣು ಮಣ್ಣೆಂದೆನದಿರು ಭಾವಿಸೆ ಗಂಡುಗಲಿ ನಾನು" ಎಂಬ ಅನವಶ್ಯಕ ವಿವರಣೆಗಳು ನುಸುಳುತ್ತವೆ.

ಕವಿ, ಕಾದಂಬರಿಕಾರನಾಗಿ ಬಂಡಾಯ ಪಂಥದಲ್ಲಿ ನಂಬಿಕೆ ಇರಿಸಿ ತಮ್ಮದೇ ದಾರಿಯಲ್ಲಿ ನಡೆದ ಜಂಬಣ್ಣ ವ್ಯಕ್ತಿಯಾಗಿ ಮತ್ತು ಲೇಖಕರಾಗಿ ಜನಮೆಚ್ಚುಗೆ ಪಡೆದವರು. ೨೦೧೭ರಲ್ಲಿ ನಮ್ಮನ್ನಗಲಿದ ಇವರ ಪ್ರಾಮಾಣಿಕ ಬದುಕಿನ ಕುರಿತಾದ ಮುನ್ನುಡಿಯ ನೆನಕೆಗಳು ಅವರೆಡೆಗಿನ ನಮ್ಮ ಗೌರವವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಕವಿಯೆಡೆಗಿನ ಪ್ರೀತಿಯ ದ್ಯೋತಕವೋ ಎಂಬಂತಿರುವ ಹಿನ್ನುಡಿಯ ಮಾತುಗಳು ಕವಿತೆಯೆಡೆಗಿನ ನಿರೀಕ್ಷೆ ಹೆಚ್ಚಿಸುವ ತೊಡಕಿದೆ. ಇರಲಿ, ಇದರ ನೆಪದಲ್ಲಿ ನಾವು ಅವರ ಇತರ ಕೃತಿಗಳೆಡೆಗೆ ಮತ್ತೊಮ್ಮೆ ಭೇಟಿ ನೀಡಿ ಅವರನ್ನು ನೆನಪಿಸಿಕೊಳ್ಳೋಣ.

**-ಸಬಿತಾ ಬನ್ನಾಡಿ**

ಪು: **ಕಾಲಯಾತ್ರೆ** (ಕಾದಂಬರಿ) ಲೇ : **ಕೃಷ್ಣಮೂರ್ತಿ ಹನೂರು** ಪ್ರ: **ಅಂಕಿತ ಪುಸ್ತಕ**, ಬೆಂಗಳೂರು(೦೮೦-೨೬೬೧೭೧೦೦) ಪು: ೧೨೦ ಬೆ: ರೂ. ೧೨೦/-

## ಕಥೆಗಿಂತ ಕಥನ ರೀತಿ ಹೆಚ್ಚು ಆಕರ್ಷಕ



**ಕೃ**ಷ್ಣಮೂರ್ತಿ ಹನೂರು ಅವರ ಹೊಸ ಕಾದಂಬರಿ ಓದಿನ ಸಂತೋಷವನ್ನೂ ನಿರೂಪಣೆಯ ತಂತ್ರಗಳನ್ನು ಕುರಿತ ಕುತೂಹಲವನ್ನೂ ಹುಟ್ಟಿಸುತ್ತದೆ. ಹನೂರು ಅವರ ಕಥೆ, ಕಾದಂಬರಿಗಳು ಸಾಮಾನ್ಯವಾಗಿ ಗ್ರಾಮ ಲೋಕದ ಕಥನಗಳಾಗಿರುವುದೇ ಹೆಚ್ಚು. ಈ ಕೃತಿಯಲ್ಲಿ ಮಾತ್ರ ಆಧುನಿಕತೆ ಮತ್ತಷ್ಟು ಪ್ರಬಲಗೊಂಡು, ಮತ್ತಷ್ಟು ರೂಕ್ಷವಾಗಿ, ಭಾವಲೋಕವೂ ಮತ್ತಷ್ಟು ಯಾಂತ್ರಿಕವಾಗಿ ಹಳ್ಳಿಯ ಅಮಾಯಕ ಜೀವಿಗಳು ನಗರದಲ್ಲಿ ಅನುಭವಿಸುವ ಹೆಸರಿಲ್ಲದ ಸಂಕಟವನ್ನು ಚಿತ್ರಿಸುತ್ತದೆ. ಈ ಕೃತಿಯಲ್ಲಿ ನಡೆಯುವ ಕ್ರಿಯೆಯೆಲ್ಲವೂ ತಾರ್ಕಿಕ, ಸಮಂಜಸ, ಹಾಗಾಗಿಯೇ ಅತಿ ದಾರುಣವೂ ಆಗುತ್ತವೆ, ವರ್ತಮಾನದ ಬದುಕಿನಲ್ಲಿ ಅಜ್ಞಾತರ ಬದುಕಿನ ರೀತಿಗೆ ಒಡ್ಡಿದ ಪ್ರತಿಮೆಯೂ ಆಗುತ್ತದೆ.

ಡ್ರೈವರ್ ಮಾರುತಿ ತಳವಾರ, ಅವನ ಹೆಂಡತಿ ಯೆರಿ ಲಕ್ಷ್ಮಮ್ಮ, ಮಗಳು ಸರಸಿ, ಮಾರುತಿಯ ಶಾಲಾ ಗೆಳೆಯ, ಬುದ್ಧಿ ಬೆಳೆಯದ ಅಲ್ಲಾಭಕ್ಷ ಲಗಾಟಿ, ನಾಯಿ ಸಿಂಗ ಇವರು ಕಥನದ ಮುಖ್ಯ ಪಾತ್ರಗಳು; ಜೀವರ್ಗಿಯಿಂದ ಬೆಂಗಳೂರಿಗೆ ಬಂದು ಬೆಂಗಳೂರಿನ ಪೀಣ್ಯದ ಲಾರಿ ಆಫೀಸಿನಲ್ಲಿ ಡ್ರೈವರ್, ಕ್ಲೀನರ್ ಆಗಿ ಬದುಕು ಕಟ್ಟಿಕೊಳ್ಳುತ್ತಿರುವವರು. ತಿಂಗಳಾನುಗಟ್ಟಲೆ ಮನೆಯಿಂದ ಗಂಡ ದೂರವಿರುವಾಗ ಮನೆ ನಡೆಸಲು ಕೆಲಸ ಹುಡುಕುತ್ತ, ಲಾರಿ ಆಫೀಸಿನವನ ದಯದಿಂದ ಹರಿಶ್ಚಂದ್ರ ಘಾಟಿನಲ್ಲಿ ಕಾವಲು ಕೆಲಸ ಪಡೆದು ಯರಿಲಕ್ಷ್ಮಿ, ಸರಸಿ, ಲಗಾಟಿ ಅಲ್ಲಿ ಪ್ರತಿಷ್ಠಾಪಿತರಾಗುತ್ತಾರೆ. ಅಲ್ಲಿಗೆ ಬಂದ ದೊಡ್ಡಮನುಷ್ಯನೊಬ್ಬನ ಹೆಣವನ್ನು ಹೆಣಗಳ್ಳರು ಹೊತ್ತೊಯ್ದು, ಆ ಆಪಾದನೆ ಈ ಕುಟುಂಬದ ಮೇಲೆ ಬಂದು ಪಡಿಪಾಟಲು ಪಡಬೇಕಾಗುತ್ತದೆ. ಹಣ, ಜಾತಿ, ಅಂತಸ್ತು, ಕಾನೂನುಗಳ ಕಾರಣದಿಂದಲೇ ಅಸಮಾನತೆಗೆ ಪೋಷಣೆ ದೊರೆಯುತ್ತ ಅಮಾಯಕರು ಸಂಕಟಪಡುವುದನ್ನು ಕಾದಂಬರಿ ಚಿತ್ರಿಸುತ್ತದೆ. ತಿಳಿವಳಿಕೆ, ಶಿಕ್ಷಣ ಇವು ಮಾತ್ರ ಆತ್ಮವಿಶ್ವಾಸ ವೃದ್ಧಿಗೆ ದಾರಿ ಅನ್ನುವ ಸಾಂಕೇತಿಕ ರೂಪಕವನ್ನೂ ಸೃಷ್ಟಿಸುತ್ತದೆ.

ಹನೂರರು ಕಥೆ ಹೇಳಿರುವ ರೀತಿ ಕಥೆಗಿಂತ ಹೆಚ್ಚು ಆಕರ್ಷಕವಾಗಿದೆ. ತೀರ ಸಂಕ್ಷಿಪ್ತವಾಗಿದೆ ಅನಿಸಿದರೂ ಒಂದೊಂದೂ ಪಾತ್ರದ ಕಣ್ಣಿಗೆ ಕಾದಂಬರಿಯ ಲೋಕ ಕಾಣುವ ಬಗೆಯನ್ನು ಹನೂರರು ಚಿತ್ರಿಸುತ್ತಾರೆ. ಮಾರುತಿಯ ಪೂರ್ವಿಕರ ಕಥೆ, ಮಾರುತಿ ತಳವಾರನು ನಾಟಕದವನಾಗಿ ಪಡೆದ ಅನುಭವದಿಂದ ಮಗಳಿಗೆ, ಹೆಂಡತಿಗೆ, ಲಗಾಟಿಗೆ ಕಥೆ ಹೇಳುತ್ತ ಸುಂದರ ಲೋಕವನ್ನು ಕಟ್ಟಿಕೊಳ್ಳುವ ರೀತಿ, ಮಾತು ಬಾರದ ಸಿಂಗನ ಮನಸಿನ ಯೋಚನೆಗಳನ್ನು ಕಥೆಯ ನಿರೂಪಣೆಯ ಭಾಗವಾಗಿಸಿರುವುದು; ಪೋಲೀಸರ ಲೋಕ, ಲಾರಿಯವರ ಲೋಕ, ಮುನಿಸಿಪಾಲಿಟಿ ಕೌನ್ಸಿಲರು, ಎಂಎಲ್‌ಎಗಳ ಲೋಕ ಇವೆಲ್ಲ ಕಥನದಲ್ಲಿ ಮಿಂಚಿ ಮೆರುಗು ತರುತ್ತವೆ. ವಾಸ್ತವ ಮತ್ತು ಕಾಲ್ಪನಿಕಗಳ ಮಿಶ್ರಣವೂ ಗಮನ ಸೆಳೆಯುತ್ತದೆ.

ಹರಿಶ್ಚಂದ್ರ ಘಾಟಿನ ಅರಳಿಮರದ ಕಟ್ಟೆ, ಆಂಧ್ರದ ಗಡಿಯಲ್ಲಿ ಲಾರಿ ಪಯಣದ ವರ್ಣನೆ, ಮದುವೆ ಮನೆ ಮತ್ತು ಬೇಕರಿ, ಇಂಥ ಹಲವು ಎಡೆಗಳಲ್ಲಿ ಹನೂರರ ಭಾಷೆಗೆ ಕಾವ್ಯದ ಸ್ಪರ್ಶ ದೊರೆಯುತ್ತದೆ. 'ಗ್ಲೋಬೀಕರಣದ ತೊತ್ತಳದುಳಿತದಡಿ ನುಚ್ಚುನೂರಾಗುತ್ತಿರುವ ನಗರ'ದ ಚಿತ್ರಣ ಹಾಗೂ 'ಮಾನವೀಯತೆಯ ಕೊನೆಯ ವಾರಸುದಾರರಾದ, ವಿನಾಶಗೊಳ್ಳುತ್ತಿರುವ ಹಳ್ಳಿಯ ಅಮಾಯಕರ' ಚಿತ್ರಣ ಈ ಕಾದಂಬರಿಯ ಹಿರಿಮೆ ಎಂದು ಎಚ್. ಎಸ್. ಶಿವಪ್ರಕಾಶ್ ಗುರುತಿಸಿದ್ದಾರೆ. ಕಾಲದ ಯಾತ್ರೆಯಲ್ಲಿ ವಿಷಾದವೇ ಸ್ಥಾಯಿ ಅನಿಸುತ್ತದೆ.

ಮೊದಲು ಸಣ್ಣಕಥೆಯಾಗಿದ್ದುದನ್ನು ವಿಸ್ತರಿಸಿ ಕಾದಂಬರಿಯಾಗಿಸಿದ್ದೇನೆ ಎಂದು ಹನೂರರು ಹೇಳಿದ್ದಾರೆ. ಇವರ ಈವರೆಗಿನ ಕಾದಂಬರಿಗಳಿಗಿಂತ ಇದು ಬೇರೆಯದೇ ಪಾಕ. ಸಣ್ಣಕಥೆಗೆ ಈಗ ಸರೋವರದ ವಿಸ್ತಾರ ದೊರೆತಿದೆ. ಪಾತ್ರಗಳ ಮನೋಲೋಕ, ವರ್ತನೆ ಇವುಗಳೆಲ್ಲ ಹೆಚ್ಚು ಖಚಿತವಾಗಿ ಚಿತ್ರಣಗೊಂಡಿವೆ. ವಿಸ್ತಾರದ ಹಾಗೇ ಆಳವೂ ಹೆಚ್ಚಾಗಿದ್ದಿದ್ದರೆ ಅನ್ನುವ ಬಯಕೆ ಓದಿ ಮುಗಿಸಿದ ಮೇಲೆ ಸುಳಿದಿತ್ತು.

**-ಓ.ಎಲ್. ನಾಗಭೂಷಣ ಸ್ವಾಮಿ**

'ಹೊಸ ಮನುಷ್ಯ' ಓದುಗರೆಲ್ಲರಿಗೂ ಕ್ರಿಸ್‌ಮಸ್
ಹಬ್ಬದ ಹಾರ್ದಿಕ ಶುಭಾಶಯಗಳು



-ಪ್ರೊ. ಎಚ್, ಸಿದ್ಧೇಗೌಡ
ಮತ್ತು ಕುಟುಂಬ
ಚನ್ನರಾಯಪಟ್ಟಣ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳು



–ಎಸ್.ಬಿ. ರಮೇಶ್
ಮತ್ತು ಕುಟುಂಬ
ಶಿವಮೊಗ್ಗ

'ಹೊಸ ಮನುಷ್ಯ; ಓದುಗರೆಲ್ಲರಿಗೂ
'ವಿಶ್ವಮಾನವ ದಿನಾಚರಣೆ'ಯ ಶುಭಾಶಯಗಳು



**ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ**

# ೭೨, 'ಸರ್ವೋದಯ', ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,
ಬಸವನಗುಡಿ, ಬೆಂಗಳೂರು–೫೬೦೦೦೪

**ತಿಂಗಳ ಕೊನೆಯ ಸಾಲುಗಳು**



ಪುರಾತನವಾದೆಂದ ಮಾತ್ರಕ್ಕೆ ಸತ್ಯವೆಂದು ಭಾವಿಸಬೇಡಿ. ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡು ಹಿಡಿದ ಸತ್ಯಗಳು ಹಳೆಯ ಅರ್ಧ ಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ, ಧರ್ಮ ಪ್ರಪಂಚದಲ್ಲೇಕೆ ಹಾಗಾಗಬಾರದು? ವೇದವು ಅನಾದಿಯಾದರೆ ಅನಂತವೂ ಆಗಿರುವುದಲ್ಲವೆ? ವೇದ ಪೂರೈಸಿದ ಗ್ರಂಥವಲ್ಲ. ವೇದದ ಕಟ್ಟ ಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಇಂದಿಗೂ ನಾಳೆಗೂ ಮುಂದುವರೆಯುತ್ತದೆ. ಹಾಗೆಯೇ ಋಷಿಗಳೂ, ಆಚಾರ್ಯರುಗಳೂ ಅಂದಿಗೇ ಪೂರೈಸಿಲ್ಲ; ಕೊನೆಗೊಂಡಿಲ್ಲ. ಇಂದಿಗೂ, ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ ಸಂಕುಚಿತ ಬುದ್ಧಿಯನ್ನು ದೂರ ಮಾಡಿ. ಹೃದಯಜೀವನ ಹಳೆಯನೀರಿನ ಕೊಳಕು ಕೊಳವಾಗದಿರಲಿ. ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛ ಸಲಿಲ ಸ್ರೋತವಾಗಲಿ

-ಕುವೆಂಪು

ಶುಭಾಶಯಗಳೊಂದಿಗೆ,

**ಎಂ. ಬಸವಯ್ಯ**

ಸಂಸ್ಥಾಪಕರು, ಬಾಪೂಜಿ ವಿದ್ಯಾ ಸಂಸ್ಥೆ, ತುಮಕೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara,

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)